CONTENTS

		PAGES
1	General Discussion on the Annual Financial Statement of the M. S. E. B. for 1969-70—(Debate Concluded) ...	79—107
	(i) Starred Questions and Answers ...	107—124
	(ii) Questions for Answers on the day (but not taken up)...	124—127
2	(i) Procedure for taking up Question Hour ...	128
	(ii) Projects on the Cauvery Basin ...	128—130
	(iii) Motion to suspend of rules for discussion on the Resolutions relating to the River Projects ...	130—133
	(iv) Notice of adjournment motion *re:* Strike by the Students of the Bangalore University ...	133—135
3	Papers laid on the Table :—	
	Costing sheet of Jawar in pursuance of reply to Question No. 66 on 25th August 1969 ...	135
4	Nineteenth Report of the Business Adivsory Committee—(Adopted) ...	135
5	Mysore Irrigation (Levy of Betterment Contribution and Water Rate) (Amendment) Bill, 1969—(Motion to consider—Debate not concluded) ...	136—166

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, the 3rd September 1969

The House met in the Assembly Chamber, Vidhana Soudha, Bangalore, at Eleven of the Clock.

MR. DEPUTY SPEAKER (SRI D. MANJUNATH) in the Chair.

General consideration of the Annual Financial Statement of the M. S. E. B. for 1969-70

(Debate contd.)

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ),—ಮಾನ್ಯ ಅಧ್ಯಕ್ಷರೇ, ಇಂದು ಎಲೆಕ್ಟ್ರಿಸಿಟಿ ಬೋರ್ಡಿನ ವಾರ್ಷಿಕ ವರದಿ ನಮ್ಮ ಮುಂದೆ ಬಂದಿದೆ. ಆ ವಿಚಾರದಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಮಾಡಬೇಕೆಂದು ನಾನು ಪ್ರಯತ್ನಪಡುತ್ತಿದ್ದೇನೆ. ಸರ್ಕಾರದವರು ಎಲೆಕ್ಟ್ರಿಸಿಟಿ ಬೋರ್ಡನ್ನು ಬೇರೆಯಾಗಿ ಮಾಡಿ ಅಲ್ಲಿ ಅದು ಒಂದು ಸ್ವಂತವಾಗಿ ವ್ಯವಹಾರ ಮಾಡತಕ್ಕ ಸಂಸ್ಥೆಯಾಗಿ ಇರಬೇಕು ಮತ್ತು ಅದು ಒಂದು ವ್ಯಾಪಾರದ ಸಂಸ್ಥೆ ರೂಪದಲ್ಲಿ ನಡೆಯತಕ್ಕ ನೀತಿಯನ್ನು ಹೊಂದಿರಬೇಕು ಎಂದು ಆ ಬೋರ್ಡನ್ನು ಸ್ಥಾಪನೆ ಮಾಡಿದ್ದಾರೆ. ಬೋರ್ಡ್ ಸ್ಥಾಪನೆಯಾಗುವ ಕಾಲದಲ್ಲಿ ಯಾವ ಮಟ್ಟದಲ್ಲಿ ಆ ಬೋರ್ಡ್ ನಡೆಯುತ್ತಿತ್ತು, ಇತ್ತೀಚೆಗೆ ಅದು ಸಂಪೂರ್ಣವಾಗಿ ಬದಲಾವಣೆ ಹೊಂದಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಆದರೆ ಎಲೆಕ್ಟ್ರಿಸಿಟಿ ಬೋರ್ಡ್ ಕನ್‌ಸಲ್‌ಟೇಟಿವ್ ಕಮಿಟಿಯಲ್ಲಿ ನನಗೂ ಸಹ ಒಂದೆರಡು ವರ್ಷಗಳ ಕಾಲ ಕೆಲಸಮಾಡುವ ಅವಕಾಶ ಸಿಕ್ಕಿತ್ತು. ಆ ಸಂದರ್ಭದಲ್ಲಿ ಅಲ್ಲಿಯ ವ್ಯವಹಾರಗಳನ್ನು ನೋಡಿದ್ದರಲ್ಲಿ ಅವರಿಗೆ ಸಂಪೂರ್ಣವಾಗಿರತಕ್ಕ ಸ್ವಾತಂತ್ರ್ಯ ಸಿಕ್ಕಿರುವ ರೀತಿ ಅಲ್ಲಿನ ವ್ಯವಹಾರ ನಡೆಯುತ್ತಿದೆಯೆಂದು ನಾನು ಹೇಳಬಹುದು. ಇದರಲ್ಲಿ ಸರ್ಕಾರದವರ ತಪ್ಪುಗಳೂ ಸಹ ಕೆಲವು ಇವೆ. ಸರ್ಕಾರದವರು ಬೋರ್ಡಿಗೆ ನಾಮಿನೇಟ್ ಮಾಡುವಾಗ ಬಹಳ ಮುಖ್ಯವಾಗಿರತಕ್ಕ ರೈತರ ಪ್ರತಿನಿಧಿಗಳಿಗೆ ಅವಕಾಶವನ್ನು ಕೊಡಬೇಕಾಗಿತ್ತು. ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಅದರ ಉತ್ಪತ್ತಿ ಮತ್ತು ಅದರ ವ್ಯವಹಾರಕ್ಕೆ ಅನುಗುಣವಾಗಿ ಖರ್ಚು ಮಾಡಬೇಕೇ ವಿನಹ ವ್ಯಾಪಾರ ಸಂಸ್ಥೆಯಾಗಿ ಲಾಭದ ದೃಷ್ಟಿ ಇರಬಾರದು. ನಾನು ಅಕಸ್ಮಾತ್ ಜಮೀನು ಮಾಡುತ್ತೇನೆಂದರೆ, ನನಗೆ ಎಷ್ಟು ಜನರು ಬೇಕೋ ಅಷ್ಟು ಜನರನ್ನು ಇಟ್ಟುಕೊಂಡು ವ್ಯವಸಾಯ ಮಾಡಬೇಕೇ ವಿನಹ ಅದನ್ನು ಬಿಟ್ಟು ನನಗೆ ಇಷ್ಟಬಂದ ರೀತಿಯಲ್ಲಿ ಜನರನ್ನು ನೇಮಕ ಮಾಡಿಕೊಂಡು ಇಷ್ಟಬಂದ ರೀತಿಯಲ್ಲಿ ಸಂಬಳ ಕೊಡುತ್ತಾ ಹೋದರೆ ನನ್ನ ಜಮೀನೇ ಉಳಿಯುವುದಿಲ್ಲ. ಆ ರೀತಿ ಮಾಡಬೇಕೆಂದು ಸರ್ಕಾರದವರು ಅದನ್ನು ಇಟ್ಟುಕೊಂಡಿರುತ್ತಾರೆ. ನನ್ನ ಸ್ನೇಹಿತರು ಹೇಳಿದಹಾಗೆ 800—900 ರೂಪಾಯಿಗಳಷ್ಟು ಆನರರಿಯಮನ್ನು ಸಂಬಳ ರೂಪದಲ್ಲಿ ಚೇರ್‌ಮನ್‌ಗೆ ಕೊಡುವ ಸಂದರ್ಭ ಹೋಗಿ ಇವತ್ತು 2 ಸಾವಿರ, 3 ಸಾವಿರ ರೂಪಾಯಿಗಳಷ್ಟು ಸಂಬಳ ಕೊಟ್ಟು ಅಧಿಕಾರಿಗಳನ್ನು ನೇಮಿಸುವುದು ಆಗಿದೆ. ಜೊತೆಗೆ ಚೇರಮನ್ನರನ್ನು ನೇಮಕಮಾಡುವಾಗ ಯಾವ ಒಂದು ನೀತಿಯನ್ನೂ ಇಟ್ಟುಕೊಳ್ಳದೆ ಯಾವುದೋ ಒಂದು ಪ್ರಭಾವಕ್ಕೊಳಗಾಗಿಯೋ ಏನೋ ಕಾಯಿದೆ ವ್ಯವಹಾರ ಜ್ಞಾನ ಮತ್ತು ದೇಶದ ಪರಿಸ್ಥಿತಿ ತಿಳಿಯುವೇ

(ಶ್ರೀ ಕೆ. ಎನ್. ವೀರಪ್ಪಗೌಡ)

ಇರುವವರನ್ನು ನೇಮಕ ಮಾಡುವ ಪರಿಸ್ಥಿತಿ ಬಂದಿದೆ. ಎಲೆಕ್ಟ್ರಿಸಿಟಿ ಬೋರ್ಡ್ ಆಡಳಿತದಿಂದ ಅಷ್ಟಾಗಿ ಪ್ರಯೋಜನವಾಗಲಿಲ್ಲ. ಈ ದೇಶದಲ್ಲಿ ಹೆಚ್ಚಿಗೆ ತಿಳುವಳಿಕೆ ಇರುವವರು, ವ್ಯವಹಾರವನ್ನು ಅರಿತಿರುವವರೂ ಇದ್ದಾರೆ. ವಿಷಯಗಳನ್ನು ಕೂಲಂಕಷವಾಗಿ ಜನಗಳಿಗೆ ಹೇಳಿ, ಬಂದಿರತಕ್ಕವರಿಗೆ ಸಮಾಧಾನ ಹೇಳಿ ಅವರು ಏನಾದರೂ ಚಾರ್ಜು ಜಾಸ್ತಿ ಮಾಡಿದ್ದರೆ ಅದನ್ನು ಒಪ್ಪಿಸುವ ರೀತಿಯಲ್ಲಿ ಹೇಳುವ ತಾಳ್ಮೆ ಅವರಿಗೆ ಇರಬೇಕು. ಇವತ್ತು ಕೆಲವು ಸದಸ್ಯರು ಚೇರಮನ್ನರನ್ನು ನೋಡಲಿಕ್ಕೆ ಹೋದಾಗ ಅಲ್ಲಿನ ಚೇರಮನ್ ಅಧಿಕಾರದಿಂದ ಹೇಳುವ ಉತ್ತರವನ್ನು ಇಲ್ಲಿ ಯಾರಾದರೂ ಕೇಳಿದರೆ ನಿಜವಾಗಿ ವ್ಯಸನಪಡಬೇಕಾಗುತ್ತದೆ. ಶಾಸಕರಾದ ನಮಗೆ ಈ ರೀತಿ ನಾಮಿನೇಟೆಡ್' ಒಬ್ಬ ಚೇರ್‌ಮನ್ ಅವರು ಇನ್‌ಸಲ್ಟ್ ಆಗುವ ರೀತಿಯಲ್ಲಿ ಮಾತನಾಡುವುದಕ್ಕೆ ಹೊರಟರು ಎಂಬುದಾಗಿ ಆಗಬಾರದು. ದೇಶದಲ್ಲಿ ಜನ ಏನು ತಿಳಿಯುತ್ತಾರೆಂದು ನಾನು ಹೇಳಬೇಕಾಗಿದೆ. ಈ ದೃಷ್ಟಿಯಿಂದ ಎಲೆಕ್ಟ್ರಿಸಿಟಿ ಬೋರ್ಡ್ ಸರಿಯಾದ ರೀತಿಯಲ್ಲಿ ಕೆಲಸಮಾಡುವ ವ್ಯವಸ್ಥೆ ಇಲ್ಲ. ನಾನು ಕನ್‌ಸರ್ವೇಟಿವ್ ಕಮಿಟಿಯಲ್ಲಿದ್ದಾಗ ಅನೇಕ ಸಾರಿ ಇಂತಹ ವಿಚಾರಗಳನ್ನು ನೋಡಿದ್ದೇನೆ.

ಇನ್ನೊಂದು ವಿಷಯ. ಕಲ್ಕತ್ತಾ, ಬೊಂಬಾಯಿಗಳಿಂದ ಯಾರ್ಯಾರೋ ಏಜೆಂಟುಗಳು ಸೀದಾ ವಿಮಾನದಲ್ಲಿ ಇಲ್ಲಿಗೆ ಬರುತ್ತಾರೆ. ಅವರು ಅಲ್ಲಿಗೆ ಹೋದ ಕಾಲದಲ್ಲಿ ಯಾವ ಪ್ರತಿನಿಧಿ ಹೋದರೂ ಅವಕಾಶ ಸಿಗುವುದಿಲ್ಲ. ಅವರು ಬರುವುದು ನಮ್ಮ ಕಂಪೆನಿಯಲ್ಲಿ ಇಂತಿಂಥ ಸಾಮಾನುಗಳನ್ನು ತಯಾರು ಮಾಡುತ್ತೇವೆ, ನಮಗೆ ಆರ್ಡರ್ಸ್ ಕೊಡಿ ಎಂದು ಕೇಳುವುದಕ್ಕೆ ಬರುತ್ತಾರೆ. ಅವರಿಂದ ಕೊಟೇಷನ್ ಕಾಲ್‌ಫಾರ್ ಮಾಡಿ, ಆಮೇಲೆ ಅವರಿಂದ ಸಾಮಾನುಗಳನ್ನು ತರಿಸಿ ಸ್ಟೋರ್ ರೂಂನಲ್ಲಿ ಡಂಪ್ ಮಾಡುತ್ತಾರೆ. ಆ ಸಾಮಾನುಗಳ ಅವಶ್ಯಕತೆ ಇದೆಯೋ ಇಲ್ಲವೋ ನೋಡುವುದಿಲ್ಲ. ನಮ್ಮಲ್ಲಿ ಇರುವ ಬಂಡವಾಳವೆಷ್ಟು ? ಸಾಲ ಮಾಡಿದರೆ ಅದಕ್ಕೆ ಬಡ್ಡಿ ಎಷ್ಟು ಕೊಡಬೇಕಾಗುತ್ತದೆ ಎನ್ನುವ ಅಭಿಪ್ರಾಯ ಅವರಿಗೆ ಇರುವುದಿಲ್ಲ. ಇವತ್ತು ಎಲೆಕ್ಟ್ರಿಸಿಟಿ ವಿಷಯದಲ್ಲಿ ರೇಟ್ ಜಾಸ್ತಿ ಮಾಡಿರುವುದನ್ನು ಯೋಚನೆಮಾಡಿ ನೋಡಿದರೆ, ಅದಕ್ಕೆ ನಿಜವಾದ ಕಾರಣ, ಹೇರಳವಾಗಿ ಖರ್ಚು ಜಾಸ್ತಿಮಾಡುವುದು ಆಗಿದೆ. ಅಲ್ಲಿ ಬೇಕಾದಷ್ಟು ಅವ್ಯವಸ್ಥೆ ಇವೆ.

ಅವರು ಎಲ್ಲಾ ಇಂಡಿಪೆಂಡೆಂಟ್ ಆಗಿ ಬಿಟ್ಟಿದ್ದಾರೆ. ಕೊನೆ ಕೊನೆಯಲ್ಲಿ ನಮಗೆ ಕೇಳುವುದಕ್ಕೂ ಏನೂ ಅಧಿಕಾರವಿರುವುದಿಲ್ಲವೆಂದು ಕಾಣುತ್ತದೆ. ಈ ರೀತಿಯಲ್ಲಿ ವ್ಯವಹಾರ ನಡೆಯುತ್ತಾ ಹೋದರೆ, ಈ ವಿಷಯದಲ್ಲಿ ಸರ್ಕಾರದವರಿಗೆ ಕಂಟ್ರೋಲ್ ಇಲ್ಲವೇ ಎಂಬ ಅನುಮಾನ ಬರುತ್ತದೆ. ನಾನಾದರೂ ತಿಳಿದುಕೊಂಡಿದ್ದೇನೆ, ಸರ್ಕಾರದವರಿಗೆ ಸಾಕಷ್ಟು ಕಂಟ್ರೋಲ್ ಇದೆಯೆಂದು, ಮಾನ್ಯ ಮಂತ್ರಿಯವರು ಆ ಕಡೆ ದೃಷ್ಟಿ ಇಟ್ಟಿಲ್ಲವೆಂದು ಕಾಣುತ್ತದೆ. ಅನೇಕರು ಹೇಳುತ್ತಾರೆ. ಸರ್ಕಾರದವರು ಸಬ್ಸಿಡಿ ಕೊಟ್ಟು ಮಿನಿಮಂ ಚಾರ್ಜಸ್ ಕಡಿಮೆ ಮಾಡಿ ಎಂದು ಹೇಳುತ್ತಿದ್ದಾರೆ. ನನಗೆ ಇದು ಆಶ್ಚರ್ಯವಾಗಿ ಕಾಣುತ್ತದೆ. ಅದರದೊಂದು ವ್ಯಾಪಾರ ಸಂಸ್ಥೆ ನಿಮ್ಮ ಊರಿಗೆ ಲೈನ್ ಹಾಕಬೇಕಾದರೆ, ಎಷ್ಟು ಖರ್ಚಾಗುತ್ತದೆ; ಎಷ್ಟು ಮಿನಿಮಂ ಆಗುತ್ತದೆ, ಅಷ್ಟಕ್ಕೆ ಅಗ್ರಿಮೆಂಟ್ ಬರೆದು ಕೊಟ್ಟರೆ ಹಾಕುವಂತ ಪದ್ಧತಿ ಎಲೆಕ್ಟ್ರಿಸಿಟಿ ಬೋರ್ಡಿನವರಲ್ಲಿ ಇದೆ. ಸರ್ಕಾರದವರು ಯಾರ ಮೇಲಾದರೂ ಟ್ಯಾಕ್ಸ್ ಹಾಕಿ ಸಬ್ಸಿಡಿ ಕೊಟ್ಟು ಕಡಿಮೆಮಾಡಬೇಕೆಂದು ಹೇಳಿದರೆ, ಅದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಆದ್ದರಿಂದ ನಾನಾದರೂ ಹೇಳುತ್ತೇನೆ— ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಆಗತಕ್ಕ ಲಾಭ ನಷ್ಟಗಳಿಗೆ ಅವರೇ ಹೊಣೆಯಾಗಬೇಕು. ಇವತ್ತು ಮಿನಿಮಂ ಚಾರ್ಜಸ್ ಕಡಿಮೆ ಮಾಡುವುದಕ್ಕೋಸ್ಕರ ಒಂದು ಕಮಿಟಿ ಮಾಡಿ. ಇವತ್ತು ಅಲ್ಲಿ ನೇಮಕಾತಿಗಳ ಬಗ್ಗೆಯೂ ಕೂಡ ಸರಿಯಾದ ಒಂದು ಪದ್ಧತಿ ಇಲ್ಲ. ಇವತ್ತು ನನಗೆ ಬೇಕಾದವನು ಯಾರಾದರೂ ಇದ್ದರೆ, ಅಲ್ಲಿ ಅವನು ಒಂದು ರಿಪೋರ್ಟು ಮೇಲಾಧಿಕಾರಿಗಳಿಗೆ ಕಳಿಸುತ್ತಾನೆ— ನನಗೆ ಆಗತ್ಯವಾಗಿ ಎರಡು ಹ್ಯಾಂಡ್ಸ್ ಕೊಡಬೇಕು ಎಂದು. ನಂತರ ಎರಡು ತಿಂಗಳು ಆದ ಮೇಲೆ ಪ್ರಪೋಸಲ್ಸ್ ಪರ್ಮನೆಂಟಾಗಿ ಮಾಡಬೇಕಾಗಿದೆ. ಈ ರೀತಿ ಎಲ್ಲಾ ಮಾಡಿದಮೇಲೆ ಅಪ್ಲಿಕೇಷನ್ಸ್ ಕಾಲ್ ಫಾರ್‌ಮಾಡುತ್ತಾರೆ. ಆದರೆ ಇವರು ಈ ಅಡ್ವರ್ಟೈಸ್‌ಮೆಂಟ್ ಮಾಡಿದ್ದನ್ನು ನೋಡಿಕೊಂಡು ಕೆಲವು ಬಡವರು ನಮ್ಮಂತವರ ಹತ್ತಿರ ಬಂದು—ಸ್ವಾಮಿ, ಅಲ್ಲಿ ಕೆಲಸಗಳಿಗೆ ಕಾಲ್ ಫಾರ್ ಮಾಡಿದ್ದಾರೆ, ನಮಗೆ ಒಂದು ಅವಕಾಶ ಮಾಡಿಕೊಡಿ. ಎಂದು ಕೇಳುವರು. ಆದರೆ ಅಲ್ಲಿ ಮೊದಲೇ ನೇಮಕಮಾಡಿಕೊಂಡಿರುವವರಿಂದ ಅರ್ಜಿ ಹಾಕಿಸಿ ಅವರನ್ನೇ ಅಪಾಯಿಂಟ್‌ಮಾಡಿಕೊಳ್ಳುತ್ತಾರೆ. ಈ ರೀತಿ ತಮ್ಮ ಸ್ವೈನ್ಯವನ್ನೇ ಬೆಳೆಸಿಕೊಂಡಿದ್ದಾರೆ. ಅಲ್ಲಿ ಯಾವ ಒಂದು ನೀತಿಯೂ ಇಲ್ಲ, ಯಾವ ಒಂದು ಕಮಿಟಿಯೂ ಇಲ್ಲ. ನಾನು ತಿಳಿದುಕೊಂಡಿದ್ದೇನೆ. ಸುಮಾರು 8– 9 ಸಾವಿರ ಜನರು ಡಿಪ್ಲೋಮಾ ಹೋಲ್ಡರ್ಸ್ ಕೆಲಸವಿಲ್ಲದೆ, ಸಂಬಳ ತೆಗೆದುಕೊಳ್ಳ

ತ್ತಿದ್ದಾರೆಂದು. ಈ ಒಂದು ಎಲೆಕ್ಟ್ರಿಸಿಟಿ ಬೋರ್ಡ್ ಎನ್ನತಕ್ಕಂತದ್ದು, ಒಂದು ಸಂಸಾರವನ್ನು ಬೆಳೆಸತಕ್ಕ ರೀತಿಯಲ್ಲಿ ಇಟ್ಟುಕೊಂಡು, ಪೂರ್ತಿಯಾಗಿ ಎಷ್ಟು ಖರ್ಚಾದರೂ ಕೂಡ, ಯೋಚಿಸುತ್ತಿಲ್ಲ. ಖರ್ಚುಕಡಿಮೆಮಾಡುವ ಯೋಚನೆ ಇಲ್ಲ. ಅವರಲ್ಲೂ ಮೊದಲನೆಯದಾಗಿ ರೈತರಮೇಲೆ ಕಡಿಮೆ ದರವನ್ನು ಹಾಕಬೇಕು. ಇವತ್ತು ಅವರಿಗೆ ಯಾವುದಾದರೂ ಲುಕ್ಸಾನು ಆಗುತ್ತದೆ ಎನ್ನುವ ಸಂದರ್ಭ ಬಂದಾಗ ಅವರು ಸ್ವಲ್ಪವಾದರೂ ಅದನ್ನು ಖರ್ಚುಕಡಿಮೆ ಮಾಡುವುದನ್ನು ಯೋಚಿಸಿದ್ದಾರೆಯೋ ಎಂಬುದನ್ನು ಅವರಿಗೆ ಶಕ್ತಿ ಇದ್ದರೆ ಹೇಳಲಿ. ಇವತ್ತು ಇಲ್ಲಿ ಅನೇಕ ಜನರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಶಿವಮೊಗ್ಗದಲ್ಲಿ ಒಂದು ಕಡೆ, 50 ಲೀಟರ್ ಪೆಟ್ರೋಲ್ ಹಾಕುವ ಬದಲು, 350 ಲೀಟರ್ ಹಾಕಿಸಿ, ಆ 300 ಲೀಟರ್ ಪೆಟ್ರೋಲನ್ನು ಬೇರೆ ಕಡೆ ಮಾರಿದ್ದಾರೆಂದು ತಿಳಿದುಬಂದಿದೆ. ಇವರಿಗೆ ಎಫೀಸಿಯಂಟಾಗಿ ನಡೆಸಲು ಕೊಟ್ಟರೆ, ಇವರು ಎಲ್ಲಾ ಮೊನೋಪಲಿ ಮಾಡಿಬಿಟ್ಟಿದ್ದಾರೆ. ನಾವು ಅನೇಕ ವೇಳೆ ಏನಾದರೂ ಇಂಥ ಕೇಸುಗಳ ಬಗ್ಗೆ ಪತ್ರ ಬರೆದರೆ, ಸರಿಯಾದ ಕ್ರಮ ತೆಗೆದುಕೊಳ್ಳುವುದಿಲ್ಲ. 13–5–69ರಲ್ಲಿ ಒಂದು ಪತ್ರ ನಾನು ಬರೆದಿದ್ದೇನೆ ಸರ್ಕಾರದ ನೀತಿಯಂತೆ 3 ವರ್ಷದ ನಂತರ ಬದಲಾವಣೆ ನೀತಿ ನಿಮ್ಮಲ್ಲಿಲ್ಲವೇ ? ಇಂಥಿಂತಹ ಕಡೆಗಳಲ್ಲಿ ಬಹಳ ತೊಂದರೆಯಾಗಿದೆ, ಅದಕ್ಕೆ ಏನು ಹೇಳುತ್ತೀರಿ? ಎಂದು ಕೇಳಿದರೆ, ಎರಡು ತಿಂಗಳಮೇಲೆ ಉತ್ತರ ಬರುತ್ತದೆ ಅದನ್ನು ಕನ್‌ಸರ್ನ್ಡ್ ಆಫೀಸರ್ಸ್‌ಗೆ ಕಳಿಸಿದ್ದೇವೆಂದು. ಯಾವುದೂ ರುಜು ವಾತು ಆಗಿಲ್ಲ, ಸ್ಪೆಸಿಫಿಕ್ಕಾಗಿ ಏನಾದರೂ ಕೊಟ್ಟರೆ ಎನ್‌ಕ್ವಾಯರಿ ಮಾಡುತ್ತೇವೆಂದು ಹೇಳುತ್ತಾರೆ. ಲೈನು ಹಾಕುವಾಗಲೂ, ಹಳ್ಳಿಯವರ ಗಾಡಿ ಉಪಯೋಗಿಸಿಕೊಂಡು ವೈಯರ್, ಪೋಲು ತಗೆದುಕೊಂಡು ಹೋಗಿ, ನಂತರ ಅವಕ್ಕೆ ಇಲ್ಲಿ ದುಡ್ಡು ತೆಗೆದುಕೊಳ್ಳುತ್ತಾರೆ. ನಮ್ಮಲ್ಲಿ ಒಂದು ಕಡೆ ಟೂರಿಂಗ್ ಟಾಕೀಸ್ ಬಂದಾಗ 5 ನಿಮಿಷಕ್ಕೊಮ್ಮೆ ಕರೆಂಟ್ ಹೋಗಲಿಕ್ಕೆ ಪ್ರಾರಂಭವಾಯಿತು ಯಾವಾಗಲೂ ಹೀಗೆ ಆಗುತ್ತಿರಲಿಲ್ಲ. ಟೂರಿಂಗ್ ಟಾಕೀಸ್ ಬಂದಮೇಲೆ ಹೀಗೆ ಆಗಲು ಕಾರಣವೇನೆಂದು ನಾನು ಆಪರೇಟರ್‌ನ್ನು ಕೇಳಿದರೆ, ಅವರು ಏನೂ ಇಲ್ಲವಲ್ಲ ಎಂದು ಹೇಳುತ್ತಾರೆ. ಅದು ಹೇಗೆ ಎಂದು ಕೇಳಿದ್ದಕ್ಕೆ ನನ್ನ ಹತ್ತಿರ ಮಾತನಾಡುವುದೇ ಬಿಟ್ಟರು; ವಿಶ್ ಮಾಡುವುದೂ ಬಿಟ್ಟರು. ನಂತರ ಆ ವಿಚಾರ ಸೂಪರಿಂಟೆಂಡಿಂಗ್ ಇಂಜಿನಿಯರ ಹತ್ತಿರ ಬಂದು, ಅವರು ಆ ಮನುಷ್ಯನಿಗೆ ಸ್ವಲ್ಪ ಸೂಚನೆ ಕೊಟ್ಟುಬಿಟ್ಟರು. ನಂತರ ಆ ಮನುಷ್ಯ ನನ್ನಲ್ಲಿ ಬಂದು, ಏನು ಸ್ವಾಮಿ, ಸೂಪರಿಂಟೆಂಡಿಂಗ್ ಇಂಜಿನಿಯರ ಹತ್ತಿರ ಬಹಳ ಪುಕಾರು, ಗಲಾಟೆ ಮಾಡಿದ್ದೀರಂತೆ. ಹಾಗೇನೂ ತಿಳಿದುಕೊಳ್ಳಬೇಡಿ, ಎಂದು ರಾಜಿಮಾಡಿಕೊಂಡ. ಹೀಗೆ ಕತೆಗಳು ನಡೆಯುತ್ತಿದೆ. ಇವತ್ತು ಪಂಪ್‌ಸೆಟ್ಟು ಸ್ಯಾಂಕ್ಷನ್ ಆಗಿ ಅದಕ್ಕೆ ಕರೆಂಟ್ ಕೊಡಬೇಕಾದರೆ, ಒಂದು ಪಂಪ್‌ಸೆಟ್ಟಿಗೆ 100 ರೂಪಾಯಿ ಮಾತ್ರ ಕೊಟ್ಟರೆ, ಅಲ್ಲಿಗೆ ಇವರ ಸಾಮಾನು ಹೋಗುತ್ತದೆ. ಇಲ್ಲದಿದ್ದರೆ ಇಲ್ಲ. ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದರೆ ಏನೂ ಇಲ್ಲವೆಂದು ಹೇಳುತ್ತಾರೆ. ಇವತ್ತು ಯಾವ ಲೈನ್ ಹಾಕುವುದಾದರೂ ಮಿನಿಮಂ ಅಲ್ಲಿ ಫಿಕ್ಸ್ ಮಾಡಿದ್ದಾರೆ. ಇವತ್ತು ಒಂದು ಕಡೆ ಸಾವಿರ ರೂಪಾಯಿಗೆ ಕೆಲಸವಾದರೆ, ಮೈಸೂರಿಗೆ 10 ಸಾವಿರವಾಗಬಹುದು. ಎಲ್ಲಿ ಜಾಸ್ತಿ ಖರ್ಚಾಗುತ್ತದೆ, ಅಲ್ಲಿ ಮಿನಿಮಂ ಫಿಕ್ಸ್ ಮಾಡಬೇಕಾಗುತ್ತದೆ, ಇವತ್ತು ಆ ಖರ್ಚನ್ನು ಆ ಪಾರ್ಟಿಯವರ ಹತ್ತಿರ ವಸೂಲು ಮಾಡಬೇಕೇ ವಿನಹ ಎಲ್ಲಾ ಜನರ ಮೇಲೆ ಹಾಕತಕ್ಕಂತದ್ದು ನ್ಯಾಯವಲ್ಲ, ಆದ್ದರಿಂದ ಸರ್ಕಾರದವರು ಆ ವಿಷಯವನ್ನು ವಿಮರ್ಶೆ ಮಾಡಬೇಕು. ಇವತ್ತು ಬೋರ್ಡಿನವರು ತಮ್ಮ ಸೈನ್ಯವನ್ನು ಕಡಿಮೆಮಾಡಬೇಕು. ಅದಕ್ಕೆ ಒಂದು ಕಮಿಟಿಯನ್ನು ಮುಖ್ಯಮಂತ್ರಿಯವರು ಮಾಡಬೇಕು, ಮತ್ತು ಈ ವಿಪರೀತ ಸ್ಟಾಫ್ ಏನಿದೆ ಅದನ್ನು ಕಡಿಮೆಮಾಡಿ, ಆದರಲ್ಲಿ ಉಳಿತಾಯ ಮಾಡಿ, ಮಿನಿಮಂ ಜಾಸ್ತಿ ಮಾಡಿದ್ದನ್ನು ಕಡಿಮೆ ಮಾಡಬೇಕು. ಇವತ್ತು ರೈತರಿಗೆ ಕಡಿಮೆ ಬೆಲೆಗೆ ಕೊಟ್ಟರೆ, ಆಹಾರಧಾನ್ಯ ಕೂಡ ಹೆಚ್ಚು ಹೆಚ್ಚು ಬೆಳೆಯಬಹುದು ಮತ್ತು ಅದು ಕಡಿಮೆ ಬೆಲೆಗೆ ಸಪ್ಲೈ ಕೂಡ ಆಗಬಹುದು. ರೈತನಮೇಲೆ ಟ್ಯಾಕ್ಸ್ ಹಾಕತಕ್ಕಂತದ್ದು ನ್ಯಾಯವಲ್ಲ. ಇವತ್ತು ಅಲ್ಲಿ ಲಾಸ್ ಆಗುವುದಿದ್ದರೆ, ನಮಗೆ ಎರಡುವರೆ ಸಾವಿರ ರೂಪಾಯಿಯ ಸಂಬಳದ ಚೇರ್‌ಮನ್ ಬೇಡ, ಒಂದು ಸಾವಿರ ಸಂಬಳದವರನ್ನು ಇಡಬೇಕು. ಅಲ್ಲಿ ಲಾಭವಾಗಲಿ, ನಷ್ಟವಾಗಲಿ, ಇಂಥ ಖರ್ಚನ್ನು ಮಾಡಿಯೇ ತೀರಬೇಕೆಂಬುದನ್ನು ನಾನು ಒಪ್ಪಲಾರೆ, ಮತ್ತು ಅದನ್ನು ಮಾಡುವುದೂ ಸರಿಯಲ್ಲ. ಆದ್ದರಿಂದ ಈ ರೀತಿ ಜರೂರಾಗಿ ಎಲೆಕ್ಟ್ರಿಸಿಟಿ ಬೋರ್ಡಿಗೆ ಒಂದು ಕಮಿಟಿಯನ್ನು ನೇಮಕ ಮಾಡಿ ಅಲ್ಲಿ ನಡೆಯುತ್ತಕ್ಕ ಅವ್ಯವಹಾರ, ಮತ್ತು ವಿದ್ಯುಚ್ಛಕ್ತಿ ಬೋರ್ಡಿನಲ್ಲಿರತಕ್ಕ ವಿಪರೀತ ಸಿಬ್ಬಂದಿ ಇವುಗಳನ್ನು ಕಡಿಮೆ ಮಾಡಿ ಅಲ್ಲಿ ಆಗತಕ್ಕಂಥ ಖರ್ಚನ್ನು ಕಡಮೆ ಮಾಡುವುದಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† Sri V. N. PATIL (Humnabad).—Sir, one is at a loss to find suitable words to condem the Mysore State Electricity Board; the less we say the better because the State of Affairs there is so bad. Previously, there used to be some other Departments which were known for their bungling with the rights and privileges of the people, but now the Mysore State Electricity Board has surpassed them in the matter of bungling with the essential needs of the people. The Mysore State Electricity Board which is supposed to give light to the people, has now become under the Congress regime public enemy No. 1 against the prosperity of the people of the State. When a peasant applies for an I.P. Set he has to butter all the people in the Board from A to Z right from the Supervisor to the gangman and the man who erects the ploe. If after all that he gets his I.P. set energised, what is the result? Every alternate day there will be breakdown of power and he will not be able to operate the pumpset, but he will still have to pay the minimum charge irrespective of whether there is water in his well, irrespective of whether he used the pumpset or not. For whose benefit is the Board functioning? I do not think the Board has any answer to this qutstion. It may try to say that it is functioning for the benefit and the welfare of the people of the State. It is very unfortunate that some hon. members in this very august House are saying something against the welfare State and democratic socialism. When Maharajas and Nizams have vanished giving place to democratic forces, what right have some of these privileged classes to say why the people of Mandya should pay for erecting electric pole in Kolar and so on? We also hear loud cries of old Mysore people being made to sacrifice for the people of new Mysore and so on. If this is the tendency that is developing among the people, then our former Maharajas and Nizam may also legitimately ask why they should sacrifice their kingdom which they have inherited from their ancestors? Unfortunately, I heard several voices here saying why they should be made to pay for the welfare of the backward areas of the State, why they should be made to pay the minimum and questioning the increase in the minimum charges. I want to state that unless the people in the developed areas make some sacrifices, it will not be possible to develop the backward areas. I want to ask them, do they want the people of the backward areas to remain backward for another 50 years? We the legislators are elected to this House by the people of the State to work for the welfare of the people of the State as a whole and it is our duty to see that Mysore State as a whole prospers.

While the Government are unable to sell all the electricity produced and they are inviting industrialists from all over India to come here and establish industries promising them all facilities, they are forcing our people to pay minimum charges for their installations. As against this we find the Minister for Industries and the Chief Minister and the Congress President wooing the industrialists outside Mysore State to

---

†Indicates that the remarks or speeches have not been revised by the member concerned.

establish industries here promising to give them electricity at a very cheap rate of 3 paise per unit. Why do they want to give them at such a cheap rate ? Is it not because these industrialists pay for the election fund of the Congress party ? When the Government are offering electricity to these industrialists at such a very cheap rate, what are they doing to the agriculturists of Mysore State ? Instead of reducing their rate, they are insisting on their paying a minimum rate and even the minimum charge has been raised.

It is very unfortunate to hear members saying here that old Mysore is made to pay for the development of Gulbarga District and the rest of, new Mysore and that new Mysore is developed at the cost old Mysore. Whoever be the Chief Minister, it is the duty of Government to develop the backward areas and there is no question of old Mysore or new Mysore in this.

Coming to the working of the Mysore State Electricity Board, the Board is like a Bhasmasura and it is dancing like a Bhasmasura. It is, therefore, necessary that the Government should have direct control over the Board and it should not be an autonomus Board for doing only misdeeds. I can cite here some of the misdeeds of the Board. A retired officer of the Mysore State Electricity Board was re-employed in the same office. He was sent to Bombay and he stayed there for more than a month. He was sent there to fetch a loan of Rs. 50 lakhs from some Bombay banker. Was it not possible for the said officer to negotiate that loan with some of the banks in Mysore State and why should he has been sent to Bombay ? It only goes to show that they wanted to share some percentages or some margin from this deal with the Bombay bank. Is this the way the Board should work for the prosperity of the State of Mysore ? I can even state the name of this officer who was sent to Bombay. His name is M. Narasimha Iyengar, a retired officer, who was re-employed by the Board.

Then coming to the working of the Board, we are hearing complaints from the people that hundreds of poles are getting spoiled every day. Most of the people are damaging the poles and are making use of the iron bars inside. How about copper wire and other wires ? These things are being sold in the market by blacksmiths. We have to see why the Electricity Board is suffering losses. If the State Electricity Board were to continue like this and the Mysore Government continues to shield these people, it will be very difficult to collect the land revenue. People will rise in revolt and will be compelled to take law in their own hands.

11-30 P.M.

I would like to make some suggestions I am sure the Government will be able to carry out these suggestions, and they are :—

(1) reduce the rate of power charges on par with the generation cost, if not less ;

(SRI V. N. PATIL)

(2) waive the interest that is being charged on the areas of power purchase;

(3) pay subventions on schemes taken up by the Mysore State Electricity Board at the instance of the State Government at least to an extent of the losses incurred by the Board;

(4) convert all its loans or at least the capital transferred on 30th September into interest-free loan.

This is very essential for the progress of the Electricity Board. I would like to suggest the following points for consideration of the Electricity Board :—

(1) make a better and effective arrangement for the full collection of the revenue demands.

Big consumers, who owe in thousands are left off, but the poor people are made to pay by removing service connections.

(2) take over the collection work from the Banks to see that liquid cash is at their disposal instead of keeping their current account on overdraft and keeping much bigger sums with the Banks on short term loans.

Let not the funds of the Electricity Board be at the disposal of the private bankers some of them have luckily been nationalised.

3. Suitably revise all the tariffs,

I can say that the Board owes a duty to help the agriculturists. The additional tariff should not be levied on the agriculturists. The agriculturists have to produce our food requirements. Therefore, it is the duty of the Board to see that electricity is supplied to them as far as possible at the minimum possible rates.

(4) make inter-state power sales at least on no-loss basis if not on profits.

Do not use the Board for your political purposes. Give electricity wherever it is needed irrespective of the area. In several villages, electricity was sanctioned in the year 1968, but some work was kept pending so that some Ministers can inaugurate it on the eve of the Taluk Board Elections to secure the maximum votes possible. Such things should not happen. This kind of a thing is a dis-service to the nation and the State. Whether it is in old Mysore area or North Karnatak area, a list of backward areas should be first prepared, and lift irrigation work, rural electrification and I.P. sets should be taken up so that our food production increases. In order to satisfy a particular section of the people, works in already developed areas should not be taken up. It is the duty of the Government as well as the Electricity Board to see that backward areas are developed on the basis of Mysore State as one and it shall continue to be one.

(5) Give power to I.P. sets at the rates provided to industries ;

(6) reduce losses by improving efficiency and productivity with better working and service conditions, etc. in the industry.

With these words, I thank the Chair.

Mr. SPEAKER.—The time available for discussion of this item is upto 1-00 P.M. The Hon. Chief Minister may require at least half-an-hour for his reply to the debate So, the general debate will close by 12-30 P.M. But I find even now the Whips are sending the list of members desiring to participate in the debate. It may not be possible for me to accommodate all. Anyway I request that hon. members may please mention their points briefly within 5 minutes.

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಸಭಾಧ್ಯಕ್ಷರೇ, 1968-69 ಮತ್ತು 1969-70ನೇ ಸಾಲಿನ ವಿದ್ಯುಚ್ಛಕ್ತಿ ಮಂಡಲಿಯ ಬಡ್ಜೆಟ್‌ನ್ನು ಸಭೆಯ ಮುಂದೆ ಇಡಲಾಗಿದೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ವಿದ್ಯುಚ್ಛಕ್ತಿ ಮಂಡಲಿಯ ಕಾರ್ಯಾಚರಣೆಯ ಬಗ್ಗೆ, ಅದರ ಆಡಳಿತದ ಬಗ್ಗೆ ಮತ್ತು ಪಂಪ್‌ಸೆಟ್ಟುಗಳ ಮೇಲೆ ಹೊಸದಾಗಿ ಹಾಕಿರುವಂಥ ಟ್ಯಾರಿಫ್ ಬಗ್ಗೆ, ಸೂಕ್ತವಾದ ಸಲಹೆಗಳನ್ನು ಕೊಟ್ಟು ಮಾತನಾಡಿದ್ದಾರೆ. ಕೆಲವರು ಈ ಬಡ್ಜೆಟ್‌ನ್ನು ವಿರೋಧಿಸಿ ಮಾತನಾಡಿದ್ದಾರೆ. ಈ ವಿದ್ಯುಚ್ಛಕ್ತಿ ಮಂಡಲಿ ಸಂಯುಕ್ತ ಆಡಳಿತ ಮಂಡಲಿಯಾಗಿರುವುದರಿಂದ, ಹಳ್ಳಿಯ ರೈತರ ಸಮಸ್ಯೆಗಳನ್ನು ಚೆನ್ನಾಗಿ ಅರಿತವರು, ಅದರ ಹಿನ್ನೆಲೆಯನ್ನು ಉಳ್ಳವರು ಮತ್ತು ಆ ಬಗ್ಗೆ ಆಸಕ್ತಿ ಇರುವವರನ್ನು ಆ ಮಂಡಲಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡುವುದು ಸಾಧುವಾಗಿತ್ತು. ಸರ್ಕಾರ ಈ ವಿಚಾರವನ್ನು ಏತಕ್ಕೆ ಪರಿಶೀಲಿಸಲಿಲ್ಲವೆಂದು ಕೇಳುತ್ತೇನೆ. ಈಗ ಒಬ್ಬ ನಿವೃತ್ತ ಅಧಿಕಾರಿಯನ್ನು ಈ ಮಂಡಲಿಯ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ನಿವೃತ್ತ ಅಧಿಕಾರಿಯನ್ನು ನೇಮಕ ಮಾಡಿರುವುದರಿಂದ ಈ ಒಂದು ಪರಿಸ್ಥಿತಿ ಬಂದಿದೆ ಎಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ಈಗಲಾದರೂ ಕೂಡ ಸರ್ಕಾರದವರು ಆ ನಿವೃತ್ತ ಅಧಿಕಾರಿಯನ್ನು ತೆಗೆದುಹಾಕಿ, ಎಲ್ಲಾ ಸಮಸ್ಯೆಗಳನ್ನು ಅರಿತಂಥ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಆಡಳಿತವನ್ನು ನಡೆಸಿಕೊಂಡು ಹೋಗತಕ್ಕಂಥ ಒಬ್ಬರು ಖಾಸಗೀಯವರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಹೇಳುತ್ತಾ ನನ್ನ ಮಾತನ್ನು ಪ್ರಾರಂಭ ಮಾಡುತ್ತೇನೆ ಮತ್ತು ಸ್ವಾಯುಮಾಡಳಿತ ಮಂಡಳಿಯಾಗಿರುವ ಈ ವಿದ್ಯುತ್ ಮಂಡಲಿ ಇಂದು ದೇಶದ ಯಾವುದೇ ಕ್ಷೇತ್ರದಲ್ಲಾಗಲೀ ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡಬೇಕು ಎಂದು ಜನ ಕೇಳಿದರೆ ಅದಕ್ಕನುಗುಣವಾಗಿ ಇಲ್ಲಿರುವ ಕೆಲಸಗಾರರು ಹಾಗೂ ನೌಕರ ವರ್ಗದವರು ನಡೆಯುತ್ತಿಲ್ಲ. ಇಲ್ಲಿರುವ ನೌಕರರುಗಳ ವರ್ಗದವರಿಗಾಗಿ ಖರ್ಚು ಮಾಡತಕ್ಕ ಪಟ್ಟಿಯನ್ನು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. ವಿದ್ಯುತ್ ಮಂಡಲಿಯ ಅಧ್ಯಕ್ಷರು ಮತ್ತು ಈ ಇಲಾಖೆಗಳಲ್ಲಿ ಅವರು ನೇಮಿಸಿರುವ ಅಧಿಕಾರಿಗಳು ಈ ರಾಜ್ಯದಲ್ಲಿ ಮಾಡುತ್ತಿರುವ ಕೆಲಸಗಳಿಗೆ ಅನುಗುಣವಾಗಿದೆಯೋ ಇಲ್ಲವೇ, ಹೆಚ್ಚಾಗಿದೆಯೋ ಎನ್ನುವುದನ್ನು ತನಿಖೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ನಾನು ಇಲ್ಲಿ ಸಲಹೆ ಮಾಡುತ್ತೇನೆ. ವಿದ್ಯುತ್ ಮಂಡಲಿಯವರು ಯೋಜನೆಗಳನ್ನು ಮಾಡಬೇಕೆಂದು, ಹೆಡ್ ಕ್ವಾರ್ಟರ್ಸ್‌ನಲ್ಲಿ ಒಂದು ಸ್ಟೋರು, ಡಿವಿಜನಲ್ ಕ್ವಾರ್ಟರ್ಸ್‌ನಲ್ಲಿ ಒಂದು, ಸಬ್ ಡಿವಿಜನಲ್ ಹೆಡ್ ಕ್ವಾರ್ಟರ್ಸಿನಲ್ಲಿ ಒಂದು ಸ್ಟೋರು ಎಂದು ಮಾಡಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಸಾಮಾನುಗಳನ್ನು ತುಂಬಿಕೊಂಡಿದ್ದಾರೆ. ಅದಕ್ಕೆ ಯಾವ ಲೆಕ್ಕಾಚಾರಗಳೂ ಇಲ್ಲ ಎಂದು ಕಾಣುತ್ತದೆ. ಇಲ್ಲಿರುವ ಕೆಲಸಗಾರರು ಯಾವ ಕಾರಣದಿಂದ ಇಷ್ಟು ಸಾಮಾನುಗಳನ್ನು ಪಡೆದಿದ್ದಾರೆ ? ಯಾರದೋ ದಾಕ್ಷಿಣ್ಯಕ್ಕಾಗಿ ಹಾಗೂ ಅವರ ಒತ್ತಾಯಕ್ಕಾಗಿ ಉಪಯೋಗಕ್ಕೆ ಬಾರದ ರೀತಿಯಲ್ಲಿ ಸಾಮಾನುಗಳನ್ನು ಸ್ಟೋರುಗಳಲ್ಲಿ ತುಂಬಿದ್ದಾರೆ. ಇನ್ನೂ ಕೋಟಿಗಟ್ಟಲೆ ರೂಪಾಯಿಗಳಷ್ಟು ಸಾಮಾನುಗಳು ಪ್ರತಿಯೊಂದು ಸ್ಟೋರಿನಲ್ಲೂ ಗುಡ್ಡೆ ಗಟ್ಟಲೆ ತುಂಬಿದೆ. ಇದರ ಮೇಲೆ ಇಲ್ಲಿರುವ ನೌಕರರುಗಳಿಂದಲೇ ಕಳವಾಗಿರತಕ್ಕ ಎಷ್ಟೋ ಸಾಮಾನುಗಳು ಹೊರಗಡೆ ಮಾರಾಟವಾಗುತ್ತಿವೆ. ಸ್ಟೋರ್ಸ್‌ಗಳ ಲೆಕ್ಕವನ್ನು ಸರಿಯಾಗಿ ಇಡದೇ ಇರುವುದರಿಂದ ಸುಮಾರು ಹಾತ್ತಾರು ಕೋಟಿ ರೂಪಾಯಿಗಳ ಬೆಲೆ ಬಾಳುವ ಸಾಮಾನುಗಳು ದುರುಪಯೋಗವಾಗುತ್ತಿವೆ. ಇಲ್ಲಿರುವ ಸೆಂಟ್ರಲ್ ಸ್ಟೋರ್ಸ್‌ನಲ್ಲಿರುವ ಸಾಮಾನುಗಳನ್ನು ಪರಿಶೀಲನೆ ಮಾಡಲು ಸರಕಾರವೇ ಆಗಲೇ ಒಬ್ಬರು ಅಧಿಕಾರಿಗಳನ್ನು ತನಿಖೆ ಮಾಡಲು ನೇಮಕ ಮಾಡಬೇಕು. ಇಲ್ಲದೆ ಇದ್ದರೆ ಒಂದು ಸಮಿತಿಯನ್ನಾದರೂ ನೇಮಕ ಮಾಡಬೇಕು. ಸ್ಟೋರ್ಸ್‌ಗಳಲ್ಲಿರುವ

(ಶ್ರೀ ಎಸ್. ಪುಟ್ಟಸ್ವಾಮಿ)

ವರು ತಪ್ಪು ಲೆಕ್ಕಗಳನ್ನು ಇಟ್ಟು ದುರುಪಯೋಗ ಮಾಡುತ್ತಿರುವುದನ್ನು ಸರಿಯಾಗಿ ವಿಚಾರಣೆ ನಡೆಸಿ ಯಾರು ಇಂತಹ ದುರುಪಯೋಗಕ್ಕೆ ಜವಾಬುದಾರರು ಆಗಿರುತ್ತಾರೋ ಅಂತಹವರಿಂದ ಇವರ ನಷ್ಟವನ್ನು ವಸೂಲು ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ವಿದ್ಯುತ್ ಮಂಡಳಿಯವರು ಸರಕಾರದ ಅನುಮತಿ ಪಡೆದಿದ್ದೇವೆ ಎಂದು ಈಗಾಗಲೇ ಫೆಬ್ರವರಿಯಲ್ಲಿ ವಿದ್ಯುಚ್ಛಕ್ತಿ ಮೇಲೆ ಸರ್ ಚಾರ್ಜು ಎಂದು ಹಾಕಿದರು. ಈಗಾಗಲೇ ಮಿನಿಮಂ ಒಂದಕ್ಕೆರಡರಷ್ಟು ಆಗಿ ಸುಮಾರು 5 ಹೆಚ್.ಪಿ. ಪವರಿಗೆ 75 ರಿಂದ 150 ರೂಪಾಯಿಗಳವರೆಗೆ ಕೊಡಬೇಕೆಂದು ವಸೂಲು ಮಾಡುತ್ತಿದ್ದಾರೆ. ಈ ಮಂಡಲಿಯವರು ಕೊಟ್ಟಿರುವ ವರದಿ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು ಒಂದು ಲಕ್ಷದ ತೊಂಬತ್ತೈದು ಸಾವಿರ ಪಂಪುಸೆಟ್ಟುಗಳಿವೆ. ಇವು ಎಲ್ಲ ಜಿಲ್ಲೆಗಳಲ್ಲೂ ಇವೆ. ಆದರೆ ವರ್ಷದ ಹನ್ನೆರಡು ತಿಂಗಳೂ ಇವು ಕೆಲಸ ಮಾಡುವುದಿಲ್ಲ. ಬರೀ ಮೂರು ನಾಲ್ಕು ತಿಂಗಳ ಕಾಲ ಪಂಪುಗಳು ಕೆಲಸ ಮಾಡುತ್ತವೆ ಮತ್ತು ಸುಮಾರು 5–8 ಗಂಟೆಗಳ ಕಾಲ ನೀರನ್ನು ಪಡೆಯುತ್ತವೆ. ಕೆಲವು ಕಡೆ ಬಾವಿಗಳಲ್ಲಿ ನೀರೇ ಇಲ್ಲದಿರುವುದರಿಂದ ಇಲ್ಲಿ ಎರಡು ಮೂರು ಗಂಟೆಗಳಾದರೂ ನೀರು ಒದಗದೇ ಇರುವುದು ನಮಗೆ ಸಬ್ ಸ್ಟೇಷನ್ ಯೂನಿಟ್ಸ್‌ಗಳಿಂದ ಗೊತ್ತಾಗುತ್ತದೆ. ಕೆಲವು ಕಡೆ ಇರುವ ಬಾವಿಗಳಲ್ಲಿ ಸುಮಾರು 50, 60 ಅಥವಾ 70 ಅಡಿಗಳಷ್ಟು ತೋಡಿದರೂ ನೀರೇ ಬರುವುದಿಲ್ಲ. ಹೀಗಿರುವ ಕಡೆಗಳಲ್ಲಿ ಪಂಪುಸೆಟ್ಟುಗಳ ಉಪಯೋಗವೇ ಇರುವುದಿಲ್ಲ. ಪಂಪುಸೆಟ್ಟುಗಳನ್ನು ಹಾಕುವ ಲೆಕ್ಕಗಳನ್ನು ನೋಡಿದರೆ ವಿದ್ಯುಚ್ಛಕ್ತಿ ಒದಗಿಸಬೇಕಾದರೆ ಎಷ್ಟು ಕಡೆ ಸಬ್ ಸ್ಟೇಷನ್‌ಗಳನ್ನು ಮಾಡಬೇಕು ಮತ್ತು ಎಷ್ಟು ಸ್ಟೆಪ್ ಡೌನ್ ಸ್ಟೇಷನ್‌ಗಳನ್ನು ಹಾಕಿಕೊಳ್ಳಬೇಕು, ಇವನ್ನು ಸರಿಯಾಗಿ ತಿಳಿದುಕೊಳ್ಳಲು ಇದರಲ್ಲಿ ಎಲ್ಲ ವಿವರಗಳನ್ನೂ ಕೊಡಬೇಕಾಗಿತ್ತು. ಇವೊಂದನ್ನೂ ಕೊಡದೇ ಮಿನಿಮಂ ಚಾರ್ಜನ್ನು ಹೆಚ್ಚು ಮಾಡಬೇಕೆಂದು ಇಲ್ಲಿ ಬೋರ್ಡಿನವರು ಬಡ್ಜೆಟ್ಟನ್ನು ತೋರಿಸಿ ಇದರಂತೆ ಸುಮಾರು ಒಂದು ಲಕ್ಷ ಐ.ಪಿ. ಸೆಟ್‌ಗಳಿಗೆ ಸರ್ವಿಸ್ ಕೊಡಬೇಕೆಂದು ಅನೇಕ ಕಾರ್ಯಕ್ರಮಗಳನ್ನು ಇವರಲ್ಲಿ ತೋರಿಸುತ್ತಿದ್ದಾರೆ. ಇದರ ವಿವರವಾದ ಪಟ್ಟಿ ಇಲ್ಲಿಲ್ಲ. ಅನೇಕ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ. ನಮ್ಮ ಚಾಮರಾಜನಗರದ ಅನುಭವದ ಪ್ರಕಾರ ಎರಡು ಸಾವಿರ ಕಿಲೋವಾಟುಗಳ ಒಂದು ಟ್ರಾನ್ಸ್‌ಮಿಷನ್ ಲೈನು ಎಳೆದು ಮಾಡಲು ನಮ್ಮಲ್ಲಿ ಒಂದು ಟ್ರಾನ್ಸ್‌ಫಾರಮರ್ ಇಟ್ಟಿದ್ದಾರೆ. ಇದಕ್ಕೆ ನಂಜನಗೂಡು ಕಡೆಯ ಲೈನುಗಳ ಹಾಗೂ ಟಿ. ನರಸೀಪುರದ ಲೈನ್‌ಗಳ ಕಡೆಗೂ ಆಗುವ ಕನ್‌ಸಂಪ್‌ಷನನ್ನು ಚಾಮರಾಜನಗರಕ್ಕೆ ಚಾರ್ಜು ಮಾಡುತ್ತಿದ್ದಾರೆ. ಬಹುಶಃ ಇದರಿಂದಲೋ ಏನೋ ನಮ್ಮ ಚಾಮರಾಜನಗರದಲ್ಲಿ ಮೂರು ನಾಲ್ಕು ದಿನಗಳು ದೀಪಗಳೇ ಇಲ್ಲದಿರುವಂತಾಗಿದೆ. ಇದರ ಬಗ್ಗೆ ವಿದ್ಯುತ್ ಮಂಡಲಿಯವರು ಸರಿಮಾಡಬೇಕೆಂದು ಎಷ್ಟು ಕಾಗದ ಬರೆದರೂ ಅವರಿಂದ ಯಾವ ಕಾಗದಕ್ಕೂ ಜವಾಬೇ ಬರುವುದಿಲ್ಲ. ನಮ್ಮ ವಿದ್ಯುತ್ ಮಂಡಲಿ ಪಂಪುಸೆಟ್ಟುಗಳನ್ನು ಸರ್ವಿಸ್ಸು ಮಾಡುವುದೇ ನಮ್ಮ ಗುರಿ ಎಂದು ಭಾವಿಸಿರುವಂತಿದೆ. ಒಂದು ಕಡೆ ಒಂದು ಟ್ರಾನ್ಸ್‌ಫಾರ್ಮರು ಕೆಟ್ಟುಹೋಗಿದೆ, ಅದನ್ನು ದುರಸ್ತಿ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದರೂ ಇದರ ಕಡೆಗೇ ಗಮನ ಕೊಡುತ್ತಿಲ್ಲ. ಲೈನುಗಳನ್ನು ಎಳೆಯಲು ಸಬ್ ಸ್ಟೇಷನ್‌ಗಳು ಹಾಗೂ ಸ್ಟೆಪ್ ಡೌನು ಸ್ಟೇಷನ್‌ಗಳು ಎಂದು ಮಾಡಿಕೊಂಡು ಎರಡು ಮೂರು ಮೈಲಿಗೆ ಲೈನನ್ನು ಹಾಕಿ ಅವನ್ನು ಅರ್ಧದಲ್ಲೇ ಬಿಟ್ಟು ಕೆಲಸವಾಗದೇ ನಿಂತಿರುವುದನ್ನು ನಾವು ಎಷ್ಟೋ ಕಡೆಗಳಲ್ಲಿ ನೋಡಬಹುದು. ಇಂತಹ ಅವ್ಯವಸ್ಥಿತವಾದ ರೀತಿಯಲ್ಲಿ ಕೆಲಸ ಮಾಡುತ್ತಿರುವ ಮಂಡಲಿಯಿಂದ ನಮಗೆ ಸುಮಾರು 2.20 ಕೋಟಿಯಷ್ಟು ನಷ್ಟವಾಗುತ್ತಿದೆ ಎಂದು ಇಲ್ಲಿ ನಮಗೆ ಒದಗಿಸಿರುವ ಅಂಕೆ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಬಹುಶಃ ಈಗ ಇರತಕ್ಕ ಮಿನಿಮಂ ರೇಟು ಕನ್‌ಸ್ಯೂಮರ್ ಮೇಲೆ ಚಾರ್ಜು ಮಾಡುತ್ತಿರುವುದು ಇತರ ಅಭಿವೃದ್ಧಿ ಕಾರ್ಯಗಳಿಗೆ ಚಾರ್ಜು ಮಾಡುತ್ತಿರುವುದಕ್ಕಿಂತ ಹೆಚ್ಚಾಗಿದೆ. ಡೆವಲಪ್‌ಮೆಂಟಿಗಾಗಿ ಕಡಿಮೆ ರೇಟು ಹಾಕಿ ಕನ್‌ಸ್ಯೂಮರು ಮೇಲೆ ಹೆಚ್ಚು ರೇಟು ಚಾರ್ಜು ಮಾಡುವುದು ಸರಿಯಾದುದಲ್ಲ. ಸರಕಾರ ಇದನ್ನು ಕೈಬಿಡಬೇಕು ಎಂದು ಸಲಹೆ ಮಾಡುತ್ತೇನೆ. ಮತ್ತು ಈ ಮಂಡಲಿಯ ಕೆಲಸಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೇ ಎನ್ನುವುದಕ್ಕೆ ಒಂದು ಪರಿಶೀಲನಾ ಸಮಿತಿಯನ್ನು ನೇಮಿಸಿದರೆ ಅದರಿಂದ ಎಲ್ಲ ವಿಚಾರಗಳನ್ನೂ ವಿಚಾರ ಮಾಡಿ ಸರಿಯಾದ ಕೆಲಸಗಳು ಆಗುವಂತೆ ಮಾಡಲು ಅನುಕೂಲವಾಗುತ್ತದೆ. ಐ.ಪಿ. ಸೆಟ್‌ಗಳಿಗೆ ಹಾಲಿ ಇರತಕ್ಕ ರೇಟುಗಳನ್ನೇ ಇಡುವುದು ಸೂಕ್ತ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ 1969–70ನೇ ಸಾಲಿನ ವಿದ್ಯುತ್ ಮಂಡಲಿಯ ಫೈನಾನ್‌ಷಿಯಲ್ ಸ್ಟೇಟು ಮೆಂಟು ಎಂದು ಇಲ್ಲಿ ಮಂಡಿಸಿರುವುದನ್ನು ನೋಡಿದರೆ ಖಂಡಿತವಾಗಿಯೂ ಬಹಳ ನಿರಾಶಾದಾಯಕವಾಗಿರುವುದು ಕಂಡುಬರುತ್ತದೆ.

ಬಹುಶಃ ಎಲೆಕ್ಟ್ರಿಸಿಟಿ ಬೋರ್ಡ್ ಅಸ್ತಿತ್ವಕ್ಕೆ ಬಂದಮೇಲೆ ಇದರ ಆದಾಯ ಎಷ್ಟು ಮತ್ತು ವೆಚ್ಚ ಎಷ್ಟು ಎನ್ನುವುದನ್ನು ಆಯಾ ಸಾಲಿಗನುಗುಣವಾಗಿ ಕೊಟ್ಟಿದ್ದರೆ ಇದರಲ್ಲಿ ಆಗುತ್ತಿರುವ ಅವ್ಯವಸ್ಥೆ ಇನ್ನೂ ಚೆನ್ನಾಗಿ ಗೊತ್ತಾಗುತ್ತಿತ್ತು. ಇದರಲ್ಲಿ ಇಂದು ಇಲ್ಲಿ ಆಡಳಿತ ವೆಚ್ಚ ವಿಪರೀತವಾಗಿ ಏರಿ ಹೋಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಇಲ್ಲಿ ನಾನಾ ತರಹದ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿರುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇದನ್ನು ಯೋಚನೆ ಮಾಡಿದ ಪಕ್ಷದಲ್ಲಿ ಹಿಂದೆ ಇವರು ಚಾರ್ಜ್ ಮಾಡುತ್ತಿದ್ದ ದರಕ್ಕೂ ಈಗ ಇರುವುದಕ್ಕೂ ಹೋಲಿಸಿ ನೋಡಿದರೆ ನಮಗೆ ಗೊತ್ತಾಗುತ್ತದೆ. 1956ರಲ್ಲಿ ಒಂದು ಎಚ್. ಪಿ. ಗೆ 7-50 ರೂಪಾಯಿಗಳು ಇದ್ದದ್ದು 1960ರಲ್ಲಿ 17-50 ಆಯಿತು. 1963ರಲ್ಲಿ 24 ರೂಪಾಯಿಗಳಾದವು ಮತ್ತು 1969ರ ವೇಳೆಗೆ ಇದು 48 ರೂಪಾಯಿಗಳಷ್ಟು ಆಯಿತು. ಇದರ ಮೇಲೆ ಇನ್‌ಸ್ಟಲೇಷನ್ ಚಾರ್ಜನ್ ಹೋಲಿಸಿದರೆ ಒಂದಕ್ಕೆ ಒಂದೂವರೆಯಷ್ಟು ಏರಿವೆ. ಇದರಲ್ಲಿ ಎರಡು ತರಹದ ಡಿಫಿಕಲ್ಟೀಸ್ ಬಂದಿವೆ. ಒಂದು ಟೆಕ್ನಿಕಲ್ ಡಿಫಿಕಲ್ಟೀಸ್‌ಗಳು, ಇನ್ನೊಂದು ಅಡ್ಮಿನಿಸ್ಟ್ರೇಟೀವ್ ಡಿಫಿಕಲ್ಟೀಸ್. ಟೆಕ್ನಿಕಲ್ ಡಿಫಿಕಲ್ಟೀಸ್‌ನ್ನು ನೋಡಿದರೆ ಎಲೆಕ್ಟ್ರಿಸಿಟಿ ಬೋರ್ಡಿನಿಂದ ಮೈಸೂರು ಸಂಸ್ಥಾನದೊಳಗಡೆ ಕರೆಂಟು ಎಷ್ಟು ಲೀಕೇಜ ಆಗುತ್ತಿದೆ ಅಷ್ಟು ಬೇರೆ ಯಾವ ರಾಜ್ಯಗಳಲ್ಲೂ ಆಗಿಲ್ಲ, 1968-69ನೇ ಸಾಲಿನಲ್ಲಿ ಸುಮಾರು 15·6 ಪರ್ಸೆಂಟ್‌ನಷ್ಟು ಲೀಕೇಜುಗಳು ಆಗಿದೆ.

ರಾಜ್ಯದಲ್ಲಿ ಒಟ್ಟು ವಿದ್ಯುಚ್ಛಕ್ತಿಯ ಲೀಕೇಜ 15.6 ಪರ್ಸೆಂಟು ಇದೆ. ಇದರಲ್ಲಿ ಕನಿಷ್ಠ ಪಕ್ಷ 5 ಪರ್ಸೆಂಟ್ ಆಷ್ಟು ಲೀಕೇಜ ತಪ್ಪಿಸಿದ ಪಕ್ಷದಲ್ಲಿ ಲುಕ್ಸಾನು ಆಗುವ ಪ್ರಮೇಯವೇ ಇರುವುದಿಲ್ಲವೆಂದು ನಾನು ಹೇಳಬೇಕಾಗಿದೆ. ಈವೊತ್ತಿನದಿವಸ ಡಿಪಾರ್ಟ್‌ಮೆಂಟ್‌ನಲ್ಲಿ ಇಷ್ಟೊಂದು ಲಾಸ್ ಆಗುತ್ತಾ ಇರುವುದಕ್ಕೆ ಕಾರಣ ಹೇಳಬೇಕಾದರೆ ಡಿಪಾರ್ಟ್‌ಮೆಂಟಿನವರ ಮಿಸ್‌ಮ್ಯಾನೇಜಮೆಂಟಿನಿಂದ ಆಗಿರಬಹುದು. ಹೇಗೆಂದರೆ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಮೀಟರುಗಳನ್ನು ಕಿತ್ತುಹಾಕಿ ನೇರವಾಗಿ ಮೈನಲೈನನಿಂದ ಕನೆಕ್ಷನ್ ಕೊಟ್ಟುಬಿಟ್ಟು 500, 1,000 ರೂಪಾಯಿ ಆದಾಯ ಬರುವ ಕಡೆ ಲುಕ್ಸಾನು ಮಾಡುತ್ತಾ ಇದ್ದಾರೆ. ಮೀಟರ್ ರೀಡಿಂಗ್ ನೋಡುವುದಕ್ಕೆ ಹೋದರೆ ಮೀಟರ್ ರನ್ ಆಗಿರುವುದಿಲ್ಲ. ಕೇಳಿದರೆ ಟ್ರಾನ್ಸ್‌ಮಿಷನ್‌ನಲ್ಲಿ ದೋಷ ಇದೆಯೆಂದು ಹೇಳುತ್ತಾರೆ. ಇದಕ್ಕೆ ಸಂಬಂಧಪಟ್ಟ ಅಸಿಸ್ಟೆಂಟ್ ಇಂಜನೀಯರ್, ಮತ್ತು ಇಲಾಖಾ ಅಧಿಕಾರಿಗಳು ಸೇರಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ಸರ್ಕಾರದವರು ಪೈಸ್ ಕಂಟ್ರೋಲ್ ಮಾಡಿದಾಗ ಮಿಲ್ಲನ್ನು ನಡೆಸಕೂಡದು ಎಂದು ಮಾಡಿದರು. ಆಗ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟರ್, ಎಲ್ಲರನ್ನೂ ಸರಿಮಾಡಿಕೊಂಡು ರಾತ್ರಿವೇಳೆಯಲ್ಲಿ ಕಳ್ಳಕರಂಟನ್ನು ತೆಗೆದುಕೊಂಡಿದ್ದರು. ಇನ್ನು ಮೀಟರ್ ರೀಡಿಂಗ್ ಹೋಗಿ ನೋಡಿದರೆ ಲೆಕ್ಕ ಏನು ಸಿಕ್ಕುತ್ತದೆ ? ಈ ರೀತಿಯಾಗಿ ಭ್ರಷ್ಟಾಚಾರ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸುಮಾರು 10—12 ವರ್ಷದಿಂದಲೂ ನಡೆಯುತ್ತಾ ಇದೆ. ಇದು ದಿನೇ ದಿನೇ ಜಾಸ್ತಿಯಾಗುತ್ತಾ ಇದೆಯೇ ವಿನಃ ಕಡಿಮೆಯಾಗುವುದಿಲ್ಲ.

ಇನ್ನು ಹೈಡಲ್ ಪವರ್ ನಮ್ಮ ಮೈಸೂರು ದೇಶಕ್ಕೆ ಕೊಟ್ಟಿರುವುದು ಒಂದು ವರ ಇದ್ದ ಹಾಗೆ. ನಮ್ಮಲ್ಲಿ ವಿದ್ಯುಚ್ಛಕ್ತಿ ಹೆಚ್ಚಿಗೆ ಇದ್ದರೂ ಕೂಡ ಇವರು ಮದ್ರಾಸ್, ಆಂಧ್ರವನ್ನು ನೋಡಿ ದರ ಹೆಚ್ಚಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ ನೈವೇಲಿಯಲ್ಲಿ ಥರ್ಮಲ್ ಕರಂಟ್ ಉತ್ಪತ್ತಿ ಮಾಡುತ್ತಾರೆ. ಅಲ್ಲಿ ವಿದ್ಯುಚ್ಛಕ್ತಿ ತಯಾರು ಮಾಡುವ ಖರ್ಚು ಇಲ್ಲಿಗಿಂತ $1\frac{1}{2}$ ಪಟ್ಟು ಜಾಸ್ತಿಯಾಗಿರುತ್ತೆ. ಆದುದರಿಂದ ಅವರು ಅಲ್ಲಿ ಜಾಸ್ತಿ ಮಾಡಿರುತ್ತಾರೆ. ಅದೇ ರೀತಿ ಇಲ್ಲೂ ಜಾಸ್ತಿ ಮಾಡುವುದು ಸರಿಯಲ್ಲ. ನಮ್ಮಲ್ಲಿರುವ ಹೈಡಲ್‌ಪವರನ್ನು ಲೆಕ್ಕ ಹಾಕಿಕೊಂಡು ಅವರ ಮಟ್ಟಕ್ಕೆ ಹೋಲಿಸಬಾರದು. ಏತಕ್ಕೆಂದರೆ ನಮ್ಮಲ್ಲಿ ವಿದ್ಯುಚ್ಛಕ್ತಿ ತಯಾರು ಮಾಡಲು ಕಡಿಮೆ ಖರ್ಚಿನಲ್ಲಿ ಆಗುತ್ತದೆ. ಆದುದರಿಂದ ಜನರಿಗೆ ಉಪಕಾರ ಮಾಡಬೇಕು ಎನ್ನುವ ಭಾವನೆ ಬರಬೇಕು. ಮದ್ರಾಸ್‌ನಲ್ಲಿ ಹಾಗೆ ಇದೆ, ಬಾಂಬೆನಲ್ಲಿ ಹೀಗೆ ಇದೆ ಎನ್ನುವಂಥ ಹೋಲಿಕೆ ಮಾಡಿ ಈ ರೀತಿ ಹೆಚ್ಚಿಸುವುದರಲ್ಲಿ ಅರ್ಥವಿಲ್ಲ. ನಮ್ಮಲ್ಲಿ ಮೊದಲು 1965ರಲ್ಲಿ ಒಂದು ಹೆಚ್. ಪಿ. ಗೆ 7-50 ಇತ್ತು. 1966ರಲ್ಲಿ 17-50 ಆಯಿತು ; 1967ರಲ್ಲಿ 24-00 ರೂಪಾಯಿ ಆಯಿತು. 1968ರಲ್ಲಿ 48-00 ರೂಪಾಯಿ ಇದೆ. ಇಷ್ಟು ಜಾಸ್ತಿ ಮಾಡಿದರೂ ನಮಗೆ ಲಾಸ್ ಆಗುತ್ತಾ ಇದೆ ಎಂದು ಹೇಳುವುದಾದರೆ ಇದರಲ್ಲಿ ನಿಜವಾಗಿಯೂ ಲೋಪದೋಷಗಳು ಇವೆ. ಇದನ್ನು ವಿಮರ್ಶೆ ಮಾಡಬೇಕು. ಈವೊತ್ತು 1962-63ರ ಆಡಿಟ್ ರಿಪೋರ್ಟ್ ನೋಡುವುದಾದರೆ ಅದರಲ್ಲಿ ಏನು ಭ್ರಷ್ಟಾಚಾರ ನಡೆಯುತ್ತಾ ಇದೆ, ಏನು ಲೋಪದೋಷಗಳು ಇವೆ ಎನ್ನುವುದು ಗೊತ್ತಾಗುತ್ತದೆ. ಇಷ್ಟು ಲೋಪದೋಷಗಳು ಇದ್ದರೂ ಚೀಫ್ ಇಂಜನೀಯರ್ಸ್ ಏನೂ ಕ್ರಮ ತೆಗೆದುಕೊಂಡಿಲ್ಲ. ಇಂಥ ಚೀಫ್ ಇಂಜಿನೀಯರ್ಸ್ ಇದ್ದಾರೆ. ಯಾವ ಸ್ಟೋರ್ಸ್ ತೆಗೆದುಕೊಂಡರೂ 1, 2, 3 ಲಕ್ಷ ರೂಪಾಯಿಗಳಷ್ಟು ಷಾರ್ಟೇಜ್ ಆಗುತ್ತಾ ಇದೆ. ಶರಾವತಿ ಹೈಡ್ರೋ ಎಲೆಕ್ಟ್ರಿಕ್ ಸ್ಟೋರ್‌ನಲ್ಲಿ 10 ಲಕ್ಷ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ರೂಪಾಯಿನಷ್ಟು ಷಾರ್ಟೇಜ್ ಇದೆ. ಇವೆಲ್ಲಾ ಅಡಿಟ್ ರಿಪೋರ್ಟಿನಲ್ಲಿ ಇವೆ. ಹೀಗಿದ್ದರೂ ಅಲ್ಲಿ ಯಾವ ಅಧಿಕಾರಿಗಳನ್ನೂ ಟ್ರಾನ್ಸ್‌ಫರ್ ಮಾಡಿಲ್ಲ, ಈ ಅಧಿಕಾರಿಗಳಿಂದ ಎಷ್ಟು ನಷ್ಟವಾಗುತ್ತಾ ಇವೆ, ಎಷ್ಟು ಅಕ್ರಮಗಳು ಆಗುತ್ತಾ ಇವೆ, ಎನ್ನುವುದರ ಬಗ್ಗೆ ಸರ್ಕಾರದವರು ಏನೂ ಸಿಗಾ ತಗೆದುಕೊಂಡಿಲ್ಲ. ಇವನ್ನು ಪರಿಶೀಲಿಸಬೇಕೆಂದು ಹೇಳುತ್ತೇನೆ. ಶ್ರೀಮಾನ್ ನಂಜೇಗೌಡರು ಹೇಳಿದರು. ಹಳೇ ಮೈಸೂರಿನಲ್ಲಿ ಒಂದು ಹೆಚ್. ಪಿ. ಪಂಪುಸೆಟ್ಟಿಗೆ 3700 ರೂಪಾಯಿ ಖರ್ಚಾಗುತ್ತದೆ. ಅದೇ ಹೆಚ್. ಪಿ. ಪಂಪುಸೆಟ್ಟಿಗೆ ಗುಲ್ಬರ್ಗಾದಲ್ಲ somehow ಮ್ಯಾನೇಜ್ ಮಾಡಿ ಎಂದು ಮಂತ್ರಿಗಳು ಅಧಿಕಾರಿಗಳಿಗೆ ಹೇಳುತ್ತಾರೆ ಎಂದು. ಹೀಗೆ ಹೇಳಿದ ಮೇಲೆ ಅಧಿಕಾರಿಗಳು ತಾನೇ ಏನು ಮಾಡಿಯಾರು ? ಒಂದು ಪಂಪುಸೆಟ್ಟಿಗೆ ಇನ್ಸ್ಟಲೇಷನ್ ಹಾಕಬೇಕಾದರೆ 5–6 ಸಾವಿರ ರೂಪಾಯಿ ಏನೂ ಖರ್ಚಾಗುವುದಿಲ್ಲ. ಇದರಲ್ಲಿ ಒಂದು ನಿಯಮವನ್ನು ಪರಿಪಾಲನೆ ಮಾಡಬೇಕು. ಒಂದು ಅಶ್ವಶಕ್ತಿಗೆ 5–6 ಸಾವಿರ ರೂಪಾಯಿ ಖರ್ಚಾಗಬಹುದು ಎಂದು ಇಟ್ಟುಕೊಳ್ಳೋಣ. ಅದರಲ್ಲಿ ಒಂದು ಪರಿಮಿತಿ ಇಟ್ಟುಕೊಂಡು ಸರ್ಕಾರದವರು 2½ ಸಾವಿರ ರೂಪಾಯಿ ಸಬ್ಸಿಡೈಸ್ ಮಾಡಲಿ, ಉಳಿದ ಮೊಬಲಗನ್ನು ವಸೂಲ್ಮಾಡಲಿ. ಸರ್ಕಾರದವರು ಅಷ್ಟಾದರೂ ಸಹಾಯ ಮಾಡಿ.

ಇನ್ನು ಮಂತ್ರಿಗಳು ಹೊರಗಡೆ ಹೋಗಿ ಭಾಷಣ ಮಾಡುತ್ತಾರೆ. ಏನೆಂದರೆ 4ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಒಂದು ಲಕ್ಷ ಪಂಪುಸೆಟ್ಟನ್ನು ಹಾಕುತ್ತೇವೆ ಮತ್ತು 25 ಸಾವಿರ ಬಾವಿಗಳನ್ನು ತೋಡಿಸುತ್ತೇವೆ ಇದಕ್ಕಾಗಿ ಇಂತಿಷ್ಟು ಮೊಬಲಗನ್ನು ಒದಗಿಸಿದ್ದೇವೆ ಎಂದು ಪ್ರಚಾರ ಮಾಡಿದರು ಆದರೆ 1968-69ರಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎನ್ನುವ ಪ್ರಶ್ನೆ ತಮ್ಮನ್ನು ಕೇಳಬೇಕಾಗಿದೆ. ಕಳೆದವರ್ಷ 210 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಈ ವರ್ಷ 160 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಮತ್ತು 546 ಪಂಪು ಸೆಟ್ಟುಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಅದೂ ಕೂಡ ಪೂರ್ತಿ ಮುಟ್ಟಿಲ್ಲ ಎಂದು ಹೇಳಬೇಕಾಗಿದೆ. ಹೀಗಾದರೆ ನೀವು ಹಾಕಿಕೊಂಡಿರುವ ಗುರಿ ಮುಟ್ಟುವುದು ಯಾವಾಗ, ಎಂದು ಕೇಳುತ್ತೇನೆ. ಇವೆಲ್ಲಾ ಫೈನಾನ್ಷಿಯಲ್ ಸ್ಟೇಟ್‌ಮೆಂಟಿನಲ್ಲಿ ಮಂಕುಬೂದಿ ಹಾಕುವ ಸೋಗು ಎಂದು ಹೇಳಬೇಕಾಗಿದೆ. ಈ ಕರೆಂಟ್‌ನಲ್ಲಿ ನಷ್ಟವಾಗುತ್ತಿರುವುದಕ್ಕೆ ಕಾರಣ ಅಲ್ಲಿಯ ಲೀಕೇಜಿನಿಂದ ಮತ್ತು ಸ್ಟೋರೇಜ್‌ನಲ್ಲಿ ನಷ್ಟವಾಗುವುದು, ಓವರ್ ಸ್ಟಾಫ್ ಇರುವುದು ಮತ್ತು ಅಧಿಕಾರಿಗಳ ಅಶ್ರದ್ಧೆ ಇವುಗಳಿಂದ ಆಗುತ್ತಾ ಇದೆ. ಆದುದರಿಂದ ಇದನ್ನೆಲ್ಲಾ ಪುನರ್ಪರಿಶೀಲಿಸಿ ಇದಕ್ಕೋಸ್ಕರ ಒಂದು ಕಮಿಟಿ ಮಾಡಿ We should give a purge to the Board ಎಂದು ಹೇಳಿ ನನ್ನ ಈ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಅನೇಕ ಮಾನ್ಯ ಸದಸ್ಯರು ಹೆಚ್ಚಾಗಿ ಗುಲ್ಬರ್ಗಾದ ವಿಷಯಗಳ ಬಗ್ಗೆ ಮಾತನಾಡಿದರು. ಏನೆಂದರೆ ಈಗಿನ ಮುಖ್ಯ ಮಂತ್ರಿಗಳು ಗುಲ್ಬರ್ಗಾದಿಂದ ಬಂದಿರುವ ಕಾರಣ ಮತ್ತು ಅವರು ಹಿಂದಿನ ಪಿ.ಡಬ್ಲ್ಯೂ.ಡಿ. ಮಂತ್ರಿಗಳಾಗಿದ್ದ ಕಾರಣ ಗುಲ್ಬರ್ಗ ಡಿವಿಷನ್‌ಗೆ ಹೆಚ್ಚು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ್ದಾರೆ ಎಂದು ಆರೋಪ ಮಾಡಿದರು. ಇದರ ಬಗ್ಗೆ ನನಗೆ ಅನಿಸುವುದು ಏನೆಂದರೆ ಮಾನ್ಯ ಸದಸ್ಯರು ಈ ರೀತಿ ಆರೋಪ ಮಾಡುವುದಕ್ಕೆ ಮುಂಚಿತವಾಗಿ ಆರೋಪ ಮಾಡದೆ ನನ್ನ ಏರಿಯಾಕ್ಕೆ ಅಂದರೆ ಗುಲ್ಬರ್ಗಾ ಡಿವಿಷನ್‌ಗೆ ಬಂದು ಒಂದು ಹಳ್ಳಿಗಾದರೂ ಭೇಟಿ ಮಾಡಿ ಅಲ್ಲಿಯ ಜನಗಳನ್ನು ಎಲೆಕ್ಟ್ರಿಸಿಟಿ ಏನು ಎಂದು ಕೇಳಿದರೆ ಎಲೆಕ್ಟ್ರಿಸಿಟಿ ಗೊತ್ತಿಲ್ಲ ಎಂದು ಹೇಳುತ್ತಾರೆಯೇ ವಿನಃ ಬೇರೆ ಏನಾದರೂ ಹೇಳಿದರೆ ನಾನು ಸದಸ್ಯನಾಗಿ ಇಲ್ಲಿರಲಿಕ್ಕೆ ಸಾಧ್ಯ ಇಲ್ಲ ಎಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಸುಮಾರು 20-25 ವರ್ಷಗಳಿಂದಲೂ ನಮಗೆ ಎಲೆಕ್ಟ್ರಿಸಿಟಿ ಬರುತ್ತದೆ ಎಂದು ನಮ್ಮ ಕಡೆ ಜನರಲ್ಲಿ ಒಂದು ಕಲ್ಪನೆ ಇತ್ತು. ಆ ಕಲ್ಪನೆಯನ್ನು ಹೋಗಲಾಡಿಸುವುದಕ್ಕಾಗಿ 2-3 ವರ್ಷದಲ್ಲಿ ಒಂದೊಂದು ತಾಲ್ಲೂಕಿನಲ್ಲಿ 8–10 ಹಳ್ಳಿಗಳನ್ನು ಬಿಟ್ಟರೆ ಅಥವಾ 50-60 ಪಂಪುಸೆಟ್ಟು ಕರೆಂಟ್ ಕೊಡುವುದನ್ನು ಬಿಟ್ಟರೆ ಬೇರೆ ಎಲ್ಲಾದರೂ ಕರೆಂಟ್ ಇದೆ ಎನ್ನುವ ಶಬ್ದವಾದರೂ ನಮ್ಮ ಗುಲ್ಬರ್ಗಾ ಡಿವಿಜನ್‌ನಲ್ಲಿ ಸಿಕ್ಕುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಅದುಬಿಟ್ಟು ಯಾವುದೇ ಒಂದು ರಾಜಕೀಯ ಉದ್ದೇಶದಿಂದಾಗಲಿ, ಪಕ್ಷಪಾತದ ದೃಷ್ಟಿಯಿಂದಾಗಲಿ ಗುಲ್ಬರ್ಗಾ ಡಿವಿಜನ್‌ಗೆ ಹೆಚ್ಚು ಕರೆಂಟ್ ಹೋಗಿದೆ ಎಂದು ಹೇಳಿದರೆ ಅದನ್ನು ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಗುಲ್ಬರ್ಗಾ ಡಿವಿಜನ್ ಅಷ್ಟೂ ಹಿಂದುಳಿದಿದೆ. ಇದಕ್ಕೆ ಎಲೆಕ್ಟ್ರಿಸಿಟಿ ಬೋರ್ಡ್‌ನ ಎಸ್ಟಾಬ್ಲಿಷ್‌ಮೆಂಟಿನವರು ಏನು ಮಾಡಿಯಾರು ? ಗುಲ್ಬರ್ಗಾ ಡಿವಿಷನ್‌ಗೆ ಕಡಿಮೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ ಎಂದು ಹೇಳುತ್ತೇನೆ. ರಾಜಕೀಯ ದೃಷ್ಟಿಯಿಂದ ಯಾವುದೋ ಒಂದು ಕಾರ್ಯವನ್ನು ಡೆವಲಪ್ ಮಾಡಿದರೆ ಆ ರಾಜ

ಕೀಯವನ್ನು ಯಾವುದಕ್ಕೋ ತರುವುದನ್ನು ನಾನು ಒಪ್ಪುವುದಿಲ್ಲ. ಅಭಿವೃದ್ಧಿ ಮಾಡುವ ಕಾರ್ಯಗಳಲ್ಲಿ ಡೆವಲಪ್‌ಮೆಂಟ್ ಮಾಡುವ ದೃಷ್ಟಿಯಿಂದ ಕಾಂಗ್ರೆಸ್‌ಮನ್ ಮತ್ತು ನಾನ್ ಕಾಂಗ್ರೆಸ್‌ಮನ್ ಎನ್ನುವ ರಾಜಕೀಯವನ್ನು ಇದರಲ್ಲಿ ಸೇರಿಸಬಾರದು. ಇದರಲ್ಲಿ ರಾಜಕೀಯವನ್ನು ವಿರೋಧ ಮಾಡಲಿಕ್ಕೆ ನಾನು ತಯಾರಿಲ್ಲ.

12-00 NOON

ಈ ಮನೆಯ ಸದಸ್ಯರು ಹೆಚ್ಚಾಗಿ ತುಂಗಭದ್ರಾಕ್ಕೆ ಹೆಚ್ಚು ಇನ್‌ವೆಸ್ಟ್ ಮಾಡಿದ್ದಾರೆ, ಅದರಿಂದ ಪ್ರತಿಫಲ ಬಂದಿಲ್ಲ, ತುಂಗಭದ್ರಾಕ್ಕೆ ನಮ್ಮ ಹಣ ದುರುಪಯೋಗವಾಗಿದೆ, ಆ ಕಡೆ ಡೆವಲಪ್ ಆಗಿದೆ, ಈ ಕಡೆ ಆಗಿಲ್ಲ ಎಂದು ಹೇಳಿದರು. ತುಂಗಭದ್ರದಿಂದ ಎಷ್ಟು ಬೆಳೆಯಾಯಿತು, ಅಲ್ಲಿ ಎಷ್ಟು ಕ್ವಿಂಟಾಲ್ ಧಾನ್ಯ ಪ್ರೊಕ್ಯೂರ್ ಆಗಿದೆ, ಅದರ ಪೈಕಿ ಆ ಜಿಲ್ಲೆಯಲ್ಲಿ ಎಷ್ಟು ಹಂಚಿಕೆಯಾಗಿದೆ, ಇತರ ಕಡೆಗಳಲ್ಲಿ ಎಷ್ಟು ಹಂಚಿಕೆಯಾಗಿದೆ ಎಂದು ಹೇಳುವುದಾದರೆ, ರಾಯಚೂರು ಜಿಲ್ಲೆಯಿಂದ ಸುಮಾರು 4 ಲಕ್ಷ ಕ್ವಿಂಟಾಲ್ ಬತ್ತ ಪ್ರೊಕ್ಯೂರ್ ಆಗಿ ಅದರಲ್ಲಿ 81 ಸಾವಿರ ಕ್ವಿಂಟಾಲ್ ಮಾತ್ರ ರಾಯಚೂರು ಜಿಲ್ಲೆಯಲ್ಲಿ ಹಂಚಿಕೆಯಾಗಿ ಉಳಿದುದನ್ನು ಇತರ ಕಡೆಗಳಲ್ಲಿ ಹಂಚಿದ್ದಾರೆ. ಇದನ್ನು ನೋಡಿದರೆ ಯಾವ ತರಹ ಭೇದವನ್ನೂ ತೋರಿಸುವುದಕ್ಕೆ ಸಾಧ್ಯವಿಲ್ಲ, ಆ ರೀತಿ ತೋರಿಸಿಲ್ಲ ಎಂಬುದು ವ್ಯಕ್ತವಾಗುತ್ತದೆ. ರಾಯಚೂರು ಜಿಲ್ಲೆಯ ರೈತರು ರಾಜ್ಯದ ಅಭಿವೃದ್ಧಿಗಾಗಿ ಮತ್ತು ರಾಜ್ಯದ ಆಹಾರಾಭಾವ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ಸಹಾಯ ಮಾಡಿದ್ದಾರೆ ಮತ್ತು ತುಂಗಭದ್ರ ಯೋಜನೆಗೆ ಕೊಟ್ಟ ಹಣ ದುರುಪಯೋಗವಾಗಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ನೀರಾವರಿ ಪಂಪ್‌ಸೆಟ್‌ಗಳ ವಿಷಯವನ್ನು ತೆಗೆದುಕೊಂಡರೆ ಒಂದು ವರ್ಷಕ್ಕೆ 120 ರೂಪಾಯಿ ಇದ್ದುದನ್ನು 240 ರೂಪಾಯಿಗೆ ಹೆಚ್ಚು ಮಾಡಿದ್ದಾರೆ. ಇದನ್ನು ನಾನು ವಿರೋಧಿಸುತ್ತೇನೆ. ಕೈಗಾರಿಕಾ ಉದ್ಯಮಕ್ಕೆ ಯಾವ ರೀತಿಯಾಗಿ ಕಡಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುತ್ತೀರೋ ಅದೇ ರೀತಿಯಲ್ಲಿ ವ್ಯವಸಾಯಕ್ಕೂ ಕಡಮೆ ದರದಲ್ಲಿ ಒದಗಿಸಿದರೆ ಅಧಿಕ ಆಹಾರ ಬೆಳೆಯುವ ದೃಷ್ಟಿಯಿಂದ, ರೈತರ ಮತ್ತು ದೇಶದ ಹಿತದೃಷ್ಟಿಯಿಂದ, ಆಹಾರಾಭಾವವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಸಹಾಯವಾಗುತ್ತದೆ. ಆದ್ದರಿಂದ ಕಡಮೆ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ಹೇಳಬಯಸುತ್ತೇನೆ.

ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಆಡಳಿತ ಯಾವ ರೀತಿ ನಡೆದಿದೆ ಎಂದು ತಿಳಿಸುತ್ತ ಅಲ್ಲಿ ಬಹಳ ಬೇಜವಾಬ್ದಾರಿಯುತವಾದ ಆಡಳಿತ ನಡೆಯುತ್ತಿದೆ ಎಂದು ಕೆಲವು ಸದಸ್ಯರು ಹೇಳಿದರು. ಎಲ್ಲ ಇಲಾಖೆಗಳಲ್ಲಿಯೂ ಇದೇ ರೀತಿ ಇದೆ. ನನ್ನ ಮಟ್ಟಿಗೆ ಹೇಳುವುದಾದರೆ ಯಾವ ಇಲಾಖೆಯೇ ಆಗಲಿ ಅದು ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದೆ ಅಥವಾ ಬೇಜವಾಬ್ದಾರಿಯುತವಾಗಿ ಕೆಲಸ ಮಾಡುತ್ತಿದೆ ಎಂದು ಹೇಳುವುದಕ್ಕೆ ತಯಾರಿಲ್ಲ.

ಎಲೆಕ್ಟ್ರಿಸಿಟಿ ಬೋರ್ಡಿನ ಸಾಮಾನುಗಳ ಬಗ್ಗೆ ಪ್ರಸ್ತಾಪ ಮಾಡುತ್ತ ಟ್ರಾನ್ಸ್‌ಫಾರ್ಮರುಗಳು ಕಂಬಗಳು ಮತ್ತು ತಂತಿ ಇವುಗಳ ಬಗ್ಗೆ ಮಾನ್ಯ ಮಿತ್ರರಾದ ವಿ. ಎನ್. ಪಾಟೀಲ್ ಅವರು ಹೇಳಿದ್ದು ಸತ್ಯವಾದ ಸಂಗತಿ. ಅಧಿಕಾರಿಗಳು ಇದರ ಕಡೆಗೆ ಲಕ್ಷ್ಯ ಕೊಟ್ಟಿಲ್ಲ. ಎಲ್ಲಿ ನೋಡಿದರೂ ಎಲೆಕ್ಟ್ರಿಸಿಟಿ ಬೋರ್ಡಿನ ಸಾಮಾನುಗಳು ಸಿಕ್ಕಬಹುದು. ಯಾರು ಎಲ್ಲಿಗೆ ಒಯ್ಯುತ್ತಾರೆ ಯಾವ ರೀತಿಯಿಂದ ದುರುಪಯೋಗವಾಗುತ್ತಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಅಂಶ. ಇವೆಲ್ಲ ದುರುಪಯೋಗವಾಗುವುದಕ್ಕೆ ಕಾರಣವೇಂದರೆ ಸರಿಯಾದ ಉಸ್ತುವಾರಿ ಇಲ್ಲದೇ ಇರುವುದು. ಇದರಿಂದಾಗುವ ನಷ್ಟ ಇವೆಲ್ಲವನ್ನೂ ರೈತರ ಮೇಲೆ ಹಾಕುವುದಕ್ಕೆ ಬದಲಾಗಿ ಒಬ್ಬನೇ ಒಬ್ಬ ಮಾಲೀಕನಾಗಿರುವ ಕೈಗಾರಿಕೆಗಳ ಮೇಲೆ ಅಥವಾ ಶ್ರೀಮಂತರ ಮೇಲೆ ಹಾಕಿದರೆ ವ್ಯವಸಾಯಗಾರನ ಮೇಲೆ ಹೊರೆ ಕಡಮೆಯಾಗುತ್ತದೆ. ಇದಕ್ಕೆ ಆದಷ್ಟು ತೀವ್ರ ಗಮನ ಕೊಡಬೇಕೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ, ಮೈಸೂರು ಸಂಸ್ಥಾನದ ವಿದ್ಯುಚ್ಛಕ್ತಿ ಮಂಡಲಿಯ ಆಯವ್ಯಯ ಪಟ್ಟಿಯ ಬಗ್ಗೆ ಮಾತನಾಡುತ್ತ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ವ್ಯವಸಾಯವನ್ನು ಕೈಗಾರಿಕೆಯ ಮಾದರಿಯಲ್ಲಿ ನೋಡಿ, ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದರೆ ಬಹಳ ಚೆನ್ನಾಗಿ ಬೆಳೆಯಬಹುದು ಎಂದು ಆಲೋಚನೆ ಮಾಡಿ, ಶರಾವತಿ ಯೋಜನೆ ಕಾರ್ಯಗತವಾಗಿ ಅದರಿಂದ ವಿದ್ಯುತ್ ಉತ್ಪಾದನೆ ಪ್ರಾರಂಭವಾದ ಮೇಲೆ ರೈತರಿಗಿರತಕ್ಕ ಬಡತನ ನಿವಾರಣೆಯಾಗಿ ರಾಜ್ಯದಲ್ಲಿನ ಆಹಾರದ ಕೊರತೆಯನ್ನು ಹೋಗಲಾಡಿಸಲು ಅನುಕೂಲವಾಗುತ್ತದೆ, ಅದು ರೈತರಿಗೆ ವರವಾಗಿ ಪರಿಣಮಿಸುತ್ತದೆ ಎಂದು ಭಾವನೆ ಮಾಡಿದ್ದೆವು. ಆದರೆ ತಿಪಟೂರು

(ಶ್ರೀ ಪಿ. ಎಲ್. ಶಿವಪ್ಪ)

ತಾಲ್ಲೂಕಿನಲ್ಲಿ ಒಂದು ಸಾವಿರ ಬಾವಿಗಳನ್ನು ತೋಡಿಕೊಂಡಿದ್ದರೂ 300 ಬಾವಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನೆಂದರೆ ಒಂದು ಹಾರ್ಸ್ ಪವರ್‌ಗೆ ಇಷ್ಟು ರೂಪಾಯಿ ಖರ್ಚು ಮಾಡಬೇಕೆಂದಿದೆ. ಅದಕ್ಕಿಂತ ಜಾಸ್ತಿ ಖರ್ಚಾಗುವುದರಿಂದ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಭಾಗ ಸಾಧಾರಣವಾಗಿ ನೀರಾವರಿ ಕಡಮೆ ಇರುವ ಜಾಗ. ಬಾವಿಗಳಲ್ಲಿ ಸುಮಾರು ಮೂರು ನಾಲ್ಕು ದಿವಸ ಕಾದರೂ ಎರಡು ಗಂಟೆ ಕಾಲ ಮಾತ್ರ ವಿದ್ಯುತ್ತನ್ನು ಉಪಯೋಗಿಸಬಹುದಾದಷ್ಟು ನೀರು ಸಿಕ್ಕುತ್ತದೆ. ಇಂಥ ಸಂದರ್ಭದಲ್ಲಿ ಮಿನಿಮಂ ರೇಟ್ ಒಂದು ಹಾರ್ಸ್ ಪವರಿಗೆ 18 ರೂಪಾಯಿ ಇದ್ದುದನ್ನು 24 ರೂಪಾಯಿ ಮಾಡುವುದಲ್ಲದೆ, 48 ರೂಪಾಯಿ ಮಾಡತಕ್ಕ ಅಧಿಕಾರವನ್ನು ಬೋರ್ಡ್ ಏನು ಇಟ್ಟುಕೊಂಡಿದೆಯೋ ಅದನ್ನೆಲ್ಲ ನೋಡಿದರೆ ಯೋಗ್ಯವಾದ ರೀತಿಯಲ್ಲಿ ವಿದ್ಯುಚ್ಛಕ್ತಿ ಮಂಡಲಿ ಕೆಲಸ ಮಾಡುತ್ತಿಲ್ಲ ಎಂದು ಹೇಳಬಹುದು. ಬೋರ್ಡಿನಲ್ಲಿ ಆಗುವ ದುರುಪಯೋಗಕ್ಕೆ ಯಾರು ಜವಾಬ್ದಾರರು ? ಅಲ್ಲಿ ಆಗತಕ್ಕ ನಷ್ಟವನ್ನೆಲ್ಲ ರೈತರ ಮೇಲೆ ಹಾಕತಕ್ಕುದು ಎಷ್ಟರಮಟ್ಟಿಗೆ ಸಾಧುವಾದುದು ಎನ್ನುವುದನ್ನು ಪರಿಶೀಲನೆ ಮಾಡಬೇಕು. ಬೆಳಗಾಂನಿಂದ ಪೂನಾಕ್ಕೆ 110 ಕೆ.ವಿ. ಲೈನ್ ಹಾಕಿ ಅದರಲ್ಲಿ 220 ಕೆ.ವಿ. ವಿದ್ಯುತ್ತನ್ನು ಹರಿಸಿದುದರಿಂದ ಟ್ರಾನ್ಸ್‌ಫಾರ್ಮರುಗಳು ಸುಟ್ಟುಹೋದುವು ಎಂದರೆ ಅದರಿಂದ ಎಷ್ಟು ಹಣ ಲುಕ್ಸಾನಾಯಿತು ! ಇದಕ್ಕೆಲ್ಲ ಜವಾಬ್ದಾರರು ಯಾರು ! ಸಂಬಂಧಪಟ್ಟ ಟೆಕ್ನಿಕಲ್ ಅಧಿಕಾರಿಗಳ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಬಂಡೆಯಷ್ಟು ಶಕ್ತಿವಂತರು ಎಂದು ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆಯ ದಿವಸ ಹೇಳಿದರು. ಆದರೆ ಕೆಲವು ಬಂಡೆಗಳು ತಾವಾಗಿಯೇ ಸಿಡಿದು ಹೋಗತಕ್ಕ ಪರಿಸ್ಥಿತಿ ಇರುತ್ತದೆ, ಮನುಷ್ಯ ಪ್ರಯತ್ನದಿಂದ ಕೆಲವು ಸಿಡಿಯುತ್ತವೆ, ಕೆಲವು ಭಗವಂತನ ಇಚ್ಛೆಯಿಂದ ಸಿಡಿದು ಹೋಗುತ್ತವೆ. ಲೈನ್ ಮಿನಿಮಂ ಏನಿದೆ ಅದು ಒಂದು ಹಾರ್ಸ್ ಪವರಿಗೆ ಹೆಚ್ಚಾಗಿ ಖರ್ಚಾಗುವುದರಿಂದ ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆ ಕಡೆ ಮಾತ್ರ ಏನೂ ಇಂತಹ ತೊಂದರೆಗಳಿಲ್ಲದೆ ಕೆಲಸ ಕಾರ್ಯಗಳು ನಡೆಯುತ್ತಿವೆ. ಅಲ್ಲಿ ಲೈನ್ ಮಿನಿಮಂಗಿಂತ ಹೆಚ್ಚಾಗಿ ಖರ್ಚಾಗುತ್ತಿಲ್ಲವೇ ಎಂದು ನಾನು ಕೇಳಬೇಕಾಗುತ್ತದೆ. ಕರ್ಣಾಟಕ ರಾಜ್ಯ ಆಗಬೇಕೆಂಬುದನ್ನು ನಾವು ಸಂತೋಷದಿಂದ ಒಪ್ಪಿಕೊಂಡೆವು. ಅದನ್ನು ಅನುಭವಿಸಿಕೊಂಡು ಬರುವುದಕ್ಕೆ ಮುಂದೆ ಬರುತ್ತೇವೆ ಎನ್ನುವವರು ಒಂದು ಕಡೆ ಒಂದು ನೀತಿ ಇನ್ನೊಂದು ಕಡೆ ಇನ್ನೊಂದು ನೀತಿ ಹೀಗೆ ಭೇದ ಭಾವವನ್ನು ತೋರಿಸುವುದಕ್ಕೆ ಅವಕಾಶ ಕೊಡಬಾರದು ಮತ್ತು ಅಂಥ ಅಧಿಕಾರಿಗಳಿಗೆ ಅವಕಾಶ ಕೊಡಬಾರದು. ಬೋರ್ಡ್ ಚೇರ್ಮನ್ ಆಗಿ ಕೆಲಸ ಮಾಡಲು ನೇಮಕ ಮಾಡುವವರಿಗೆ ಹೆಚ್ಚು ಸಂಬಳ ಕೊಟ್ಟು ಇಟ್ಟುಕೊಂಡಿದ್ದಾರೆಂದರೆ ಎಲ್ಲಿ ಬೇಕೋ ಅಲ್ಲಿ ಬಿಗಿಯಿಂದ ಆಡಳಿತ ನಡೆಸಿ, ಎಲ್ಲಿ ಬೇಕೋ ಅಲ್ಲಿ ಸಡಿಲವಾಗಿ ಆಡಳಿತ ನಡೆಸಲು ಇಟ್ಟುಕೊಂಡಿದ್ದಾರೆಯೇ ? ಚೇರ್ಮನ್ ಆಗಿ ನಿಮಗೆ ಬೇಕಾದವರನ್ನು ನೇಮಕ ಮಾಡಿಕೊಂಡಿರುವುದರಿಂದ ಆಡಳಿತ ಯೋಗ್ಯವಾಗಿ ನಡೆಯುತ್ತಿಲ್ಲ, ? ನರು ಕೊಡುವ ಹಣ ಅನ್ಯಾಯವಾಗಿ ಬೋರ್ಡಿನ ಉತ್ಪನ್ನ ಕಡಮೆಯಾಗುತ್ತದೆ ಎಂದು ಹೇಳಬಹುದು. ಯಾವಾಗ ಕೇಳಿದರೂ ಹಣವಿಲ್ಲ ಎಂದು ಹೇಳುತ್ತಾರೆ. ಹಣವನ್ನು ಸರಿಯಾದ ರೀತಿಯಲ್ಲಿ ವಾಪಸು ತೆಗೆದುಕೊಂಡಿಲ್ಲ. ತುಂಗಭದ್ರ ಡ್ಯಾಂ ಕಟ್ಟಿದಾಗ 130 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಅದಕ್ಕೆ ಪ್ರತಿ ವರ್ಷವೂ 8-10 ಕೋಟಿ ರೂಪಾಯಿ ಬಡ್ಡಿಯನ್ನು ಕೊಡುತ್ತಿದ್ದೇವೆ. 10-12 ವರ್ಷದಿಂದ ಸರ್ಕಾರ ಬರಬೇಕಾದ ಹಣವನ್ನು ಆ ಪ್ರಾಂತದಲ್ಲಿ ವಸೂಲು ಮಾಡದೇ ಇರುವುದು ಯಾರ ತಪ್ಪು ? ಹೆಚ್ಚು ದರ ಹಾಕಿದರೆ ರೈತರ ಹಿತಸಾಧನೆಯಾಗುವುದೇ ! ಎಲ್ಲ ಭಾಗವನ್ನೂ ಯೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು. ಸಿಬ್ಬಂದಿ ವಗೈರೆಗೆ ಹೆಚ್ಚು ಖರ್ಚುಮಾಡಿ ಅದನ್ನು ರೈತರ ಮೇಲೆ ಹೇರುವುದು, ಅದಕ್ಕಾಗಿ ದರ ಏರಿಸುವುದು ಸೂಕ್ತವಲ್ಲ, ರೈತರ ಮೇಲೆ ಭಾರ ಹೇರಿ ಆದಾಯ ಪಡೆಯುವುದು ಯೋಗ್ಯವಲ್ಲ, ಈ ರೀತಿಯ ಮನೋಭಾವನೆಯಿರುವುದು ಸರಿಯಲ್ಲ. ದುರುಪಯೋಗವಾಗಿರುವುದು, ದುರಾಡಳಿತವಿರುವುದು ನೋಡಿ ಸಂಬಂಧಪಟ್ಟವರಮೇಲೆ ಸೂಕ್ತಕ್ರಮ ತೆಗೆದುಕೊಳ್ಳಬೇಕು. ಯಾವುದೂ ವೇಸ್ಟ್ ಆಗದಂತೆ ನೋಡಿಕೊಳ್ಳಬೇಕು. ಸುಮ್ಮನೆ ರೈತರ ಮೇಲೆ ಹೊರೆ ಹೊರಿಸಿದರೆ ದೇಶ ಕಟ್ಟಲು ಸಾಧ್ಯವಾಗುವುದಿಲ್ಲ, ಅಭಿವೃದ್ಧಿಯು ಕುಂಠಿತವಾಗುವುದು. ಆದುದರಿಂದ 240 ರೂಪಾಯಿ ಮಿನಿಮಂ ಎಂದಿರುವುದನ್ನು ಬದಲಾಯಿಸಿ ಕಡಮೆ ದರದಲ್ಲಿ ಒದಗಿಸಬೇಕಾದ್ದು ಅವಶ್ಯಕ. ಇದನ್ನು ಬಹಳ ಬೇಗ ಮಾಡಬೇಕು ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ನಂಜಪ್ಪ (ಶಾಂತಿನಗರ).—ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ಬೋರ್ಡಿನ ವಿಷಯದಲ್ಲಿ ಈಗಾಗಲೇ ಅನೇಕರು ಮಾತನಾಡಿದ್ದಾರೆ, ನಾನು 5 ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ರೈತರಿಗೆ ಅನೇಕ ಬಾಬುಗಳಿಗೆ ಸಾಲ ಕೊಟ್ಟು ವ್ಯವಸಾಯಾಭಿವೃದ್ಧಿಗೆ ಉತ್ಪತ್ತಿ

ಹೆಚ್ಚಿಸುವುದಕ್ಕೆ ಸರಕಾರ ಯೋಚನೆಮಾಡುತ್ತಿದೆ. ಆದರೆ ವಿದ್ಯುಚ್ಛಕ್ತಿ ಇಲಾಖೆ ರೈತರಿಗೆ ಅನ್ಯಾಯ ಮಾಡುತ್ತಿದೆ. ಇದು ಸರಿಯಲ್ಲ. ವಿದ್ಯುತ್ ದರವನು ಏರಿಸಿರುವುದರಿಂದ ರೈತರಿಗೆ ಹೊರೆಯಾಗಿದೆ. ಅಧಿಕಾರಿಗಳಿಗೆ ರೈತರ ಕಷ್ಟಸುಖ ಗೊತ್ತಿರುವುದಿಲ್ಲ, ಅವರು ಈಗ ಏರಿಸಿರುವ ದರವನ್ನು ಕಡಮೆ ಮಾಡಬೇಕು. ಮಳೆ ಬಂದರೆ ರೈತರಿಗೆ ಕೆಲಸ, ಇಲ್ಲವಿದ್ದರೆ ಇಲ್ಲ. 10 ವರ್ಷಗಳಿಂದ ಸರಿಯಾದ ಮಳೆಯಿಲ್ಲ, ಕೆಲವು ಕಡೆ ಜನರಿಗೆ, ದನಕರುಗಳಿಗೆ ಕುಡಿಯಲು ನೀರಿಲ್ಲ. ಹೀಗಿರುವಾಗ ದರ ಹೆಚ್ಚಿಸುವುದು ಸರಿಯಲ್ಲ. ಅಧಿಕಾರಿಗಳ ಸಂಬಳ ವಗೈರೆ ಜಾಸ್ತಿ ಮಾಡಿಕೊಳ್ಳಲು ರೈತರ ಮೇಲೆ ಹೊರೆ ಹಾಕುವುದು ಸೂಕ್ತವಲ್ಲ. ಜನರು ತಮ್ಮ ಕಷ್ಟಸುಖ ಹೇಳಿಕೊಂಡರೆ ಬೋರ್ಡು ಲಕ್ಷ್ಯ ಕೊಡುವುದಿಲ್ಲ. ಹಳ್ಳಿಗಳ ಕಡೆ ಅಧಿಕಾರಿಗಳು ಹೋದರೆ ಜನರು ಅವರಿಗೆ ತಿಂಡಿ, ಕಾಫಿ, ಹಣ್ಣು ಮುಂತಾದುವುಗಳನ್ನು ಸರಬರಾಯಿ ಮಾಡುವರು. ಹಾಗಿರುವಾಗ ಅವರಿಗೆ ಅನುಕೂಲ ಮಾಡಬೇಕೇ ಹೊರತು ತೊಂದರೆ ಮಾಡಬಾರದು.

ಅನೇಕ ಸಲ ಜನರ ಪ್ರತಿನಿಧಿಗಳಾದ ನಾವು ಆಫೀಸಿಗೆ ಹೋಗಿ ಜನರ ಕುಂದುಕೊರತೆಗಳನ್ನು ತಿಳಿಸಿದರೆ ಅದಕ್ಕೆ ಗಮನವೇ ಕೊಡುವುದಿಲ್ಲ. ಬಲ್ಬುಗಳು ಹೋಗಿದ್ದರೆ ಹೇಳಿದರೆ ಅವುಗಳ ದಾಸ್ತಾನಿಲ್ಲ ಎಂದು ಏನಾದರೂ ನೆಪ ಹೇಳುವರು. ಅವುಗಳನ್ನು ಹಾಕುವುದು ಯಾವಾಗ? ಜನರ ಕಷ್ಟ ಬೋರ್ಡಿನವರಿಗೆ ಗೊತ್ತಾಗುವುದಿಲ್ಲ. ಅನೇಕ ಸಲ ನಾನೇ ಕಾಗದ ಬರೆದಿದ್ದೇನೆ. ಎಷ್ಟೋ ಸಲ ಮನವಿಮಾಡಿದ್ದೇನೆ. ಆದರೆ ನಮಗೆ ಗೊತ್ತಿಲ್ಲದಿರುವುದು ನಿಮಗೇನು ಗೊತ್ತಿದೆ ಎಂದು ಹೇಳುವರು. ಯಾವರೀತಿ ನಾಗರೀಕರ ಬಳಿ ನಡೆದುಕೊಳ್ಳಬೇಕೆಂಬುದು ಸಹ ಗೊತ್ತಿಲ್ಲ. ಬಲ್ಬುಗಳು ಅನೇಕವೇಳೆ ಹೋದಾಗ ಅದನ್ನು ಬೇಗ ಬದಲಾಯಿಸದೆ ಜನರಿಗೆ ತೊಂದರೆಯಾಗುತ್ತಿದೆ. ಮೊಹರಂ ಹತ್ತಿರ ಬಂತು, ಬಲ್ಬುಗಳು ಕೆಟ್ಟುಹೋಗಿರುವ ಜಾಗದಲ್ಲಿ ಬೇರೆ ಹಾಕಬೇಕೆಂದು ನಾನು ಹೇಳಿದರೆ ನನ್ನಮೇಲೆ ಅಸತ್ಯವಾದ ವರದಿಮಾಡಿದ್ದಾರೆ. ಯಾರೋ ಕಂಟ್ರಾಕ್ಟರಿಗೆ ಕರೆಂಟ್ ಕೊಡಿಸಲು ಪ್ರಯತ್ನಮಾಡಿದ್ದಾರೆ ಎಂದು ಅಪವಾದ ಹೊರಿಸಿದ್ದಾರೆ. ನಾನು ಯಾವ ಕಂಟ್ರಾಕ್ಟರಿಗೂ ಸಹಾಯಮಾಡಲು ಹೋಗಲಿಲ್ಲ, ನಂತರ ಎನ್‌ಕ್ವೈರಿ ಮಾಡಿದಾಗ ನಾನು ಏನೂ ಹೇಳಿಲ್ಲವೆಂದು ಸೂಪರ್‌ವೈಜರು ಹೇಳಿದರೂ ಅಸಿಸ್ಟೆಂಟ್ ಎಂಜಿನಿಯರ್ ಮತ್ತು ಎಗ್ಸಿಕ್ಯೂಟಿವ್ ಎಂಜಿನಿಯರು ತಪ್ಪು ವರದಿ ಮಾಡಿರುವುದು ಸರಿಯಲ್ಲ. ಅನೇಕ ಅಧಿಕಾರಿಗಳು ಬೆಂಗಳೂರಿನಲ್ಲೇ ಸುಮಾರು 15 ವರ್ಷಗಳಿಂದಲೂ ಇದ್ದಾರೆ, ಅವರನ್ನು ಸರಕಾರದವರು ಅಧಿಕಾರಿಗಳನ್ನು 3 ವರ್ಷಗಳಿಗೊಂದು ಸಲ ವರ್ಗ ಮಾಡುವಂತೆ ಮಾಡುತ್ತಿಲ್ಲ. ಇದರಿಂದ ಅವರು ಬೇರೂರಿಕೊಂಡು ತಮಗೆ ಬೇಕಾದಂತೆ ಮಾಡಲು ಅವಕಾಶವಾಗಿದೆ. ಏಕೆ ಅವರನ್ನು 3 ವರ್ಷಗಳಿಗೊಂದು ಸಲ ವರ್ಗ ಮಾಡಬಾರದು ? 50 ರೂಪಾಯಿ ಬೆಲೆ ಬಾಳುವ ಬಲ್ಬುಗಳನ್ನು ಇಂದು ಹಾಕಿದರೆ ನಾಳೆ ಸುಟ್ಟುಹೋಗುವುವು. ಅಂಥ ಬಲ್ಬುಗಳನ್ನೇಕೆ ತರಿಸಬೇಕು ? ಹಣ ಯಾರದು ಹಾಗೆ ಮಾಡುವುದರಿಂದ ವ್ಯರ್ಥವಾಗುವುದು ! ಈ ರೀತಿ ಇಲಾಖೆ ಮಾಡುತ್ತಿದೆ. ಕಾರ್ಪೊರೇಷನ್ ಹಣ ಕೊಡುವುದು, ಆದರೆ ಬಲ್ಬುಗಳು ಒಳ್ಳೆಯವನ್ನು ಹಾಕುತ್ತಿಲ್ಲ. ದೂರುಗಳಿಗೆ ಗಮನ ಕೊಡುತ್ತಿಲ್ಲ. ಬೆಂಗಳೂರಿನಲ್ಲಿ ಸಾಯಂಕಾಲ ಹೋಗಿ ನೋಡಿದರೆ ಅನೇಕ ಕಡೆ ರಸ್ತೆಯಲ್ಲಿ ಬಲ್ಬುಗಳಿರುವುದಿಲ್ಲ. ಬೇಕಾದರೆ ನಾನು ತೋರಿಸುತ್ತೇನೆ. ಕತ್ತಲಲ್ಲಿ ಇದರಿಂದ ಓಡಾಡುವುದು ಕಷ್ಟವಾಗಿದೆ. ಕೆಲವು ಕಡೆ ಮರ್ಕ್ಯುರಿ ಬಲ್ಬ ಹಾಕಿದ್ದಾರೆ, ಅದು ಕೆಟ್ಟುಹೋದರೆ ಸಣ್ಣ ಬಲ್ಬುಗಳನ್ನು ಹಾಕುತ್ತಿದ್ದಾರೆ.

ಯಾವುದಕ್ಕೆ ಕೇಳಿದರೂ ದುಡ್ಡಿಲ್ಲ. ಅನ್ಯಾಯ ಮಾಡಿ ಲುಕ್ಸಾನಾಯಿತು ಅಂತ ರೇಟ್ ಹೆಚ್ಚಿಸುತ್ತಾ ಇದ್ದೀರಿ, ನಿಮ್ಮ ಖರ್ಚು ಕಮ್ಮಿ ಮಾಡಿಕೊಳ್ಳಿ, ಅದನ್ನು ಬಿಟ್ಟು ರೇಟು ಹೆಚ್ಚು ಮಾಡುತ್ತಾ ಮಾಡುತ್ತಾ 4 ಪೈಸೆಯಿಂದ 28 ಪೈಸೆವರೆಗೂ ಇವತ್ತಿನ ದಿವಸ ಬಂದಿದೆ. ನಾಗರಿಕರು ಕೊಡತಕ್ಕ ದುಡ್ಡಿನಿಂದ ನೀವು ಇವತ್ತಿನ ದಿವಸ ಅಧಿಕಾರದಲ್ಲಿ ಇದ್ದೀರಿ, ಹಾಗಿರುವಾಗ ನೀವು ಅವರನ್ನು ಕಾಪಾಡಬೇಕು ಅಂತಹ ಒಂದು ಭಾವನೆ ನಿಮ್ಮ ಎದೆಯಲ್ಲಿ ಇರಬೇಕು. ಮೂರು ದಿವಸದಿಂದ ಈ ಮಾನ್ಯ ಸಭೆಯಲ್ಲಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದರ ಬಗ್ಗೆ ತಾವು ಗಮನಕೊಟ್ಟು ನಾಗರೀಕರಿಗೆ ಅನುಕೂಲ ಮಾಡಿಕೊಡಬೇಕು. ಸಂಬಳ ಕಮ್ಮಿ ತೆಗೆದುಕೊಳ್ಳಿ, ಜನಗಳಿಗೆ ಉಪಯೋಗವಾದರೆ ಅವರೇ ನಿಮಗೆ ಹೆಚ್ಚು ಸಂಬಳ ಕೊಡುತ್ತಾರೆ. ಆದ್ದರಿಂದ ಅವರ ಹಿತವನ್ನು ಕಾಪಾಡಬೇಕೆಂದು ಹೇಳಿ ಕೊನೆಯದಾಗಿ ತಮ್ಮ ಆತ್ಮಸಾಕ್ಷಿಯಾಗಿ ನಡೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಂಡು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಕೆ. ಬೊಮ್ಮೇಗೌಡ (ಕೃಷ್ಣರಾಜಪೇಟೆ).—ಮಾನ್ಯ ಸಭಾಪತಿಗಳೇ, ಈ ವಿದ್ಯುಚ್ಛಕ್ತಿ ಮೊದಲು ಶುರುವಾದದ್ದು ನಮ್ಮ ಮಂಡ್ಯ ಜಿಲ್ಲೆಯಲ್ಲಿ. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ. ನಮ್ಮ

(ಶ್ರೀ ಎಂ. ಕೆ. ಬೊಮ್ಮೇಗೌಡ)

ದೇಶದಲ್ಲಿ ಹೇರಳವಾಗಿ ವಿದ್ಯುಚ್ಛಕ್ತಿ ಉತ್ಪಾದನೆಯಾಗುವುದಕ್ಕೆ ಪ್ರಾರಂಭವಾದುದು ಶರಾವತಿ, ಗೇರುಸೊಪ್ಪೆ, ತುಂಗಭದ್ರಾ ವಿದ್ಯುತ್ಪಾದನಾ ಕೇಂದ್ರಗಳು ಸ್ಥಾಪನೆಯಾದಮೇಲೆ ಎಂದು ಹೇಳಬಹುದು. ನಮ್ಮಲ್ಲಿ ಹೇರಳವಾಗಿ ವಿದ್ಯುಚ್ಛಕ್ತಿ ಉತ್ಪಾದನೆಯಾದರೂ ಕೂಡ ಜನಗಳ ಬೇಡಿಕೆಗಳನ್ನು ಈಡೇರಿಸುವುದಕ್ಕೆ ನಮ್ಮ ಈ ವಿದ್ಯುಚ್ಛಕ್ತಿ ಮಂಡಲಿಯಿಂದ ಆಗಲಿ ಅಥವಾ ಇಲಾಖೆಯವರಿಂದ ಆಗಲಿ ಸಾಧ್ಯವಾಗಿಲ್ಲ. ಹೊರಪ್ರಾಂತ್ಯಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಾ ಇದ್ದೇವೆ ಎಂದು ಹೇಳುತ್ತಾ ಇದ್ದಾರೆ. ಗ್ರಾಮಾಂತರಗಳ ಬೇಡಿಕೆಯನ್ನು ಪೂರೈಸಲು ಶಕ್ತಿ ಇಲ್ಲದೇ ಇರುವಾಗ ಹೊರಪ್ರಾಂತಗಳಿಗೆ ಏಕೆ ಕಳುಹಿಸುತ್ತಾ ಇದ್ದಾರೆ ಎಂಬುದು ಅರ್ಥವಾಗದ ಒಂದು ಪ್ರಶ್ನೆಯಾಗಿದೆ. ನಮ್ಮ ಏರಿಯಾದಲ್ಲಿ ಒಂದು ವರ್ಷಕ್ಕೆ ಒಂದು ಊರಿಗೂ ಸಹ ವಿದ್ಯುತ್ ಸರಬರಾಯಿ ಆಗುತ್ತಾ ಇಲ್ಲ. ಕೇಳಿದರೆ ಅದು ಇಲ್ಲ, ಇದು ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲ, ಕಂಬ ಇಲ್ಲ ಅಂತ ಹೇಳುತ್ತಾರೆ. ಅದಕ್ಕಿಂತ ಹೆಚ್ಚಾಗಿ ದುಡ್ಡಿಲ್ಲ ಎಂದು ಅನ್ನುತ್ತಾರೆ. ಹಿಂದೆ ಬೆಳಕಿಗಾಗಿ ಗ್ರಾಮಗಳಲ್ಲಿ ಮತ್ತು ಮನೆಗಳಲ್ಲಿ ವಿದ್ಯುತ್ತನ್ನು ಉಪಯೋಗ ಮಾಡಲು ಕೇಳುತ್ತಾ ಇದ್ದರು. ಈಗ ಅದನ್ನು ಅನೇಕ ತರಹದಲ್ಲಿ ಉಪಯೋಗಿಸುತ್ತಾ ಇದ್ದಾರೆ. ವ್ಯವಸಾಯಕ್ಕೆ, ಕೈಗಾರಿಕೆಗಳಿಗೆ ಉಪಯೋಗಮಾಡುತ್ತಾ ಇರುವುದರಿಂದ ಇದರ ಬೆಲೆಯನ್ನು ಜನರು ಬಹಳ ಚೆನ್ನಾಗಿ ತಿಳಿದುಕೊಳ್ಳುತ್ತಾ ಇದ್ದಾರೆ. ಈ ವಿದ್ಯುತ್ ಮಂಡಲಿ ಬಂದಮೇಲೆ ಜನಗಳಿಗೆ ಅದರಿಂದ ಆಗಿರತಕ್ಕ ಅನುಕೂಲ ಮೊದಲಿಗಿಂತಲೂ ಕಡಿಮೆಯಾಗಿದೆ. ಕೆಲವು ಡಿವಿಜನ್‌ಗಳನ್ನು ಮಾಡಿಕೊಂಡಿದ್ದಾರೆ. ರೆವಿನ್ಯೂ ಡಿವಿಜನ್, ಪಿ. ಡಬ್ಲ್ಯೂ. ಡಿ. ಡಿವಿಜನ್, ಎಲೆಕ್ಟ್ರಿಸಿಟಿ ಡಿವಿಜನ್ ಅಂತ. ಇದು ಡಿಸ್ಟ್ರಿಕ್ಟ್‌ವಾರ್ ಆಗಿದ್ದರೆ ಬಹಳ ಸುಲಭವಾಗಿ ಅಲ್ಲಿಯ ಪ್ರತಿನಿಧಿಗಳು ವ್ಯವಹಾರ ನಡೆಸಬಹುದಾಗಿತ್ತು. ನನ್ನ ಏರಿಯಾ ವಿಷಯ ಹೇಳುವುದಾದರೆ ನನ್ನ ಏರಿಯಾ ಹಾಸನಕ್ಕೆ ಸೇರಿದೆ. ಬಾಕಿ ಏರಿಯಾ ಮಂಡ್ಯಕ್ಕೆ ಸೇರಿದೆ. ಇದರಿಂದ ಜನರಿಗೆ ಆಗತಕ್ಕ ಕಷ್ಟ ಸುಖ ಹೇಳಬೇಕೆಂದರೆ ಆ ಕಡೆ ಈ ಕಡೆ ಓಡಾಡಬೇಕಾಗಿ ಬಂದು ಬಹಳ ಅನಾನುಕೂಲವಾಗಿದೆ. ಆದ್ದರಿಂದ ಎಲ್ಲಕ್ಕಿಂತ ಮೊದಲು ಕೂಡಲೇ ಡಿಸ್ಟ್ರಿಕ್ಟ್‌ವಾರು ಡಿವಿಜನ್ ಮಾಡುವುದನ್ನು ಕಾರ್ಯಗತ ಮಾಡಿದರೆ ಎಷ್ಟೋ ಸಮಸ್ಯೆಗಳನ್ನು ಬಗೆಹರಿಸಿದ ಹಾಗೆ ಆಗುತ್ತದೆ. ಅದನ್ನು ಮೊದಲು ಮಾಡಬೇಕು. ಎರಡನೆಯದಾಗಿ ಈಗ ಮಾತನಾಡಿದವರೆಲ್ಲರೂ ಘಳಿಗೆ ಘಳಿಗೆಗೂ ವಿದ್ಯುಚ್ಛಕ್ತಿ ಸರಬರಾಯಿ ಆಗುತ್ತಿರುವುದು ಕೆಟ್ಟುಹೋಗುತ್ತಾ ಇದೆ ಎಂದು ಹೇಳಿದ್ದಾರೆ. ಇದರಿಂದ ಜನರಿಗೆ ಬಹಳ ಬೇಜಾರಾಗಿದೆ. ವಿದ್ಯುತ್ತನ್ನು ಉಪಯೋಗಮಾಡುತ್ತಾ ಇರುವವರು ಮತ್ತೆ ಯಾವುದಾದರೂ ಒಂದು ಬೇರೆ ಏರ್ಪಾಡನ್ನು ಮಾಡಿಕೊಂಡಿರಲೇ ಬೇಕು. ಈ ರೀತಿ ಆಗುವುದಕ್ಕೆ ಏನು ಕಾರಣವೋ ಗೊತ್ತಿಲ್ಲ. ಬೇಕಾದಷ್ಟು ತಜ್ಞರು, ಇಂಜನಿಯರುಗಳು ಇದ್ದಾರೆ. ಹಾಗಿದ್ದರೂ ಇದನ್ನು ಬಗೆಹರಿಸದೇ ಇರುವುದಕ್ಕೆ ಕಾರಣವೇನೋ ಗೊತ್ತಿಲ್ಲ.

ಐ. ಪಿ. ಸೆಟ್ಟುಗಳನ್ನು ವ್ಯವಸಾಯ ಇಲಾಖೆಯವರು ವ್ಯಾಪಾರ ಮಾಡಿದ್ದಾರೋ, ಆಹಾರದ ಇಲಾಖೆಯವರು ವ್ಯಾಪಾರ ಮಾಡಿದ್ದಾರೋ ನಮಗೆ ಗೊತ್ತಿಲ್ಲ. ಆ ಪಂಪ್‌ಸೆಟ್ಟುಗಳನ್ನು ತಂದ ಕೂಡಲೇ ಕೆಟ್ಟು ಹೋಗುತ್ತಿವೆ. ಮೊನ್ನೆ ದಿವಸ ಒಂದು ಡೆಪ್ಯೂಟೇಷನ್ ಬಂದಿದ್ದರು, ಇಂತಹ ಪಂಪ್‌ಸೆಟ್ಟುಗಳನ್ನು ಕೊಟ್ಟರೆ ರೈತರು ಏನು ವ್ಯವಸಾಯ ಮಾಡಬಹುದು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಮಾನ್ಯ ಸಭಾಧ್ಯಕ್ಷರೇ, ಈ ಎಲೆಕ್ಟ್ರಿಸಿಟಿ ಬೋರ್ಡಿನ ವೈಖರಿಯ ಬಗ್ಗೆ ಒಂದೆರಡು ಮಾತುಗಳನ್ನು ಸರ್ಕಾರದವರಿಗೆ ತಿಳಿಸಬೇಕೆಂದು ನನ್ನ ಮನಸ್ಸಿನಲ್ಲಿ ಬರುತ್ತಾ ಇದೆ. ಪಾಪ, ಈಗ ಇರತಕ್ಕ ಎಲೆಕ್ಟ್ರಿಸಿಟಿ ಬೋರ್ಡಿನ ಅಧ್ಯಕ್ಷರಾಗಿರುವವರು ಜನಸಾಮಾನ್ಯರಿಂದ, ರೈತರಿಂದ ಬಂದಿರತಕ್ಕ ಜನ ಅಲ್ಲ. ರೈತರ ಅನುಕೂಲತೆ ಏನು, ಅವರ ಅನಾನುಕೂಲತೆ ಏನು ಎಂಬ ವಿಷಯವೇ ಅವರಿಗೆ ಗೊತ್ತಿಲ್ಲ, ಪಾಪ. ಅವರಿಗೆ ಪೆನ್‌ಷನ್ ದುಡ್ಡು ಬರುತ್ತದೆ. ಈ ಕಡೆ ಬೋರ್ಡಿನಿಂದ ಎರಡೂವರೆ ಸಾವಿರ ರೂಪಾಯಿ ಬರುತ್ತದೆ. ಈ ಆನಂದದಲ್ಲಿ ರೈತರು ಏನಾದರೂ ಚಿಂತೆ ಇಲ್ಲ, ಸರ್ಕಾರಕ್ಕೆ ಕೆಟ್ಟ ಹೆಸರು ಬಂದರೂ ಚಿಂತೆ ಇಲ್ಲ, ನಾನು ಮಾತ್ರ ಚೆನ್ನಾಗಿರಬೇಕೆಂಬ ಭಾವನೆಯಿಂದ ಅವರು ಇದ್ದಾರೆ. ಈಗ ರೈತರು ಅವರ ಕಣ್ಣಿಗೆ ಮಾತ್ರ ಬಿದ್ದಿದ್ದಾರೆ, ಬಾಕಿ ಯಾವರು ಅವರ ಕಣ್ಣಿಗೆ ಬಿದ್ದಿಲ್ಲ. 70 ಸಾವಿರ ಪಂಪುಸೆಟ್ಟುಗಳು ಕರೆಂಟ್‌ನಿಂದ ಓಡುತ್ತಾ ಇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯಲ್ಲಿ ಕನಿಷ್ಠ 50 ಸಾವಿರ ಪಂಪ್‌ಸೆಟ್ಟುಗಳು ನಡೆಯುತ್ತಾ ಇವೆ. ಕೋಲಾರದಲ್ಲಿ ಸುಮಾರು 120 ಅಡಿ ಆಳದ ಬಾವಿಯಿಂದ ನೀರನ್ನು ಪಡೆಯಬೇಕು, ಅದಕ್ಕಾಗಿ ಎರಡು ಪಂಪ್‌ಗಳನ್ನು

ಉಪಯೋಗ ಮಾಡಬೇಕಾಗಿದೆ. ಅದರಿಂದ ನೀರು ಎತ್ತಿ ಬೆಳೆ ಬೆಳೆದು ಅಧಿಕಾರಿಗಳಿಗೆ, ಪಟ್ಟಣವಾಸಿಗಳಿಗೆ 54 ರೂಪಾಯಿನಂತೆ ಬತ್ತ ಒದಗಿಸಬೇಕು. ಪಾಪ ಅವರು ಬಹಳ ಶ್ರೇಷ್ಠ ವರ್ಗದ ಮಟ್ಟದಲ್ಲಿ ಸ್ವರ್ಗದಿಂದ ಇಳಿದುಬಂದ ಜನ. ನಾವು ರೈತರು ಹಳ್ಳಿಗಾಡುಗಳಲ್ಲಿ ಸೇರಿ ರಾತ್ರಿಹಗಲು ಎನ್ನದೆ ಕಷ್ಟಪಟ್ಟು ಬೆಳೆದ ಕೊಯಮುತ್ತೂರು ಸಣ್ಣ ಅಕ್ಕಿ ಈ ಅಧಿಕಾರಿಗಳಿಗೆ ಬೇಕು.

12-30 P.M.

ದೊಡ್ಡ ಅಕ್ಕಿಯನ್ನೂ ಮತ್ತು ಹಿಟ್ಟನ್ನೂ ತಿನ್ನತಕ್ಕ ರೂಢಿಯೇ ಅವರಿಗಿಲ್ಲ. ಅವರು ರಾಗಿಯ ಹಿಟ್ಟನ್ನು ಕಣ್ಣಲ್ಲಾದರೂ ನೋಡಿದ್ದಾರೋ ಇಲ್ಲವೋ, ಅದೂಕೂಡ ತಿಳಿಯದು. ನಾವು 1936-37 ರಲ್ಲಿ ನಮ್ಮ ಇಡೀ ರಾಜ್ಯಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಾಗಿ ವಾಗ್ದಾನ ಮಾಡಿದ್ದೆವು. ನಮಗೆ ಸ್ವರಾಜ್ಯ ಬಂದು 22 ವರ್ಷಗಳಾಯಿತು. ಇನ್ನೂ ರಾಜ್ಯದಲ್ಲಿ ಈ ವಿದ್ಯುಚ್ಛಕ್ತಿ ಎಂದರೆ ಹೇಗಿರುತ್ತೆ ಎಂಬುದನ್ನು ಅರಿಯದಂಥ ಜನರು ಇದ್ದಾರೆ. ದೊಡ್ಡದೊಡ್ಡ ಪಟ್ಟಣಗಳಲ್ಲಿ ಸೇರಿರತಕ್ಕ ಜನರು ಆ ಹಳ್ಳೀ ರೈತರ ಬೆನ್ನುಮುರಿಯಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಪಟ್ಟಣದಲ್ಲಿರತಕ್ಕ ನೌಕರರಿಗೆ ನೆಗಡಿ ಕೆಮ್ಮು ಏನಾದರೂ ಬಂದರೆ ಅವರಿಗೆ ಔಷಧಿಗಾಗಿ ಇನ್ನೂ ಐದು ರೂಪಾಯಿಗಳನ್ನು ಹೆಚ್ಚಿಗೆ ಕೊಡಿ ಎಂದು ತುಕೋಳ್ ಆಯೋಗದವರು ಹೇಳಿದ್ದಾರಂತೆ. ಅದರಂತೆ ಕೊಟ್ಟು ಇದ್ದಾರೆ. ಆದರೆ ಈ ನೌಕರವರ್ಗಕ್ಕೆ ಆ ಹಳ್ಳಿಯ ರೈತನ ಸ್ಥಿತಿಗತಿಗಳು ಹೇಗೆ ಗೊತ್ತಾಗಬೇಕು ? ಇವರು ಆ ಹಳ್ಳಿಗಳಿಗೆ ಬಂದು ಆ ರೈತನ ಸ್ಥಿತಿಯನ್ನು ನೋಡಲಿ. ಆಗ ಇವರಿಗೆ ಯಾವುದು ನ್ಯಾಯ, ಯಾವುದು ಅನ್ಯಾಯ ಎಂಬುದು ಗೊತ್ತಾಗುವುದು. ರೈತಾಪಿ ವರ್ಗದಲ್ಲಿರತಕ್ಕ ಜನಕ್ಕೆ ಬೆಂಗಳೂರು ಪಟ್ಟಣ ನೋಡಬೇಕೆಂದರೆ ಅವನು ವರ್ಷಗಟ್ಟಲೇ ಅನುಸರಿಸಬೇಕು ; ಅಲ್ಲಿಗೂ ಸಾಧ್ಯವಾಗುತ್ತದೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಈ ವಿದ್ಯುಚ್ಛಕ್ತಿಯ ಬೋರ್ಡನ್ನು ವಿಸರ್ಜನೆ ಮಾಡಿದವಿನಾ ರೈತರಿಗೆ ಸುಖ ಸಿಕ್ಕುವುದಿಲ್ಲ. ಸಹಸ್ರಾರು ರೂಪಾಯಿಗಳನ್ನು ತಿಂದು ಕೆಲಸಮಾಡತಕ್ಕವರಿಗೆ ರೈತರ ಗೋಳು ಗೊತ್ತಾಗುವುದಿಲ್ಲ. ಅವನು ತುಂಡುಬಟ್ಟೆಯನ್ನುಟ್ಟು ನೀರನ್ನೆತ್ತಿ ಬೇಸಾಯ ಮಾಡಲು ಎಷ್ಟು ಕಷ್ಟವಿದೆ ಎಂಬುದನ್ನು ನಾವು ಮನಗಾಣಬೇಕು. ಆದ್ದರಿಂದ ಇಂಥ ಕಷ್ಟಸುಖಗಳನ್ನು ಅರಿಯದಿರತಕ್ಕ ಬೋರ್ಡನ್ನು ಸರ್ಕಾರದವರು ಕೂಡಲೇ ಡಿಸಾಲ್ವ್ ಮಾಡಿ, ಅವಕಾಶವಿದ್ದರೆ ಅಲ್ಲಿ ಒಬ್ಬ ರೈತನ ಪ್ರತಿನಿಧಿಯನ್ನು ಅಧ್ಯಕ್ಷನನ್ನಾಗಿ ಮಾಡಬೇಕೆಂದು ಪ್ರಾರ್ಥನೆಮಾಡಿಕೊಂಡು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮೆಗೌಡ (ದೊಡ್ಡಬಳ್ಳಾಪುರ).—ನನಗೆ ತಾವು ಮಾತನಾಡುವುದಕ್ಕೆ ಅವಕಾಶವನ್ನು ಕೊಡದಿದ್ದರೂ ಮುಖ್ಯಮಂತ್ರಿಗಳಿಗೂ ಮತ್ತು ವಿದ್ಯುಚ್ಛಕ್ತಿ ಬೋರ್ಡಿನ ಛೇರ್ಮನ್ನರಿಗೆ ಕಾಗದಪತ್ರಗಳನ್ನು ಬರೆದು ಅವರಿಗೆ ಏನು ಹೇಳಬೇಕೆಂಬುದು ಹೇಗೆ ತಿಳಿಸಬೇಕೆಂಬುದೆಲ್ಲಾ ನನಗೆ ಗೊತ್ತಿದೆ. ಆದರೆ ನಾನು ಕೇಳುತ್ತಿರುವುದು ಅಧ್ಯಕ್ಷರಾದ ತಾವು ಲಿಸ್ಟ್ ಕೊಟ್ಟಿದ್ದ ಪಟ್ಟಿಯಲ್ಲಿ ನನ್ನ ಹೆಸರಿದ್ದಾಗ್ಯೂ ಏಕೆ ಅದನ್ನು ಕೈಬಿಟ್ಟಿರಿ ಎಂದು ? ಅದಕ್ಕೆ ಕಾರಣವಾದರೂ ಏನು ? ನಾನೇನು ನಿಮಗೆ ಅಂಥ ಅನ್ಯಾಯವನ್ನು ಮಾಡಿದ್ದೆ ! ಭಾಸ್ಕರ ಸೆಟ್ಟರ ಹೆಸರಾದ ಮೇಲೆ ನನ್ನ ಹೆಸರು ಆ ಪಟ್ಟಿಯಲ್ಲಿತ್ತು. ಅದನ್ನು ತಾವೇಕೆ ಕೈ ಬಿಟ್ಟಿರಿ ? ಅಧ್ಯಕ್ಷರು ಇಷ್ಟು ಅನ್ಯಾಯ ಮಾಡುವುದು ತಮಗೆ ತರವಲ್ಲ. ಈ ಸಭೆ ಪ್ರಾರಂಭವಾದಾಗಿನಿಂದಲೂ ತಾವು ನನಗೆ ಇಲ್ಲಿ ಮಾತನಾಡುವುದಕ್ಕೆ ಒಂದು ನಿಮಿಷ ಕೂಡ ಅವಕಾಶವನ್ನು ಕೊಟ್ಟಿಲ್ಲ. ಅಧ್ಯಕ್ಷರಿಗೆ ನಾನೇನು ಅಂಥ ಅನ್ಯಾಯ ಮಾಡಿದ್ದೇನೆ ! ಅಧ್ಯಕ್ಷರಿಗೂ ಕಾನೂನಿದೆ, ನಮಗೂ ಕಾನೂನಿದೆ. ಆದರೆ ಅದನ್ನೆಲ್ಲಾ ಮೀರಿ ಅಧ್ಯಕ್ಷರು ಹೀಗೆ ಮೋಸಮಾಡಬಾರದು.

Mr. SPEAKER.—I have not done it.

ಶ್ರೀ ಎಂ. ಎಸ್. ಕೃಷ್ಣನ್,—ನಾನು ಮಾತನಾಡುವುದಕ್ಕೆ ಇಷ್ಟಪಟ್ಟಿರಲೇ ಇಲ್ಲ. ಆದರೆ ಇಲ್ಲಿ ಕೆಲವರು ಮಾತನಾಡಿದ ಮೇಲೆ ನನಗೂ ಕೂಡ ಕೆಲವು ಮಾತುಗಳನ್ನು ಹೇಳಬೇಕೆಂದೆನಿಸಿದೆ...

ಶ್ರೀ ಜಿ. ರಾಮೇಗೌಡ.—ಅಧ್ಯಕ್ಷರು ಯಾರ ಅಪ್ಪಣೆಯ ಪ್ರಕಾರ ನನ್ನ ಹೆಸರನ್ನು ಕೈಬಿಟ್ಟರು!

Mr. SPEAKER.—I was not in the Chair at that time.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಇನ್ನು ಮೇಲೆ ಈ ಲಿಸ್ಟುಗಳನ್ನು ಕೇಳುವುದನ್ನಾದರೂ ಕೈಬಿಟ್ಟರೆ ಒಳ್ಳೆಯದೆಂದು ಕಾಣುತ್ತದೆ.

Mr. SPEAKER.--I now call upon the Chief Minister to give the reply.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿನಗಳಿಂದಲೂ ವಿದ್ಯುಚ್ಛಕ್ತಿ ಬೋರ್ಡಿನವರು ತಯಾರು ಮಾಡಿರುವಂಥ ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಅಥವಾ ಒಂದು ಹಣಕಾಸಿನ ಜಂವಾಜಪತ್ರಿಕೆಯ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ದೀರ್ಘವಾದ ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರಲ್ಲಿ ಕೆಲವರು ಬಹಳ ಕಟುವಾಗಿಯೂ ಕೆಲವರು ಸಾಧಾರಣವಾಗಿಯೂ ಆ ವಿದ್ಯುಚ್ಛಕ್ತಿ ಮಂಡಳಿಯಲ್ಲಿರತಕ್ಕ ಅಧಿಕಾರಿಗಳ ಬಗ್ಗೆ ಮತ್ತು ಅಲ್ಲಿ ನಡೆಯತಕ್ಕ ವ್ಯವಹಾರಗಳ ಬಗೆ ಟೀಕೆಮಾಡಿದ್ದಾರೆ. ಇನ್ನು ಅನೇಕ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನೂ ಮಾಡಿದ್ದಾರೆ. ಈ ಚರ್ಚೆಯಲ್ಲಿ ಭಾಗವಹಿಸಿದವರೆಲ್ಲರೂ ಇತ್ತೀಚೆಗೆ ಆ ವಿದ್ಯುತ್‌ಮಂಡಳಿಯವರು ವಿದ್ಯುತ್ ಸರಬರಾಯಿಯ ಮಿನಿಮಂ ದರವನ್ನು ಹೆಚ್ಚು ಮಾಡಿದ್ದರಿಂದ ರೈತರಮೇಲೆ ಹೆಚ್ಚಿನ ಹೊರೆಯಾಯಿತು ಎನ್ನುವುದರ ಬಗ್ಗೆ ಅವರು ತಮ್ಮ ವಿಷಾದವನ್ನು ವ್ಯಕ್ತ ಪಡಿಸಿದ್ದಾರೆ ಇದು ಕಮ್ಮಿಯಾಗಬೇಕು ಅನ್ನುವಂಥ ವಿಚಾರವನ್ನೂ ಹೇಳಿದ್ದಾರೆ. ಈ ಚರ್ಚೆಯನ್ನು ನಡೆಸಿದ್ದರಿಂದ ಸರ್ಕಾರಕ್ಕೆ ಅನೇಕ ವಿಷಯಗಳು ತಿಳಿದಂತಾಗಿದೆ. ಅಷ್ಟೇ ಅಲ್ಲ ಆ ವಿದ್ಯುಚ್ಛಕ್ತಿ ಮಂಡಳಿಯವರಿಗೂ ಕೂಡ ತಮ್ಮ ಕೆಲಸಕಾರ್ಯಗಳ ಬಗ್ಗೆ ಅಲ್ಲಿ ನಡೆಯುತ್ತಿರುವ ವ್ಯವಹಾರಗಳ ಬಗ್ಗೆ ಜನಾಭಿಪ್ರಾಯ ಯಾವರೀತಿ ಇದೆ ಅನ್ನುವುದುಕೂಡ ಈ ಚರ್ಚೆಯಿಂದ ಸಾಕಷ್ಟು ಅನುಭವ ಆಗಿದೆಯೆಂದು ನನಗನಿಸುತ್ತಿದೆ. ಹೀಗೆ ಈ ಒಂದು ಚರ್ಚೆಯನ್ನು ನಡೆಸಿದ್ದು ಆ ವಿದ್ಯುಚ್ಛಕ್ತಿ ಮಂಡಳಿಯವರಿಗೂ ಮತ್ತು ಸರ್ಕಾರದವರಿಗೂ ಅನುಕೂಲವೇ ಆಯಿತೆಂದು ನನಗೆನಿಸುತ್ತಿದೆ. ಆದರೆ ಈ ಚರ್ಚೆಯಲ್ಲಿ ಸಲಹೆಗಳನ್ನು ಕೊಟ್ಟವರಿಗೂ ವಿಶೇಷವಾಗಿ ಟೀಕೆಗಳನ್ನು ಮಾಡಿರತಕ್ಕವರಿಗೂ ನಾನು ಮೊದಲನೆಯದಾಗಿ ಅವರೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಈ ಸಂದರ್ಭದಲ್ಲಿ ವಿದ್ಯುಚ್ಛಕ್ತಿಮಂಡಳಿಯವರು ಏನು ಕೆಲಸಮಾಡಿದ್ದಾರೆ. ಅನ್ನತಕ್ಕ ವಿಚಾರದಲ್ಲಿ ಮಾಡಿರತಕ್ಕ ಟೀಕೆಗಳ ಜೊತೆಗೆ ಅವರ ಕಾರ್ಯಗಳನ್ನು ಏನುಮಾಡಿದ್ದಾರೆ, ಅದರ ಬಗ್ಗೆ ಅವರಿಗೊಂದು ಪ್ರಶಂಸೆಯ ಮಾತನ್ನೂ ಸೇರಿಸಿ ಹೇಳಿದ್ದರೆ ಚೆನ್ನಾಗಿತ್ತೆಂದು ನನಗನಿಸುತ್ತಿದೆ. ಆ ವಿದ್ಯುಚ್ಛಕ್ತಿ ಬೋರ್ಡು ಅಸ್ತಿತ್ವಕ್ಕೆ ಬಂದಮೇಲೆ ಅನೇಕ ಕೆಲಸಗಳನ್ನು ಅವರು ಮಾಡಿದ್ದಾರೆ. ಕೆಲವು ಅಭಿಮಾನಪಡತಕ್ಕ ಕೆಲಸಗಳನ್ನೂ ಕೂಡ ಅವರು ಮಾಡಿದ್ದಾರೆ. ಜನರಿಗೆ ಒಂದು ಹೆಚ್ಚಿನ ಸಮಾಧಾನ ಮಾಡಲು ಅವರು ನಡೆಸಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಅಂಕಿಅಂಶಗಳನ್ನೂ ಸಂಗ್ರಹಣೆಮಾಡಿ ತಿಳಿಸಬಹುದು. ವಿದ್ಯುಚ್ಛಕ್ತಿ ಮಂಡಲಿ ಆಡಳಿತದಲ್ಲಿ ಲೋಪದೋಷಗಳಿಲ್ಲ, ವ್ಯವಹಾರ ಚೆನ್ನಾಗಿ ನಡೆಯುತ್ತಿದೆ, ಅಲ್ಲಿ ನಡೆಯುವಂಥ ಆಡಳಿತ ಮತ್ತು ವ್ಯವಹಾರದಲ್ಲಿ ಇನ್ನೂ ಹೆಚ್ಚಿನಮಟ್ಟಿಗೆ ಸುಧಾರಣೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ನಾನು ವಾದ ಮಾಡುವವನಲ್ಲ. ಸಾಕಷ್ಟು ಅವಕಾಶವಿದೆ. ಸಾಕಷ್ಟು ಲೋಪದೋಷಗಳಿವೆ. ಸಾಕಷ್ಟು ಇನ್ನೂ ಸುಧಾರಣೆಮಾಡುವುದಕ್ಕೆ ಅಲ್ಲಿ ಅವಕಾಶವಿದೆಯೆಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಆ ರೀತಿಯಿಂದ ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರಾಗಲೀ, ಚೀಫ್ ಇಂಜನಿಯರ್ ಆಗಲೀ ಮತ್ತು ಉಳಿದ ಅಧಿಕಾರಿಗಳು ಯಾರೇ ಆಗಲೀ ಅವರು ನನ್ನ ಹತ್ತಿರ ಬಂದಾಗ್ಗೆ ಅವರಿಗೂ ನನ್ನ ಅಭಿಪ್ರಾಯಗಳನ್ನು ಮತ್ತು ನನ್ನ ವಿಚಾರಗಳನ್ನು ಹೇಳುತ್ತೇನೆ. ಯಾವ ರೀತಿ ಯಾವ ವೇಗದಿಂದ ಜನತೆ ಎಷ್ಟರಮಟ್ಟಿಗೆ ಈ ಮಂಡಲಿಯಿಂದ ಕೆಲಸಕಾರ್ಯಗಳನ್ನು ಅಪೇಕ್ಷಿಸುತ್ತದೆ, ಅಂತಹ ಕೆಲಸಗಳನ್ನು ಮಾಡುವುದಕ್ಕೆ ಅನೇಕ ವಿಚಾರಗಳನ್ನು ಅವರ ಜೊತೆಯಲ್ಲಿ ಚರ್ಚೆಮಾಡಿದ್ದೇನೆ. ಅವರೂ ಕೂಡ ಇನ್ನುಮುಂದೆ ಈ ಮಂಡಲಿಯ ಕೆಲಸಕಾರ್ಯಗಳನ್ನು ಬಹಳ ಚುರುಕಾಗಿ ಮಾಡಬೇಕು, ಹೆಚ್ಚಿನ ಮಟ್ಟಿಗೆ ಜನಸಾಮಾನ್ಯರಿಗೆ ಅನುಕೂಲವಾಗಬೇಕು, ಅದರಲ್ಲಿಯೂ ಹಳ್ಳಿಗಳಿಗೆ ಹೆಚ್ಚಿನ ಅನುಕೂಲತೆ ವಿದ್ಯುಚ್ಛಕ್ತಿಯಿಂದ ಆಗಬೇಕಾಗಿದೆ, ಅವರೂ ಕೂಡ ಈ ಸಮಸ್ಯೆಗಳನ್ನು ಯಾವರೀತಿ ಪರಿಹರಿಸುವುದಕ್ಕೆ ಸಾಧ್ಯವೆಂದು ವಿಚಾರಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ನಾನು ಕಳೆದ ಕೆಲವು ದಿವಸಗಳಿಂದಲೂ ನೋಡುತ್ತಿದ್ದೇನೆ. ಈ ಮಾನ್ಯ ಸಭೆಯಲ್ಲಿ ಚರ್ಚೆಗೆ ಅವಕಾಶ ಸಿಕ್ಕಿದಾಗ ಕೆಲವು ಮಾನ್ಯ ಸದಸ್ಯರು ಒಂದು ಮಾತನ್ನು ತಪ್ಪಲಾರದೆ ಪ್ರತಿಯೊಂದು ಸಲವೂ ಹೇಳುತ್ತಿದ್ದಾರೆ. ಈ ಪರಿಯಾವನ್ನು ಹಿಂದೆ ಹಾಕಿದ್ದಾರೆ, ಆ ಪರಿಯಾವನ್ನು ಹಿಂದೆ ಹಾಕಿದ್ದಾರೆ ಇವತ್ತು ಮುಖ್ಯ ಮಂತ್ರಿಗಳ ಕ್ಷೇತ್ರವಾದ ಗುಲ್ಬರ್ಗ ಡಿವಿಷನ್ನಿನಲ್ಲಿ ಎಲ್ಲಾ ಕೆಲಸಕಾರ್ಯಗಳು ಆಗುತ್ತಿವೆ ಎಂಬುದಾಗಿ ಕೆಲವರು ಹೇಳುತ್ತಿದ್ದಾರೆ. ಕೆಲವರು ಪೂರ್ತಿಯಾಗಿ ವಿಚಾರ ತಿಳಿದುಕೊಂಡು ಹೇಳಲಾರದೆಯೂ ಇರಬಹುದು. ಆದರೆ ಕೆಲವರು ರಾಜಕೀಯ ದೃಷ್ಟಿಯಿಂದ ಹೇಳುತ್ತಿದ್ದಾರೆಂದು ಇತ್ತೀಚೆಗೆ ನನ್ನ ಮನಸ್ಸಿಗೆ ಹೆಚ್ಚುಹೆಚ್ಚಾಗಿ ಹಿಡಿಸುತ್ತಿದೆ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಿಮ್ಮ ಕೈಗೆ ಫೈನಾನ್ಷಿಯಲ್ ಸ್ಟೇಟ್‌ಮೆಂಟನ್ನು ಕೊಟ್ಟಿದ್ದೇವೆ. ಅದರಲ್ಲಿ ಎಲ್ಲಾ ಅಂಕಿಅಂಶಗಳನ್ನೂ

ಕೊಟ್ಟಿದ್ದೇವೆ. ಎಷ್ಟು ಹಳ್ಳಿಗಳಲ್ಲಿ ಎಲೆಕ್ಟ್ರಿಫೈ ಆಗಿದೆ, ಎಷ್ಟು ಐ.ಪಿ. ಸೆಟ್ಸ್ ಪ್ರತಿಯೊಂದ ಡಿವಿಷನ್ನಿನಲ್ಲಿ ಕೊಟ್ಟಿದ್ದೇವೆಂಬುದನ್ನು ಲೆಕ್ಕ ಹಾಕಿ ನೋಡಿದರೆ ಯಾವ ಏರಿಯಾದಲ್ಲಿ ಹೆಚ್ಚಾಗಿದೆ, ಯಾವ ಏರಿಯಾದಲ್ಲಿ ಕಡಿಮೆಯಾಗಿದೆ, ಯಾವ್ಯಾವ ಏರಿಯಾಗಳಲ್ಲಿ ಹೆಚ್ಚಿನ ಅನುಕೂಲತೆಗಳನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೆಂಬುದನ್ನು ಕಾಣಬಹುದು. ಕಣ್ಣಿನಲ್ಲಿ ಕಾಣಿಸುವಂಥ ಕನ್ನಡಿ ಇರುವಾಗ ಮತ್ತೆ ಒಂದು ರೀತಿಯ ವಾತಾವರಣ ನಮ್ಮ ರಾಜ್ಯದಲ್ಲಿ ಎಬ್ಬಿಸುವಂಥ ಪ್ರಯತ್ನವನ್ನು ಅನೇಕ ಸದಸ್ಯರು ಮಾಡುತ್ತಿದ್ದಾರೆ. ಅದಕ್ಕೆ ನಾನು ಬಹಳವಾಗಿ ವಿಷಾದ ಪಡುತ್ತೇನೆ.

Sri H. N. NANJE GOWDA.—This House should not be misled. I had quoted even pages also. I mentioned two or three districts also.

ಶ್ರೀ ವೀರೇಂದ್ರ ಪಾಟೀಲ್.—ನಾನು ಆಲ್ಟ್ ಆಗುವುದಿಲ್ಲ. ನನ್ನಲ್ಲಿರುವ ಅಂಕಿಅಂಶಗಳನ್ನು ನೋಡಿ ಹೇಳುತ್ತಿದ್ದೇನೆ. ಯಾರ ಸಮಾಚಾರವನ್ನೂ ತಿಳಿದುಕೊಂಡು ನಾನು ಹೇಳುತ್ತಾ ಇಲ್ಲ.

Sri H. N. NANJE GOWDA.—I had quoted pages and mentioned the districts also. The Chief Minister was not present when I was speaking.

ಶ್ರೀ ವೀರೇಂದ್ರ ಪಾಟೀಲ್.— ನಾನು ಇಲ್ಲಿ ಹೇಳುವುದೇನೆಂದರೆ, ಇದು ಮೂರು ದಿವಸಗಳ ವರೆಗೂ ಚರ್ಚೆಯಾಗಿದೆ. ಅನೇಕ ಸದಸ್ಯರು ಏನೇನು ಹೇಳಿದ್ದಾರೆಂಬುದು ಗೊತ್ತು. ಆದರೆ ನಾನು ಹೆಚ್ಚು ಹೊತ್ತು ಇರಲಿಲ್ಲ. ಅವರು ಭಾಷಣ ಮಾಡುವಾಗ ನಾನು ಮಧ್ಯೆ ಏಳಲಿಲ್ಲ. ಆದ್ದರಿಂದ ಅವರೂ ಸಹ ನಾನು ಉತ್ತರ ಕೊಟ್ಟಮೇಲೆ ಏನಾದರೂ ಸಂದೇಹವಿದ್ದರೆ ಕೇಳಲಿ, ನಾನು ಉತ್ತರ ಕೊಡಬಹುದು. ನಾನು ಮಾತನಾಡುವಾಗ ಏನೇನೋ ಮಾತನಾಡುವುದಕ್ಕೆ ಹೋಗದೆ ಒಂದು ಲಿಂಕ್ ತಪ್ಪದೆ ಇರಬೇಕು. ಆ ಒಂದು ನಿರ್ಣಯಕ್ಕೆ ನಾನು ಕೂತಾಗ ಯಾವ ಸದಸ್ಯರಾದರೂ ಮಧ್ಯೆ ಮಾತನಾಡಿ ಆ ರೀತಿ ಒಂದು ವಾತಾವರಣ ಹುಟ್ಟಿಸುವ ಪ್ರಯತ್ನ ನಡೆಯುತ್ತಿದೆ. ನಾವೆಲ್ಲರೂ ರೈತರ ಪ್ರತಿನಿಧಿಗಳಾಗಿ ಜನಗಳ ಪ್ರತಿನಿಧಿಗಳಾಗಿ ಮಾತನಾಡಿದಾಗ ಅದು ಪೇಪರ್‌ನಲ್ಲಿ ಬಂದಾಗ ಎಲ್ಲಿ ಈ ರೀತಿ ಅನ್ಯಾಯವಾಗಿದೆ ಎಂದು ಹೇಳದೆ ಹೋದರೆ, ನಮ್ಮ ಪ್ರತಿನಿಧಿಗಳು ಈ ರೀತಿ ಮಾತನಾಡುವುದರಿಂದ ವಾತಾವರಣ ಕಲ್ಮಶವಾಗುವುದಕ್ಕೆ ಅವಕಾಶವಾಗುತ್ತದೆ. ಅವರ ಮನಸ್ಸಿನಲ್ಲಿ ಒಂದು ಕಹಿ ವಿಚಾರ ಮೂಡುವುದಕ್ಕೆ ಅವಕಾಶವಾಗುತ್ತದೆ. ನಿಮಗೆ ಬೇಕಾದ ಅಂಕಿ ಅಂಶಗಳನ್ನು ಶೇಖರಣೆ ಮಾಡುತ್ತೇನೆ. ನಿಮ್ಮ ಮುಂದೆ ಎಲ್ಲಾ ಅಂಕಿಅಂಶಗಳನ್ನೂ ಇಡುತ್ತೇನೆ. ಯಾವತ್ತು ಅವರಿಗೆ ಅವಕಾಶ ಸಿಕ್ಕಿದರೂ ಒಂದೇ ಸ್ಲೋಗನ್, ಹಳೆಯ ಮೈಸೂರಿಗೆ ಅನ್ಯಾಯವಾಗಿದೆ, ಹೊಸ ಮೈಸೂರಿಗೆ ಎಲ್ಲಾ ಆಗುತ್ತದೆ, ಎಂದು. ಇದನ್ನು ಅವರು ಎಲ್ಲಿಯ ವರೆಗೂ ತೆಗೆದುಕೊಂಡು ಹೋಗುತ್ತಾರೋ ನನಗೆ ಗೊತ್ತಾಗುವುದಿಲ್ಲ. ಅದಕ್ಕಾಗಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

Sri H. N. NANJE GOWDA.—I rise to a point of order. ನಾನು ಮಾನ್ಯ ಸಭಾಧ್ಯಕ್ಷರಿಗೆ ಈಗಾಗಲೇ ಹೇಳಿದ್ದೇನೆ. ಯಾವ ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೋ ಗೊತ್ತಿಲ್ಲ. ನಾನು ಅಂಕಿಅಂಶಗಳನ್ನು ಬೇಕಾದರೆ ಕೊಡುತ್ತೇನೆ. ಅದಕ್ಕೆ ನೇರವಾಗಿ ಅವರು ಉತ್ತರ ಕೊಟ್ಟರೆ the reply would be in order. ಅದಿಲ್ಲದೆ ಸುಬ್ಬರಾಯನ ಕೆರೆ ಭಾಷಣವನ್ನು ಇಲ್ಲಿ ಕೇಳುವುದಕ್ಕೆ ನಾವು ಕೂತುಕೊಳ್ಳಬೇಕೆ? ನಮಗೆ ಸ್ಪೆಸಿಫಿಕ್ಕಾಗಿ ಉತ್ತರ ಹೇಳಬೇಕು. ನಾನು ಹೇಳುವುದು ಗುಲ್ಬರ್ಗಾ ಮತ್ತು ಹುಬ್ಬಳ್ಳಿ ವಿಷಯ. This general talk of the Chief Minister would not be in order.

Mr. SPEAKER.—I cannot direct the Hon. Chief Minister to reply in a particular manner. It is left to the option of the Hon. Chief Minister. There is no force in the point of order.

ಶ್ರೀ ವೀರೇಂದ ಪಾಟೀಲ್.—ಅಧ್ಯಕ್ಷರೇ, ಇದರ ಅವಶ್ಯಕತೆ ಇಲ್ಲವೆಂದು ನನಗನ್ನಿಸುತ್ತಿದೆ. ಸಮಯ ಬಹಳ ಓಡುತ್ತಿದೆ. ನನಗೆ ಗತ್ಯಂತರವಿಲ್ಲ. ಪುಟ 9ರಲ್ಲಿ ಜಿಲ್ಲೆಯ ಹೆಸರು ಮತ್ತು ಪಂಪುಸೆಟ್ಟುಗಳು, 1968ನೇ ವರ್ಷದ ಅಂತ್ಯದವರೆಗೆ ಎಷ್ಟು ಐ.ಪಿ. ಸೆಟ್ಟುಗಳು ಸರ್ವಿಸ್ ಆಗಿದೆ ಎಂಬ ಪಟ್ಟಿ ಇದೆ. 83,816 ಐ.ಪಿ. ಸೆಟ್ಟುಗಳು ಇಲ್ಲಿಯವರೆಗೂ ಸರ್ವಿಸ್ ಆಗಿದೆ. ಇದರಲ್ಲಿ ಗುಲ್ಬರ್ಗಾಕ್ಕೆ 1,162, ಬಿದರೆಗೆ 2,496, ರಾಯಚೂರಿಗೆ 1,383. ಹೀಗೆ ಸುಮಾರು 5 ಸಾವಿರ ಐ.ಪಿ. ಸೆಟ್ಟುಗಳು ಸರ್ವಿಸ್ ಆಗಿವೆ. 83,816 ಐ.ಪಿ. ಸೆಟ್ಟುಗಳಲ್ಲಿ

(ಶ್ರೀ ವೀರೇಂದ್ರ ಪಾಟೀಲ್)

ಎಷ್ಟೆಷ್ಟು ಐ.ಪಿ. ಸೆಟ್ಟುಗಳು ಸರ್ವಿಸ್ ಆಗಿವೆಯೆಂಬುದನ್ನು ಮಾನ್ಯ ಸದಸ್ಯರು ನೋಡಬೇಕು. ಯಾವ್ಯಾವ ಪ್ರದೇಶದಲ್ಲಿ ಏನೇನಾಗುತ್ತದೆಂಬುದನ್ನು ವಿಚಾರಮಾಡಬೇಕು. ಆ ಏರಿಯಾದಲ್ಲಿ ಎಲೆಕ್ಟ್ರಿಸಿಟಿ ಎಂಬ ಶಬ್ದ ಅವರ ಕಿವಿಗೆ ಬಿದ್ದಿದ್ದರೆ 1964ರಿಂದೀಚೆಗೆ ಅಷ್ಟೇ. ಗುಲ್ಬರ್ಗಾದಲ್ಲಿಯಾಗಲೀ, ಬಿಜಪುರದಲ್ಲಿಯಾಗಲಿ, ಬಿದರೆಯಲ್ಲಾಗಲೀ ಎಲೆಕ್ಟ್ರಿಸಿಟಿ ಎಂಬುದು ಗೊತ್ತಿರಲಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಹಾಗಾದರೆ 1965ರಿಂದ 1967ರವರೆಗೆ ಎಲೆಕ್ಟ್ರಿಸಿಟಿ ಬೋರ್ಡಿನವರು ಕೊಟ್ಟಿರುವ ವರದಿಯನ್ನು ಸುಡಬೇಕೇ ಅಥವಾ ಬಿಸಾಡಬೇಕೇ ? ಏತಕ್ಕೋಸ್ಕರ ಈ ಡಾಕ್ಯುಮೆಂಟ್ಸ್ ? ಗುಲ್ಬರ್ಗಾ ಡಿವಿಷನ್‌ಗೆ 24,400 ಪಂಪ್‌ಸೆಟ್ಟುಗಳು. ಅದರಲ್ಲಿ ಇದಕ್ಕೆ 5.4 ಲಕ್ಷ ರೂಪಾಯಿಗಳ ರಿವೈಜ್ಡ್ ಎಸ್ಟಿಮೇಟ್. ಹುಬ್ಬಳ್ಳಿ ಡಿವಿಷನ್ ಬೇರೆ ಹೇಳಿದೆ. ಹಾಸನ ಡಿವಿಷನ್ನಿಗೆ 4 ಲಕ್ಷ ರೂಪಾಯಿಗಳ ಎಸ್ಟಿಮೇಟ್. ಇದು 1964ರಿಂದ ಈಚೆಗೆ ಇಷ್ಟು ಆಗಿದೆಯಲ್ಲವೇ ?

Sri VEERENDRA PATIL.—At this rate it is impossible for me to reply to the Debate. It is open to the hon. Members to put any question after I complete the debate. If they have got any doubt in their mind, then they can ask for clarifications.

ಶ್ರೀ ಎಸ್. ಚನ್ನಯ್ಯ.—ಮಧ್ಯೆ ಮಾತನಾಡುವುದಕ್ಕೆ ಆಲೋ ಮಾಡಬೇಕು, ಸ್ವಾಮಿ. ಮಾತನಾಡಿದರೆ, ಮಾಡಕೂಡದು ಎಂದು ಹೇಳಿದರೆ ಹೇಗೆ ?

ಶ್ರೀ ಬಿ. ರಾಮೇಗೌಡ.—ಈಗ ಹೆಚ್ಚಿಸಿದ ರೇಟನ್ನು ಕಡಿಮೆಮಾಡುವುದಕ್ಕೆ ಏನು ಹೇಳುತ್ತೀರಿ ಎಂಬುದನ್ನು ಇಲ್ಲಿ ಹೇಳಿ. ಸುಮ್ಮನೆ ನಿಮ್ಮ ರಾಜಕೀಯ ಇಲ್ಲಿ ಏಕೆ ತಂದು ಇಡುತ್ತೀರಿ !

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ರಾಮೇಗೌಡರಿಗೆ ರಾಜಕೀಯ ಇರಲಿಕ್ಕಿಲ್ಲ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೆಲವರು ಕೇಳುವುದಕ್ಕೆ ಉತ್ತರ ಹೇಳುವ ಅಧಿಕಾರ ನಮಗೆ ಇಲ್ಲವೆ ? ಅವರು ಕೇಳಿದಾಗ ಹೇಳಬೇಕಾಗುತ್ತದೆ. 1964ರ ವರೆಗೆ ನಮ್ಮಲ್ಲಿ ವಿದ್ಯುಚ್ಛಕ್ತಿಯ ಅಭಾವ ಇತ್ತು. ನಮ್ಮಲ್ಲಿ ಮೊದಲನೆಯ ಶರಾವತಿ ಕಮಿಶನ್ ಆಗುವವರೆಗೆ ಇದರ ಅಭಾವ ಇತ್ತು.

Sri S. SIVAPPA.—It looks as if the Chief Minister is giving a personal explanation. We want him to reply to the debate.

Sri VEERENDRA PATIL.—That is what I am doing.

Sri S. SIVAPPA.—It looks as if he is a guilty man.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಶಿವಪ್ಪನವರ ಬಗ್ಗೆ ನನಗೆ ಆದರವಿದೆ. ಈ ರೀತಿ ಚಾರ್ಜಸ್ ಮಾಡಿದ್ದಾರೆಂದು ಯಾರಾದರೂ ಹೇಳಿದರೂ ನಾನು ನಂಬುವ ಹಾಗೆ ಇಲ್ಲ. ಎಲ್ಲರೂ ಈ ರೀತಿ ಮಾತನಾಡಿದರೆ, ನಾನು ಭಾಷಣ ಮಾಡುವ ಅವಶ್ಯಕತೆಯೇ ಇಲ್ಲ. ಏನೂ ಇಲ್ಲದೆ, ಕೆಸರೂ ಇಲ್ಲದೆ ನೀರು ಇದೆಯೆಂದು ಹೇಳುತ್ತಾರಲ್ಲ, ಅದು ನನಗೆ ನೋವಾಗುತ್ತದೆ. ನಾವು ಒಂದೇ ನಾಡು, ಒಂದೇ ದೇಶವೆಂದು ಹೇಳುತ್ತಿದ್ದೇವೆ. ಎಲ್ಲಿ ವಿದ್ಯುಚ್ಛಕ್ತಿ ಇಲ್ಲವೋ, ಅಲ್ಲಿಗೆ ವಿದ್ಯುಚ್ಛಕ್ತಿ ಕೊಡಬೇಕಾಗಿದೆ. ನಾನು ಹೇಳುವುದೇನೆಂದರೆ, 1964ರ ವರೆಗೆ ಕೊಟ್ಟಂತಹ ವಿದ್ಯುಚ್ಛಕ್ತಿಗಳಿಗೆ, ಐ. ಪಿ. ಸೆಟ್ಟುಗಳನ್ನು ಹಗಲು ನಡೆಸಬಾರದು, ರಾತ್ರಿ ನಡೆಸಿ ಎಂದು ಕೂಡ ಹೇಳುತ್ತಿದ್ದೆವು. ನಾವು ಒಂದು ಸ್ಟ್ಯಾಗರಿಂಗ್ ಮಾಡುತ್ತಿದ್ದೆವು. ಅದಕ್ಕೂ ಮೊದಲು ಹೈದರಾಬಾದ್ ಕರ್ಣಾಟಕದ ಮೂರು ಜಿಲ್ಲೆಗಳಲ್ಲಿ ಡೀಸಲ್ ಇಂಜಿನಿಂದ ವಿದ್ಯುಚ್ಛಕ್ತಿ ಹುಟ್ಟಿಸಿ ಕೊಡುತ್ತಿದ್ದರು. ಗುಲ್ಬರ್ಗದಲ್ಲಿ ಎರಡು ಕಡೆ ಇಂತಹದ್ದು ಇತ್ತು. ಬೇರೆ ಎಲ್ಲೂ ಇರಲಿಲ್ಲ. 1964ರಿಂದೀಚೆಗೆ ವಿದ್ಯುಚ್ಛಕ್ತಿ ಹೆಚ್ಚಾಗಿದೆ. ಆದಕ್ಕೆ ಲೈನ್ ಹಾಕಬೇಕಾದರೆ, ಖರ್ಚಾಗುತ್ತದೆ. ಸ್ಟೆಪ್ ಡೌನ್ ಸ್ಟೇಶನ್ಸ್ ಆಗಬೇಕಾಗಿದೆ. ಲೈನ್ ಹಾಕಬೇಕಾಗಿದೆ. ವಿದ್ಯುಚ್ಛಕ್ತಿ ಎಲ್ಲಿ ಮುಟ್ಟಿಸಬೇಕೋ, ಅಲ್ಲಿಗೆ ಲೈನ್ ಹಾಕದಿದ್ದರೆ, ಹೇಗೆ ಮಾಡುವುದಕ್ಕಾಗುತ್ತದೆ? ಎಲ್ಲಿ ವಿದ್ಯುಚ್ಛಕ್ತಿ ಇಲ್ಲವೋ, ಅಲ್ಲಿ ಲೈನ್ ಹಾಕಬೇಕಾದರೆ, ಟ್ರಾನ್ಸ್‌ಫಾರ್ಮರ್ ಹಾಕಬೇಕಾದರೆ, ಸ್ಟೆಪ್ ಡೌನ್ ಹಾಕಬೇಕಾದರೆ ಎಲ್ಲಾ ಖರ್ಚಾಗುತ್ತದೆ. ಅದನ್ನೆಲ್ಲಾ ಲೆಕ್ಕ ಹಾಕಿಕೊಂಡು, ಆ ಕಡೆ ಖರ್ಚು ಮಾಡಿದ್ದೀರಿ, ಈ ಕಡೆ ಖರ್ಚು ಮಾಡಿಲ್ಲವೆಂದು ಹೇಳಿದರೆ ಹೇಗೆ ? ಹಾಗೆ ಮಾತನಾಡುವುದಕ್ಕೆ ಮೊದಲು ಅಂಕೆ

ಸಂಖ್ಯೆಗಳನ್ನು ಸಂಗ್ರಹ ಮಾಡಿಕೊಂಡರೆ ಎಷ್ಟು ಹಳ್ಳಿಗಳಿಗೆ ಕೊಟ್ಟಿದ್ದಾರೆ, ಎಷ್ಟು ಐ. ಪಿ. ಸೆಟ್ಟುಗಳಿಗೆ ಕೊಟ್ಟಿದ್ದಾರೆ ಎಂಬುದು ಗೊತ್ತಾಗುತ್ತದೆ. ಅದನ್ನೆಲ್ಲಾ ನೋಡಿದ್ದರೆ, ಈ ಮಾತು ಬರುತ್ತಾ ಇರಲಿಲ್ಲ.

ಅಲ್ಲಿಂದ ಇನ್ನು ಕೆಲವು ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳುತ್ತೇನೆ. ನಮ್ಮಲ್ಲಿ ಹೆವಿ ಸ್ಟಾಕ್ ಇದೆಯೆಂದು ಕೆಲವರು ಹೇಳಿದರು. ಆದರೆ ಸ್ಟಾಕ್ ಇಡದೆ ಹೋದರೆ, ಕೆಲಸಗಳಾಗುವುದಕ್ಕೆ ಸಾಧ್ಯವಿಲ್ಲ. ಅನೇಕ ಸಲ ಅನೇಕ ತರದ ಕಂಪ್ಲೈಂಟ್ ಬರುತ್ತವೆ. ಕೆಲವರು ಸ್ಪೇರ್ ಪಾರ್ಟ್ಸ್ ಇಲ್ಲವೆಂದು ಹೇಳುತ್ತಿದ್ದಾರೆ. ಮತ್ತು ಹೆಚ್ಚು ಹೆಚ್ಚು ಕಾರ್ಯಕ್ರಮ ಹಾಕಿಕೊಳ್ಳಬೇಕಾದರೆ ಅದಕ್ಕೆ ಬೇಕಾಗುವ ಸ್ಟಾಕ್ಸ್ ಬೇಕು. ಮಾನ್ಯ ಶಿವಪ್ಪನವರು ಇಂಟರೆಸ್ಟ್ ಬಹಳ ಕೊಡುತ್ತಿದ್ದಾರೆ ಎಂದು ಹೇಳಿದರು. ಹೌದು, ಪ್ರತಿವರ್ಷ ಸಾಲ ಮಾಡುತ್ತಿದ್ದಾರೆ. ಇಲ್ಲದಿದ್ದರೆ, ಇಲ್ಲಿ ಸಾಕಷ್ಟು ದುಡ್ಡು ಇಲ್ಲದಿರುವುದರಿಂದ ಕಷ್ಟವಾಗುತ್ತದೆ. ಸರ್ಕಾರದವರೂ ಸಾಕಷ್ಟು ಸಹಾಯ ಮಾಡುವುದಕ್ಕಾಗುವುದಿಲ್ಲವೆಂದು ನಾವು ಅವರಿಗೆ ಹೇಳಿದ್ದೇವೆ. ಮತ್ತು ಏನು ಹೇಳಿದ್ದೇವೆಂದರೆ, ನಿಮ್ಮ ಪ್ರೋಗ್ರಾಂ ಯಾವ ರೀತಿಯಿಂದಲಾದರೂ ಕಡಿಮೆ ಮಾಡಬಾರದು. ಪ್ರತಿವರ್ಷ 20 ಸಾವಿರ ಐ.ಪಿ. ಸೆಟ್ಸ್ ಸರ್ವಿಸ್ ಮಾಡಬೇಕೆಂದು ಹೇಳುತ್ತಿದ್ದೇವೆ. 500 ಗ್ರಾಮಗಳಿಗೆ ಎಲೆಕ್ಟ್ರಿಫಿಕೇಶನ್ ಮಾಡಬೇಕೆಂದು ಹೇಳುತ್ತಿದ್ದೇವೆ. ಆದ್ದರಿಂದ ಸಾಲ ಮಾಡದೆ ಗತ್ಯಂತರವಿಲ್ಲ. ಸಾಲ ಹೆಚ್ಚಿದಂತೆ ಬಡ್ಡಿ ಹೆಚ್ಚು ಕೊಡಲೇಬೇಕಾಗುತ್ತದೆ.

ಅಲ್ಲಿಂದ ಎಂ. ಎಸ್. ಇ. ಬಿ. ಯನ್ನು ಸುಪರಸೀಡ್ ಮಾಡಬೇಕೆಂದು ಹೇಳಿದರು. ಅದು ಆಗಲಾರದ ವಿಚಾರ. ಬೇರೆ ಕಡೆ ಚೆನ್ನಾಗಿ ನಡೆಯುತ್ತಿದೆ, ಇಲ್ಲಿ ಚೆನ್ನಾಗಿ ನಡೆಯುತ್ತಿಲ್ಲವೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಕೆಲವು ಕುಂದುಕೊರತೆಗಳು ಇವೆ. ಅವುಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನನಗನಿಸುತ್ತದೆ, ಮುಂದಿನ ಚರ್ಚೆಗೆ ಇಂಥ ಕಠುತರವಾದ ಟೀಕೆ ಮಾಡುವುದಕ್ಕೆ ಅವಕಾಶ ಸಿಗಲಾರದು ಎಂದು. ಇವನ್ನೆಲ್ಲಾ ಗಮನಿಸಿ ಇಲಾಖೆಯವರು ಸರಿಪಡಿಸುವರೆಂದು ತಿಳಿದಿದ್ದೇನೆ. ಇನ್ನು ಅನೇಕ ಸದಸ್ಯರು ಹೇಳುತ್ತಾರೆ, ಈಗ ಕೈಗಾರಿಕೆಗಳಿಗೆ ಬಹಳ ಕಡಿಮೆ ದರದಲ್ಲಿ ಕೊಡುತ್ತಿದ್ದಾರೆ, ಮತ್ತು ಇತರ ರಾಜ್ಯಗಳಿಗೆ ಕಡಿಮೆ ರೇಟಿನಲ್ಲಿ ಕೊಡುತ್ತಿದ್ದಾರೆ, ಆದರೆ ರೈತರಿಗೆ ದರ ಜಾಸ್ತಿ ಮಾಡಿದ್ದಾರೆಂದು. ಪ್ರತಿಯೊಂದು ಕೈಗಾರಿಕೆಗೆ ಕೊಟ್ಟರೂ, ಅಲ್ಲಿಂದ 18 ಪರ್‌ಸೆಂಟ್ ಮಿನಿಮಂ ರಿಟರ್ನ್ ಬರುತ್ತದೆ. ಅವರ ಈ ಕೈಗಾರಿಕೆಗಳಿಗೂ ಹೆಚ್ಚಿನ ದರದಲ್ಲಿ ಸರಬರಾಜು ಮಾಡಿದರೆ, ಆ ಕೈಗಾರಿಕೆಗಳು ಉಳಿಯಲಾರದು. ಆ ಕೈಗಾರಿಕೆಗಳಿಂದ 18 ಪರ್‌ಸೆಂಟ್ ರಿಟರ್ನ್ ಬರುತ್ತಿದೆ. ಆದರೆ ರೂರಲ್ ಎಲೆಕ್ಟ್ರಿಫಿಕೇಶನ್, ಐ. ಪಿ. ಸೆಟ್ಟುಗಳಿಗೆ ಬಹಳ ಹಣ ಖರ್ಚುಮಾಡಿದರೂ, ಬಹಳ ಕಡಿಮೆ ರಿಟರ್ನ್ ಬರುತ್ತದೆ. ಬಹುಶಃ ಅವರ ಬಡ್ಡಿ ಕೂಡಾ ಬರುವುದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಒಂದರಲ್ಲಿ ಏನು ಲಾಸ್ ಆಗುತ್ತಿದೆ. ಅದನ್ನು ತುಂಬಿಕೊಳ್ಳುವುದಕ್ಕೆ ಎರಡನೇ ಸೆಕ್ಟರಿನಲ್ಲಿ ಇನ್‌ಕಂ ಅನ್ನು ತುಂಬಿಕೊಳ್ಳುತ್ತಿದ್ದೇವೆ. ಪೂರ್ತಿಯಾಗಿ ಇದನ್ನು ತುಂಬಲಾರದಂಥಹ ಪರಿಸ್ಥಿತಿ ಇದೆ. ಈ ಸೆಕ್ಟರಿನವರು ಕೇಳುತ್ತಿದ್ದಾರೆ, ಈ ಹಳ್ಳಿಗಳಿಗೆ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ನಮ್ಮ ಮೇಲೆ ಹೊರೆಹಾಕುತ್ತಿದ್ದೀರಾ ಎಂದು ಕೇಳುತ್ತಿದ್ದಾರೆ, ಡೊಮೆಸ್ಟಿಕ್ ಕನ್‌ಸಂಶನವರೂ ಕೇಳುತ್ತಿದ್ದಾರೆ. ಅದಕ್ಕಾಗಿ ಇಂಡಸ್ಟ್ರೀಸ್‌ಗೆ ಏನು ಕೊಡುತ್ತಿದ್ದೇವೆ ಅದರಿಂದ ಎಲೆಕ್ಟ್ರಿಸಿಟಿ ಬೋರ್ಡಿಗೆ ಲಾಭವಾಗುತ್ತಿದೆ, ಅದರಿಂದ ಲಾಸ್ ಆಗುತ್ತಿಲ್ಲ. ಈಗ ರೈತರಿಗೆ ವಿದ್ಯುಚ್ಛಕ್ತಿ ಉಪಯೋಗ ಮಾಡುವುದಕ್ಕೆ ಎಷ್ಟು ಮಿನಿಮಮ್ ಕೊಡಬೇಕೆಂದು ಹೇಳಿದ್ದಾರೆಯೋ ಅದೇ ರೀತಿ ಪ್ರತಿ ಇಂಡಸ್ಟ್ರೀಸ್‌ಗೂ ಹಾಕಿದ್ದಾರೆ. ಇದರಲ್ಲಿ ಯಾರು ಯಾರು ಕೆನ್‌ಸ್ಯೂಮರ್ಸ್ ಇದ್ದಾರೆ ಅವರಿಗೆ ಈ ದರವನ್ನು ಕಡಿಮೆ ಮಾಡಬೇಕು ಎನ್ನುವ ವಿಚಾರವನ್ನು ಎಲ್ಲರೂ ಹೇಳಿದ್ದಾರೆ.

1-00 P.M.

ಐ. ಪಿ. ಸೆಟ್ಟಿನ ಬಗ್ಗೆ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಆ ಕಡೆಯವರು ಮತ್ತು ಈ ಕಡೆಯವರು ಎಲ್ಲರೂ ಕೂಡ ಈ ಐ. ಪಿ. ಸೆಟ್ಟಿನ ಬಗ್ಗೆ ತಮ್ಮ ವಿಚಾರವನ್ನು ವ್ಯಕ್ತ ಮಾಡಿದ್ದಾರೆ. ಈ ಬಗ್ಗೆ ನನ್ನ ಪಾರ್ಟಿಯವರ ಒತ್ತಾಯ ಪೂರ್ತಿ ಇದೆ. ಒಂದುವೇಳೆ ಎಲೆಕ್ಟ್ರಿಸಿಟಿ ಬೋರ್ಡಿನವರು ಈಗ ವಿಧಿಸಿರತಕ್ಕ ರೇಟನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಸರ್ಕಾರದವರೇ ಸಬ್ಸಿಡೈಜ್ ಮಾಡಿ ವಿದ್ಯುಚ್ಛಕ್ತಿಯ ದರವನ್ನು ಕಡಿಮೆ ಮಾಡಬೇಕು ಎಂದು ನನ್ನ ಪಕ್ಷದ ಸದಸ್ಯರು ಒತ್ತಾಯದಿಂದ ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಅದು ಮಾನ್ಯ ಸದಸ್ಯರಿಗೆ ಮನವರಿಕೆ ಆಗಬಹುದು. ರೈತರಿಗೆ ಏನು ಕಷ್ಟ ಇದೆ ಎಂಬುದನ್ನು ನಾನು ಬಲ್ಲೆ. ರೈತರ ಕಷ್ಟವನ್ನು ಮರೆತು ಈ ರೀತಿ

(ಶ್ರೀ ವೀರೇಂದ್ರ ಪಾಟೀಲ್)

ವಿದ್ಯುಚ್ಛಕ್ತಿಯ ದರವನ್ನು ಹೆಚ್ಚಿಸಿದ್ದಾರೆ ಎನ್ನುವ ಮಾತನ್ನು ತಾವುಗಳು ಯಾರು ತಿಳಿದುಕೊಳ್ಳಬಾರದು. ಈಗ ನಮ್ಮ ರಾಜ್ಯದಲ್ಲಿ ಇರತಕ್ಕ ಹಳೆಯ ಪಂಪುಸೆಟ್ಟುಗಳಿಗೂ ಅದೇ ಮಿನಿಮಮ್ ಚಾರ್ಜಸ್ ಹಾಕಿದ್ದಾರೆ, ಹೊಸ ಪಂಪುಸೆಟ್ಟುಗಳಿಗೂ ಅದೇ ಮಿನಿಮಮ್ ಚಾರ್ಜ್ ಹಾಕುತ್ತಿದ್ದಾರೆ, ಹಿಂದೆ ಖರ್ಚು ಮಾಡಿ ಹಾಕಿದಂತಹ ಪಂಪುಸೆಟ್ಟುಗಳಿಗೆ ಅದೇ ಮಿನಿಮಮ್ ಹಾಕುವುದು ಸರಿಯಲ್ಲ ಎಂದು ಮಾನ್ಯ ಸದಸ್ಯರು ಕೆಲವರು ಹೇಳಿದರು. ಆದರೆ ಹಳೆಯ ಪಂಪುಸೆಟ್ಟುಗಳಿಗೆ ಹಿಂದಿನ ರೇಟನ್ನೇ ಹಾಕುವುದಕ್ಕಾಗುವುದಿಲ್ಲ. ಹಳೆಯ ಪಂಪುಸೆಟ್ಟಿಗೆ ಒಂದು ರೇಟು, ಹೊಸ ಪಂಪುಸೆಟ್ಟಿಗೆ ಒಂದು ರೇಟು ಎಂದು ಡಿಸ್‌ಕ್ರಿಮಿನೇಟ್ ಮಾಡುವುದಕ್ಕೆ ಕಾನೂನು ಪ್ರಕಾರ ಅವಕಾಶವಿಲ್ಲ. ಹಳೆಯ ಪಂಪುಸೆಟ್ಟುಗಳ ಬಗ್ಗೆ ಹೇಳಬೇಕಾದರೆ ಈಗ ಸುಮಾರು 95 ಸಾವಿರ ಪಂಪುಸೆಟ್ಟುಗಳಿಗೆ ಸರ್ವೀಸ್ ಮಾಡಿದ್ದಾರೆ. ಈ 95 ಸಾವಿರ ಪಂಪುಸೆಟ್ಟುಗಳ ಪೈಕಿ 1957ನೇ ಇಸವಿಗಿಂತ ಹಿಂದೆ ಸರ್ವೀಸ್ ಆದದ್ದು 11,065 ಪಂಪುಸೆಟ್ಟುಗಳು. 1957ರಿಂದ ಈಚೆಗೆ ಸರ್ವೀಸ್ ಆಗಿರುವುದು 84 ಸಾವಿರ ಪಂಪುಸೆಟ್ಟುಗಳು. ಬಹುಶಃ 10-12 ಪರ್ಸೆಂಟ್ ಹಳೆಯ ಸರ್ವೀಸ್ ಆದದ್ದು ಇದೆ. ಇನ್ನು ಸುಮಾರು 85 ಪರ್ಸೆಂಟ್ ಪಂಪುಸೆಟ್ಟುಗಳು ಇತ್ತೀಚೆಗೆ ಸರ್ವೀಸಾಗಿವೆ. ಆದ್ದರಿಂದ ಹೊಸ ಪಂಪುಸೆಟ್ಟುಗಳಿಗೇ ಬೇರೆ ರೇಟು, ಹಳೆಯ ಪಂಪುಸೆಟ್ಟುಗಳಿಗೇ ಬೇರೆ ರೇಟು ಹಾಕುವುದಕ್ಕೆ ಸಾಧ್ಯವಿಲ್ಲ. ಐ. ಪಿ. ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡುವುದಕ್ಕಾಗಿ ಎಲೆಕ್ಟ್ರಿಸಿಟಿ ಬೋರ್ಡಿನವರು 23 ಕೋಟಿ 64 ಲಕ್ಷ ಚಿಲ್ಲರೇ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದರಮೇಲೆ ಪ್ರತಿವರ್ಷ ಎಲೆಕ್ಟ್ರಿಸಿಟಿ ಬೋರ್ಡಿನವರು 4½-5 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ರಾಜ್ಯಸರ್ಕಾರದವರು ಪಂಪುಸೆಟ್ಟುಗಳನ್ನು ಸರ್ವೀಸ್ ಮಾಡುವುದಕ್ಕಾಗಿ ಒಂದು ಕೋಟಿ 30 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಅದರಿಂದ 20 ಸಾವಿರ ಪಂಪುಸೆಟ್ಟುಗಳನ್ನು ಸರ್ವೀಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಎಲೆಕ್ಟ್ರಿಸಿಟಿ ಬೋರ್ಡಿನವರನ್ನು ರಾಜ್ಯಸರ್ಕಾರದವರು ಕೇಳಿದ್ದಾರೆ. ಈ ಪ್ರೋಗ್ರಾಮನ್ನು ನಡೆಸಿಕೊಂಡು ಹೋಗುವುದಕ್ಕೆ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಹೆಚ್ಚಿನ ಹಣ ಬೇಕಾಗುತ್ತದೆ. ಅದಕ್ಕಾಗಿ ನಮ್ಮ ಹಣಕಾಸಿನ ಸಚಿವರು ಬೊಂಬಾಯಿಗೆ ಹೋಗಿ ಅಲ್ಲಿ ಬ್ಯಾಂಕಿನಲ್ಲಿ 5 ಕೋಟಿ ರೂಪಾಯಿಗಳನ್ನು ಸಾಲ ಕೊಡುವ ಬಗ್ಗೆ ಒಪ್ಪಿಸಿದ್ದಾರೆ. ಆದ್ದರಿಂದ ಬೊಂಬಾಯಿನಲ್ಲಿ 5 ಕೋಟಿ ರೂಪಾಯಿಗಳ ಸಾಲ ಸಿಕ್ಕುತ್ತದೆ ಎನ್ನುವ ಭರವಸೆ ಇದೆಯೆಂದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಬೊಂಬಾಯಿನಿಂದ ಬಂದಮೇಲೆ ನನಗೆ ತಿಳಿಸಿದ್ದಾರೆ. ಈ ರೀತಿಯಾಗಿ ಬ್ಯಾಂಕುಗಳಿಂದ ಎಲ್.ಐ.ಸಿ. ಯಿಂದ ಸಾಲ ಪಡೆದು ಪ್ರತಿವರ್ಷ ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ಸಾಮಾನ್ಯವಾಗಿ ರೂರಲ್ ಎಲೆಕ್ಟ್ರಿಫಿಕೇಷನ್‌ನಲ್ಲಿ ಲಾಸ್ ಆಗುತ್ತದೆ. ನಮ್ಮ ದೇಶದಲ್ಲಿ 100ಕ್ಕೆ 85ರಷ್ಟು ಜನ ಹಳ್ಳಿಗಳಲ್ಲಿ ಇರುತ್ತಾರೆ. ಸುಮಾರು 100ಕ್ಕೆ 45 50ರಷ್ಟು ರೂರಲ್ ಎಲೆಕ್ಟ್ರಿಫಿಕೇಷನ್, ಮತ್ತು ಐ.ಪಿ. ಸೆಟ್ಟುಗಳ ಮೇಲೆ ಖರ್ಚಾಗುತ್ತಿದೆ. ಇಲ್ಲಿಯವರೆಗೂ ಪಂಪುಸೆಟ್ಟುಗಳಮೇಲೆ ಖರ್ಚು ಮಾಡಿರತಕ್ಕ 23-24 ಕೋಟಿ ರೂಪಾಯಿಗಳಿಗೆ, ಬರುವಂತಹ ವರಮಾನ 147ಲಕ್ಷ ರೂಪಾಯಿಗಳು ಮಾತ್ರ. 1968ನೇ ಇಸವಿಯ ಲೆಕ್ಕದ ಪ್ರಕಾರ ಒಂದು ಐ.ಪಿ. ಸೆಟ್ಟಿಗೆ 160 ರೂಪಾಯಿ ರೆವಿನ್ಯೂ ಬರುತ್ತದೆ. ಆದರೆ ಬೋರ್ಡಿಗೆ ಅವರು ಒಂದು ಐ. ಪಿ. ಸೆಟ್ಟಿಗೆ ಸರ್ವಿಸ್ ಕೊಡಬೇಕಾದರೆ ಸರಾಸರಿ ಒಂದು ಸಾವಿರ, ಎರಡು ಸಾವಿರ, 3 ಸಾವಿರ, 5 ಸಾವಿರ, 10 ಸಾವಿರ 15 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಒಟ್ಟಿನ ಸರಾಸರಿಯನ್ನು ತೆಗೆದುಕೊಂಡರೆ ಒಂದು ಪಂಪುಸೆಟ್ಟಿಗೆ ಸರ್ವೀಸ್ ಕೊಡಬೇಕಾದರೆ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ 3,000 ರೂಪಾಯಿಗಳು ಖರ್ಚಾಗುತ್ತದೆ. ಒಂದು ಐ.ಪಿ. ಸೆಟ್ಟು ಸರ್ವೀಸ್ ಮಾಡಿದರೆ ಬೋರ್ಡಿನವರು ಅದಕ್ಕೆ 200 ರೂಪಾಯಿ ಬಡ್ಡಿ ಕೊಡಬೇಕಾಗುತ್ತದೆ. ಇವೊತ್ತು ಎಲೆಕ್ಟ್ರಿಸಿಟಿ ಬೋರ್ಡಿನವರು ಬ್ಯಾಂಕಿಗೆ ಅವರು ತಂದಂಥ ಸಾಲಕ್ಕೆ 7—8 ಪರ್ಸೆಂಟ್ ಬಡ್ಡಿಯನ್ನು ಕೊಡುತ್ತಿದ್ದಾರೆ. ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಇಂಟರೆಸ್ಟ್ ಚಾರ್ಜಸ್, ಡಿಪ್ರಿಸಿಯೇಷನ್ ಮೇಂಟೆನೆನ್ಸ್, ಆಪರೇಷನ್ ಚಾರ್ಜಸ್ ಎಲ್ಲಾ ಹೋಗಿ 18 ಪರ್ಸೆಂಟ್ ರಿಟರ್ನ್ ಬಂದಿದೆ, ವಿದ್ಯುಚ್ಛಕ್ತಿ ಮಂಡಲಿ ನೋ ಲಾಸ್ ನೋ ಪ್ರಾಫಿಟ್ ಬೇಸಿಸ್‌ಮೇಲೆ ಕೆಲಸ ಮಾಡಿದರೆ ಪ್ರತಿ ಪಂಪುಸೆಟ್ಟಿಗೆ ಒಂದು ವರ್ಷಕ್ಕೆ 540 ರೂಪಾಯಿ ಆದಾಯ ಬರಬೇಕು. ಆದರೆ ಈಗ ಒಂದು ಪಂಪುಸೆಟ್ಟಿಗೆ ಆದಾಯ ಬರುವಂಥಾದ್ದು 160 ರೂಪಾಯಿಗಳು, ಮಿನಿಮಮ್ ಚಾರ್ಜಸ್ ಅನ್ನು ಜಾಸ್ತಿ ಮಾಡಿರುವುದರಿಂದ 240 ರೂಪಾಯಿಗಳು ಒಂದು ವರ್ಷಕ್ಕೆ ಆದಾಯ ಬರುತ್ತದೆ. ಇದರಿಂದ ವಿದ್ಯುಚ್ಛಕ್ತಿ ಬೋರ್ಡಿಗೆ ಒಂದು ಐ. ಪಿ. ಸೆಟ್ಟಿಗೆ ಒಂದು ವರ್ಷಕ್ಕೆ 3 0 ರೂಪಾಯಿಗಳು ಲಾಸ್ ಆಗುತ್ತದೆ. ಈಗ 20 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಬೋರ್ಡಿನವರು ಸರ್ವೀಸ್ ಮಾಡುತ್ತಾರೆ. ಇದರಿಂದ ಪ್ರತಿವರ್ಷ ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಎಷ್ಟು ಹಾನಿಯಾಗುತ್ತದೆ,

ಎಷ್ಟು ಲಾಸ್ ಆಗುತ್ತದೆ ಎಂಬುದು ನಾನು ಕೊಟ್ಟಂತಹ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಇದೇರೀತಿ ನಮ್ಮ ಅಕ್ಕಪಕ್ಕದ ಪ್ರಾಂತಗಳವರು ಪಂಪುಸೆಟ್ಟುಗಳಮೇಲೆ ವಿಧಿಸಿರತಕ್ಕ ದರಕ್ಕೂ ನಮ್ಮ ರಾಜ್ಯದಲ್ಲಿರುವ ದರಕ್ಕೂ ಹೋಲಿಸಿ ನೋಡಿದರೆ ನಮ್ಮ ರಾಜ್ಯದ ರೈತರಮೇಲೆ ಹೆಚ್ಚಿನ ವಿದ್ಯುಚ್ಛಕ್ತಿ ದರವನ್ನು ಹಾಕಿಲ್ಲ ಎಂದು ಗೊತ್ತಾಗುತ್ತದೆ. ನಮ್ಮ ನೆರೆ ಪ್ರಾಂತ್ಯಗಳವರು ಪಂಪು ಸೆಟ್ಟುಗಳಿಗೆ ಮಿನಿಮಮ್ ಚಾರ್ಜಸ್ 50-75 ರೂಪಾಯಿಗಳ ದರವನ್ನು ವಿಧಿಸಿದ್ದಾರೆ. ಈ ದೃಷ್ಟಿ ಯಿಂದ ನಮ್ಮ ರಾಜ್ಯದಲ್ಲಿ ಪಂಪುಸೆಟ್ಟುಗಳಿಗೆ ಉಪಯೋಗಿಸತಕ್ಕ ವಿದ್ಯುಚ್ಛಕ್ತಿಯ ದರವನ್ನು ವಿಧಿ ಸಿರುವುದು ಅಷ್ಟು ಹೆಚ್ಚಾಗಿದೆ ಎಂದು ಅನಿಸುವುದಿಲ್ಲ. ಇವೊತ್ತು ನಮಗೆ ಹೆಚ್ಚಿನ ಹಣ ಸಹಾಯ ಬೇಕಾಗಿರುವುದರಿಂದ ವರ್ಲ್ಡ್ ಬ್ಯಾಂಕಿನಿಂದ ಹಣಸಹಾಯವನ್ನು ಪಡೆಯುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ರೀತಿಯಾಗಿ ಪ್ರತಿವರ್ಷ ಬಹಳ ಹೇರಳವಾಗಿ ವಿದ್ಯುಚ್ಛಕ್ತಿ ಬೋರ್ಡಿನವರು ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮಲ್ಲಿ ವಿದ್ಯುಚ್ಛಕ್ತಿಗೆ ಡಿಮ್ಯಾಂಡ್ ಹೆಚ್ಚಾಗಿದೆ. ಪ್ರತಿ ಜಿಲ್ಲೆಯವರು ನಮಗೆ ವಿದ್ಯುಚ್ಛಕ್ತಿ ಹೆಚ್ಚು ಬೇಕು ಎಂದು ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ನಾವು ವಿದ್ಯುಚ್ಛಕ್ತಿ ಮಂಡಲಿಯವರಿಗೆ ಹೇಳುತ್ತಿದ್ದೇವೆ ನಿಮ್ಮ ಕಾರ್ಯಕ್ರಮವನ್ನು ಹೆಚ್ಚು ಮಾಡಿಕೊಂಡು ಹೋಗಿ ಎಂದು. ಎಷ್ಟರಮಟ್ಟಿಗೆ ಹಣದ ಸಹಾಯ ಸಿಕ್ಕುತ್ತದೆ ಅಷ್ಟರ ಮಟ್ಟಿಗೆ ಅವರು ಕಾರ್ಯಕ್ರಮವನ್ನು ಹಾಕಿಕೊಂಡು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಬಹುಶಃ ಅವರು ಇವೊತ್ತು ಬಹಳ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಗ್ರಾಮಾಂತರ ಪ್ರದೇಶಕ್ಕೆ ಸಾವಿರಾರು ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದೆ. ಸುಮಾರು 95 ಸಾವಿರ ಐ.ಪಿ. ಸೆಟ್ಟು ಗಳಿಗೆ ಸರ್ವೀಸ್ ಮಾಡಿದ್ದಾರೆ. ಕನ್‌ಸಾಲಿಡೇಷನ್ ವರ್ಕ್ ಸರಿಯಾಗಿ ಆಗಬೇಕು, ಎಫಿಷಿಯೆಂಟಾಗಿ ಕರೆಂಟ್ ಸಪ್ಲೈ ಬೇಕು, ಸರ್ವೀಸ್ ಬೇಕು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕನ್ ಸಾಲಿಡೇ ಷನ್ ವರ್ಕ್ ಹೆಚ್ಚಿನ ರೀತಿಯಲ್ಲಿ ಸರಿಯಾದ ರೀತಿಯಲ್ಲಿ ಮಾಡಬೇಕಾದರೆ ಬಹಳ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಸಬ್ ಸ್ಟೇಷನ್ ಮಾಡಬೇಕು, ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕಬೇಕು. ಸ್ವಿಚ್ ಗೇರ್ ಕಂಟ್ರೋಲ್ ಪ್ಯಾನಲ್ ಬದಲಾಯಿಸಬೇಕಾಗುತ್ತದೆ. ಇವೆಲ್ಲವನ್ನೂ ಮಾಡಬೇಕಾದರೆ ಹೇರಳವಾಗಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಈಗ ಹಣ ಇಲ್ಲ.

ಹಣ ಅವರ ಹತ್ತಿರ ಹೆಚ್ಚು ಇಲ್ಲ. ಹೆಚ್ಚು ಹಣ ಒದಗಿಸಿದರೆ ಇನ್ನೂ ಹೆಚ್ಚಿನ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಅವರು ಪದೇ ಪದೇ ಹೇಳುತ್ತಿದ್ದಾರೆ. ಜನರು ಸಹ ವಿದ್ಯುಚ್ಛಕ್ತಿ ಬೇಕೆಂದು ಬೇಡುತ್ತಿದ್ದಾರೆ. ಜನರ ಬೇಡಿಕೆಯನ್ನು ಪೂರೈಸುವುದಕ್ಕಾಗಿ ಡೆವಲಪ್‌ಮೆಂಟಿಗಾಗಿ ಹೆಚ್ಚು ಹಣ ಖರ್ಚು ಮಾಡಿ ಎಂದು ನಾವು ಸಹ ಅವರಿಗೆ ಒತ್ತಿ ಒತ್ತಿ ಹೇಳುತ್ತಿದ್ದೇವೆ. ಇಂಟ್ರಪ್‌ಷನ್ ಕೆಲವು ಕಡೆ ದಿನಕ್ಕೆ ಎರಡು—ಮೂರು ಸಾರಿ ಆಗುತ್ತಿದೆ, ಮತ್ತೆ ಕೆಲವು ಕಡೆ ದಿನಗಟ್ಟಲೆ ಅವರೆ ಇನ್ನೂ ಕೆಲವು ಕಡೆ ಎಂಟು ದಿವಸದವರೆಗೆ ಹೋದ ಕರೆಂಟ್ ಬರುತ್ತಿಲ್ಲ. ಈ ವಿಚಾರ ಕೂಡ ಗೊತ್ತಿದೆ. ಒಂದೊಂದು ಟ್ರಾನ್ಸ್‌ಫಾರಮರ್ ಎರಡರಿಂದ ನಾಲ್ಕು ಲೈನ್‌ಗಳನ್ನು ಕಂಟ್ರೋಲ್ ಮಾಡಬೇಕಾ ಗಿದೆ. ಈ ಕಾರಣದಿಂದ ಇಂಟ್ರಪ್‌ಷನ್ ಆಗುತ್ತಿದೆ. ಇದನೆಲ್ಲಾ ಸರಿಪಡಿಸುವುದಕ್ಕೆ ಬಹಳಮಟ್ಟಿಗೆ ಹಣ ಖರ್ಚು ಮಾಡಬೇಕಾಗುತ್ತದೆ. ಈಗ ನಡೆಯುತ್ತಿರುವ ಕೆಲಸ ಸಮಾಧಾನವಾಗಿಲ್ಲ. ವಿದ್ಯುಚ್ಛಕ್ತಿ ಬೋರ್ಡಿಗೆ ಎಷ್ಟೇ ಕಷ್ಟಗಳು ಇದ್ದರೂ ಕೂಡ ಇನ್ನೂ ಹೆಚ್ಚಿನ ಭಾಗಕ್ಕೆ ವಿದ್ಯುಚ್ಛಕ್ತಿ ಯನ್ನು ಒದಗಿಸಬೇಕೆಂದು ನಾವು ಹೇಳುತ್ತಿದ್ದೇವೆ. ಅವರು ಸಹ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ಅನೇಕ ಕುಂದುಕೊರತೆಗಳು ಮತ್ತು ನ್ಯೂನತೆಗಳು ಅಲ್ಲಿ ಇವೆ. ಇವುಗಳನ್ನು ಸರಿಪಡಿಸಿ ಕೊಳ್ಳಲು ಬೋರ್ಡಿನವರಿಗೆ ಸಾಕಷ್ಟು ಅವಕಾಶ ಇದೆ ಎಂದು ತಿಳಿದಿದ್ದೇನೆ. ರೈತರಮೇಲೆ ಹೆಚ್ಚಿನ ಹೊರೆ ಬೀಳದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಸದಸ್ಯರೆಲ್ಲರೂ ಕೂಡ ಹೇಳಿದ್ದಾರೆ. ಅದನ್ನು ನಾನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ. ಆ ವಿಚಾರದಲ್ಲಿ ಒಂದು ನಿರ್ಣಯಕ್ಕೆ ಬರು ವುದಕ್ಕೆ ಸಾಧ್ಯವಾಗಬಹುದು ಎಂದು ಕಾಣುತ್ತದೆ. ರೈತರ ಮೇಲಿನ ಹೊರೆಯನ್ನು ಕಡಿಮೆ ಮಾಡಿದರೆ, ಆ ಹೊರೆಯನ್ನು ಹೊರುವುದಕ್ಕೆ ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಸಾಧ್ಯವಿದೆಯೇ ಎಂಬು ದನ್ನು ಯೋಚನೆ ಮಾಡಿ, ಅವರಮೇಲೆ ಬೀಳುವ ಹೊರೆಯನ್ನು ತಪ್ಪಿಸಲು ಸಬ್ಸಿಡಿ ಕೊಡಬೇಕೇ ಅಥವಾ ಏನು ಮಾಡಬೇಕು ಎಂಬ ವಿಚಾರ ಇದೆ. ರೈತರ ಮೇಲೆ ಹೆಚ್ಚಿನ ಹೊರೆ ಹಾಕುವುದು ಸರಿ ಯಲ್ಲ ಎಂಬುದನ್ನು ಎಲ್ಲಾ ಭಾಗದ ಪ್ರತಿನಿಧಿಗಳು ವಿಶೇಷವಾಗಿ ನಮ್ಮ ಪಕ್ಷದ ಪ್ರತಿನಿಧಿಗಳು ಒಂದೇ ಸಮನೆ ಹೇಳುತ್ತಿದ್ದಾರೆ. ಅದನ್ನು ನಾನು ಮನಗಂಡಿದ್ದೇನೆ. ಮತ್ತು ಮನವರಿಕೆ ಯಾಗಿದೆ. ರೈತರಮೇಲೆ ಹೆಚ್ಚಿನ ಹೊರೆ ಬೀಳದಂತೆ ಮಾಡಲು ನನ್ನ ಸರ್ವಪ್ರಯತ್ನವನ್ನೂ ಮಾಡು ತ್ತೇನೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಶಿವಪ್ಪ.—ನಮ್ಮ ರಾಜ್ಯದಲ್ಲಿ ನೀರಾವರಿ ಸೌಕರ್ಯ ಸರಾಸರಿ 8 ಭಾಗ ಮಾತ್ರ ಇದೆ. ಇಡೀ ದೇಶಕ್ಕೆ ಹೋಲಿಕೆ ಮಾಡಿ ನೋಡಿದರೆ ನಮ್ಮ ರಾಜ್ಯದ್ದು ಕಡಿಮೆ ಇದೆ. ನೀರಾವರಿ ಸೌಕರ್ಯವನ್ನು ಒದಗಿಸಿಕೊಡತಕ್ಕಂಥ ಅನುಕೂಲ ಸರ್ಕಾರಕ್ಕೆ ಇಲ್ಲದಿರುವುದರಿಂದ ರೈತರೇ ಭೂ

(ಶ್ರೀ ಎಸ್. ಶಿವಪ್ಪ)

ಗರ್ಭದಲ್ಲಿರತಕ್ಕಂಥ ನೀರನ್ನು ಉಪಯೋಗಿಸಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಭೂ ಗರ್ಭದಲ್ಲಿ ಇರುವ ನೀರನ್ನು ಮೇಲೆ ಎತ್ತಲು ಉಪಯೋಗಿಸುವ ಪಂಪ್‌ಸೆಟ್ಟಿನ ಮೇಲೆ ದರವನ್ನು ಜಾಸ್ತಿ ಮಾಡಿರುವುದು ರೈತನ ಹಿತಕ್ಕೆ, ರಾಜ್ಯದ ಹಿತಕ್ಕೆ ಧಕ್ಕೆಯಾಗಿದೆ. ಈ ವಿಚಾರದಲ್ಲಿ ಮುಖ್ಯಮಂತ್ರಿಗಳು ತೇಲುವಮಾತನ್ನು ಹೇಳದೆ ಹಿಂದಿನ ದರವನ್ನೇ ವಿಧಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಒಂದು ಐ.ಪಿ. ಸೆಟ್‌ಗೆ 3,000 ಸಾವಿರ ಚಿಲ್ಲರೆ ಖರ್ಚು ಬರುತ್ತದೆಂದು ಮುಖ್ಯಮಂತ್ರಿಗಳು ಹೇಳಿದರು. ನನಗೆ ಅನುಮಾನ ಬಂದಿದೆ. ಈ ಬಗ್ಗೆ ಬೇರೆ ರಾಜ್ಯದಲ್ಲಿ ಎಷ್ಟು ಖರ್ಚು ಬರುತ್ತದೆಂದು ನೋಡಿಕೊಂಡು ಈ ಖರ್ಚನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲವೇ ಎಂಬುದನ್ನು ನೋಡಬೇಕು. ಆ ಭಾಗ ಈ ಭಾಗ ಎಂದು ಮಾತನಾಡಬೇಡಿ, ಆ ರೀತಿ ಮಾತನಾಡಿದರೆ ಅದು ಪತ್ರಿಕೆಗಳಲ್ಲಿ ಬರುತ್ತದೆ, ನಂತರ ಜನರು ತಪ್ಪು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆಂದು ಮುಖ್ಯಮಂತ್ರಿಗಳು ಕಳಕಳಿಯಿಂದ ಹೇಳಿದರು. ಮುಖ್ಯಮಂತ್ರಿಗಳಲ್ಲಿರುವ ಸಂಶಯವನ್ನು ನಿವಾರಣೆ ಮಾಡುವ ಸನ್ನಿವೇಶವಿದೆ. ಏಕೆಂದರೆ ನಾವು ಏನು ಟೀಕೆ ಮಾಡುತ್ತೇವೋ ಅದನ್ನು ಪತ್ರಿಕೆಗಳಲ್ಲಿ ಹಾಕುತ್ತಿಲ್ಲ. ಮತ್ತು ಹಿತರಕ್ಷಣೆ ಮಾಡುತ್ತಿದ್ದಾರೆ. ಆದ್ದರಿಂದ ಆ ಒಂದು ಸಂಶಯ ಮುಖ್ಯಮಂತ್ರಿಗಳಿಗೆ ಬೇಡ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಬೋರ್ಡಿಗೆ ನಷ್ಟವಾಗುತ್ತಿರುವುದರಿಂದ ಐ.ಪಿ. ಸೆಟ್ಟುಗಳ ಮೇಲೆ ಮತ್ತು ನಗರದ ಬಳಕೆದಾರರಮೇಲೆ ಟ್ಯಾರಿಫ್ ರೇಟನ್ನು ಜಾಸ್ತಿ ಮಾಡಬೇಕಾಯಿತು ಎಂದು ಹೇಳಿದಿರಿ. ಈ ವಿಚಾರದಲ್ಲಿ ಸರ್ಕಾರದವರು ಎರಡು ಮೂರು ಅಂಶಗಳನ್ನು ಗಮನಿಸಬೇಕು. ರೂರಲ್ ಎಲೆಕ್ಟ್ರಿಫಿಕೇಶನ್‌ಗೆ ಮಹಾರಾಷ್ಟ್ರ, ಗುಜರಾತ್, ತಮಿಳುನಾಡು ಮುಂತಾದ ರಾಜ್ಯಗಳಲ್ಲಿ ಸಬ್‌ವೆನ್‌ಷನ್ ಕೊಡುತ್ತಿದ್ದಾರೆ 59 ಮತ್ತು 63ನೇ ಕ್ಲಾಸ್ ಪ್ರಕಾರ ಸಬ್‌ವೆನ್‌ಷನ್ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶವಿದೆ ಎಂದು ಕೇರಳಾ ಹೈಕೋರ್ಟಿನ ಜಡ್ಜ್ ಆರ್ ಶಂಕರನ್ ಅವರು ತೀರ್ಮಾನ ಕೊಟ್ಟಿದ್ದಾರೆ. ಆದಕಾರಣ ನಮ್ಮ ಸರ್ಕಾರದವರು ಸಬ್‌ವೆನ್‌ಷನ್ ಕೊಟ್ಟರೆ ಲಾಸ್ ಪ್ರಶ್ನೆ ಬರುವುದಿಲ್ಲ. ಎರಡನೆಯ ಅಂಶ ಏನೆಂದರೆ, ಎಂ.ಎಸ್.ಇ.ಬಿ. ಅವರು ಕಾಸ್ಟಿಂಗ್ ಆಫ್ ದಿ ಎಲೆಕ್ಟ್ರಿಸಿಟಿ ಪರ್ ಯೂನಿಟ್ ಮಾಡಿರುವುದು ಸರಿಯಲ್ಲವೆಂದು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೇಳುತ್ತಾರೆ. ಮತ್ತು ಪ್ರೊಡಕ್ಷನ್ ಎರಡು ಪೈಸೆಯಾಗುತ್ತದೆ, ಎಂ.ಎಸ್.ಇ.ಬಿ. ಅವರು ಸರ್ಕಾರದಿಂದ ಕೊಂಡುಕೊಳ್ಳುವುದು 4.2 ಪೈಸೆಯಂತೆ ಎಂದು ಪಿ.ಎ.ಸಿ. ಅವರು ಹೇಳಿದ್ದಾರೆ. ಈ ಕಾರಣದಿಂದ ಬೋರ್ಡಿನವರಿಗೆ ಲಾಸ್ ಆಗುತ್ತಿರಬಹುದು. ಅಲ್ಲದೆ ಮದ್ರಾಸ್ ಸರ್ಕಾರಕ್ಕೆ ಈಗ ವಿದ್ಯುಚ್ಛಕ್ತಿಯನ್ನು ಮಾರಾಟ ಮಾಡುತ್ತಿದ್ದಾರೆ, ಆ ಮಾರಾಟದ ಕ್ರಮ ಸರಿಯಿಲ್ಲ, ಅದರಿಂದ ಕೂಡ ಲಾಸ್ ಆಗುತ್ತಿದೆ ಎಂದು ತಿಳಿದುಬಂದಿದೆ. ಇನ್ನು ಕೊನೆಯದಾಗಿ ಇಲ್ಲಿ ಕೊಟ್ಟಿರುವ ಅಂಕಿಗಳನ್ನು ನೋಡಿದರೆ, ಇಂಡಸ್ಟ್ರಿಗಳಿಂದ 1967-68ರಲ್ಲಿ 645 ಲಕ್ಷ ರೂಪಾಯಿಗಳು, ಡೊಮೆಸ್ಟಿಕ್ ಕನ್ಸ್ಯೂಮರ್ಸ್ ಕಡೆಯಿಂದ 411 ಲಕ್ಷ ರೂಪಾಯಿಗಳು, ಇರಿಗೇಷನ್ ಪಂಪ್‌ಸೆಟ್ಟುಗಳಿಂದ 119 ಲಕ್ಷ ರೂಪಾಯಿಗಳು ವರಮಾನ ಬಂದಿದೆ ಎಂದು ಹೇಳಿದ್ದಾರೆ. ಇಂಡಸ್ಟ್ರೀಗಳಿಗೆ ಒದಗಿಸುವ ವಿದ್ಯುಚ್ಛಕ್ತಿಯಮೇಲೆ ಇನ್ನೂ ಹೆಚ್ಚಿನ ದರವನ್ನು ಹಾಕುವುದಕ್ಕೆ ಆಗುವುದಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಜಿ. ರಾಮೇಗೌಡ.—4 ! ಯೂನಿಟ್ ಪಂಪ್‌ಸೆಟ್ಟು ಮೂಲಕ ಖರ್ಚಾಗಿರುವುದಕ್ಕೆ 12 ರೂಪಾಯಿ 87 ಪೈಸೆ ಚಾರ್ಜ್ ಮಾಡಿರುವ ಒಂದು ಬಿಲ್ ನನ್ನಲ್ಲಿ ಇದೆ. ಅಂದರೆ ಒಂದು ಯೂನಿಟ್‌ಗೆ 32 ಪೈಸೆಯಂತೆ ಚಾರ್ಜು ಮಾಡಿದ್ದಾರೆ. ಕೈಗಾರಿಕೆಗೂ ಇದಕ್ಕೂ ಏನು ತಾರತಮ್ಯ ತೋರಿಸಿದ್ದೀರಿ ಎಂಬುದನ್ನು ಹೇಳಬಲ್ಲಿರಾ ?

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈಗ ವಿದ್ಯುಚ್ಛಕ್ತಿ ಮಂಡಲಿಯಲ್ಲಿರುವ ಅಧ್ಯಕ್ಷರ ಬಗ್ಗೆ ಹೇಳಿದ್ದೇನೆ. ಇನ್ನು ಮುಂದೆ ನಿವೃತ್ತ ಅಧಿಕಾರಿಗಳನ್ನು ನೇಮಕ ಮಾಡಬಾರದೆಂದು ಹೇಳಿದ್ದೇವೆ. ಮತ್ತು ಬೋರ್ಡಿನಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ನಾವು ತಮಾಷೆಗೆ ಹೇಳಲಿಲ್ಲ. ಆ ಬಗ್ಗೆ ಒಂದು ತನಿಖಾ ಮಂಡಲಿಯನ್ನು ನೇಮಿಸಬೇಕು. ಈ ಬಗ್ಗೆ ಮುಖ್ಯಮಂತ್ರಿಗಳ ಅಭಿಪ್ರಾಯ ಏನು ?

ಶ್ರೀ ಬಿ. ಭಾಸ್ಕರಶೆಟ್ಟಿ.—ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಐ.ಪಿ. ಸೆಟ್ಟುಗಳ ಮೇಲಿನ ಮಿನಿಮಮ್ ದರವನ್ನು ಜಾಸ್ತಿ ಮಾಡಿದ್ದರಿಂದ 22 ಲಕ್ಷ ರೂಪಾಯಿಗಳ ಹೆಚ್ಚಿನ ವರಮಾನ ಬರುತ್ತದೆಂದು. ಇವತ್ತು ಹೇಳುತ್ತಾರೆ, ಮೊದಲು ಒಂದು ಪಂಪ್‌ಸೆಟ್ಟಿನಿಂದ 160 ರೂಪಾಯಿಗಳ

ಆದಾಯ ಬರುತ್ತಿದ್ದರೆ ಈಗ 240 ರೂಪಾಯಿಗಳ ಆದಾಯ ಬರುತ್ತಿದೆ ಎಂದು. ಒಂದು ಪಂಪ್ ಸೆಟ್ಟಿಗೆ 80 ರೂಪಾಯಿಗಳ ವರಮಾನ ಹೆಚ್ಚು ಬಂದಂತೆ ಆಗುತ್ತದೆ. ಒಟ್ಟು ಲೆಕ್ಕ ತೆಗೆದುಕೊಂಡರೆ 76 ಲಕ್ಷ ರೂಪಾಯಿಗಳ ಹೆಚ್ಚಿನ ವರಮಾನ ಬರುವಂತೆ ತೋರುತ್ತದೆ. ಈ ರೀತಿ ಜನತೆಗೆ ವಂಚಿಸುವ ಅಂಕಿಅಂಶಗಳನ್ನು ಏತಕ್ಕೆ ಕೊಡುತ್ತೀರಿ ಎಂದು ಕೇಳುತ್ತೇನೆ. ಯಾವ ಅಂಕಿಅಂಶಗಳು ನಿಜ ಎಂಬುದನ್ನು ಹೇಳಬೇಕು.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಪಂಪ್‌ಸೆಟ್ಟಿನ ಮೇಲಿನ ದರ ನಮ್ಮ ರಾಜ್ಯಕ್ಕಿಂತ ಆಂಧ್ರದಲ್ಲಿ ಜಾಸ್ತಿ ಇದೆ ಎಂದು ಹೇಳುತ್ತೀರಿ. ಅಲ್ಲಿ ಒಬ್ಬ ರೈತ ಒಂದು ಐ.ಪಿ. ಸೆಟ್‌ನಿಂದ 5 ಎಕರೆ ಸಾಗು ಮಾಡುತ್ತಾನೆ. ಮತ್ತು ಅಲ್ಲಿ ನೀರಿನ ಅನುಕೂಲ ಚೆನ್ನಾಗಿದೆ. ಆದರೆ ಇಲ್ಲಿ ನೀರಿನ ಅನುಕೂಲ ಸಾಕಷ್ಟು ಇಲ್ಲ. ಮತ್ತು ಒಬ್ಬ ರೈತ ಒಂದು ಐ.ಪಿ. ಸೆಟ್‌ನಿಂದ ಎರಡು ಎಕರೆ ಮಾತ್ರ ಸಾಗು ಮಾಡುತ್ತಾನೆ. ಇರಿಗೇಷನ್ ಪ್ರಾಜೆಕ್ಟ್ ಪರಿಯದಲ್ಲಿರುವ ಜಮೀನಿಗೆ ಎಕರೆಗೆ 16 ರೂಪಾಯಿಗಳಂತೆ ಕಂದಾಯ ಹಾಕುತ್ತೀರಿ, ಸಬ್‌ಸಾಯಿಲ್‌ಗೂ ಚಾರ್ಜ್ ಮಾಡುತ್ತೀರಿ, ಇಷ್ಟೆಲ್ಲಾ ಚಾರ್ಜ್ ಮಾಡಿ ಪಂಪ್‌ಸೆಟ್ಟಿನ ಮೇಲಿನ ಮಿನಿಮಮ್ ದರವನ್ನು ಒಂದಕ್ಕೆ ಎರಡರಷ್ಟು ಜಾಸ್ತಿ ಮಾಡಿರುವುದು ಸರಿಯೇ ಎಂಬುದನ್ನು ಹೇಳಬೇಕು; ಕರೆಂಟ್ ಉಪಯೋಗಿಸಲಿ ಬಿಡಲಿ, ಮಿನಿಮಮ್ ದರವನ್ನು ಕಟ್ಟಲೇಬೇಕು, ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದಕಾರಣ ಈ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್.—ಒಂದು ತಾಲ್ಲೂಕಿನಲ್ಲಿ ಒಂದೆರಡು ಹಳ್ಳಿಗಳಿಗೆ ಮಾತ್ರ ಲೈನುಗಳನ್ನು ಎಳೆದು ದೀಪಗಳ ಸೌಕರ್ಯ ಕೊಡುವಾಗ ದಾರಿಯಲ್ಲಿ ಬೇರೆ ಕೆಲವು ಊರುಗಳಿದ್ದರೆ ಅವರಿಗೂ ದೀಪಗಳ ಸೌಕರ್ಯ ಸಿಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ದೊಡ್ಡಬೋರೇಗೌಡ.—ಐ. ಪಿ. ಸೆಟ್ಟುಗಳಿಗಾಗಿ ನಮ್ಮ ಕಡೆಯಿಂದ ಕೆಲವರು ಅರ್ಜಿಗಳನ್ನು ಹಾಕಿದ್ದರೂ ಅದಕ್ಕೆ ಸರಕಾರದ ಕಡೆಯಿಂದ ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತ ಬರುತ್ತಿದ್ದಾರೆ. ಇದನ್ನು ಇನ್ನೂ ಎಷ್ಟು ವರ್ಷಗಳಕಾಲ ಪರಿಶೀಲನೆ ಮಾಡಬೇಕೆಂದಿದ್ದೀರಿ ?

ವಿದ್ಯುಚ್ಛಕ್ತಿ ಮಂಡಲಿಯವರು ಸುಮಾರು ಮೂರು ಕೋಟಿಯಷ್ಟು ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದರೂ ವ್ಯವಸಾಯಗಾರರಿಗೆ ಇನ್ನೂ ಸಕಾಲದಲ್ಲಿ ವಿದ್ಯುಚ್ಛಕ್ತಿ ಸಿಗುತ್ತಿಲ್ಲ. ಎಲ್ಲ ವ್ಯವಸಾಯಗಾರರಿಗೂ ಪೂರ್ಣವಾಗಿ ಯಾವಾಗ ವಿದ್ಯುಚ್ಛಕ್ತಿಯನ್ನು ಖಚಿತವಾಗಿ ಕೊಡುತ್ತಾರೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ವಿ. ಎನ್. ಪಾಟೀಲ್.—ಸರಕಾರದವರು ಎಂ.ಎಸ್.ಇ.ಬಿ.ಗೆ ಸಾಲ ಕೊಡುತ್ತಿರುವುದು ಶೇಕಡಾ ನಾಲ್ಕರ ಬಡ್ಡಿಯ ದರದಂತೆ ಎಲ್.ಐ.ಸಿ.ನಲ್ಲಿ ಸಾಲ ತೆಗೆದುಕೊಳ್ಳುವುದು ಶೇಕಡಾ 7 ರಷ್ಟು ಬಡ್ಡಿಮೇಲೆ ಮತ್ತು ಸರಕಾರ ಸಾಲ ತೆಗೆದುಕೊಳ್ಳುತ್ತಿರುವುದು ಶೇಕಡಾ ಎಂಟರಂತೆ. ಆದರೆ ಎಂ.ಎಸ್.ಇ.ಬಿ.ಗಾಗಿ ಇಷ್ಟು ಕಡಿಮೆ ದರದಲ್ಲಿ ಬಡ್ಡಿ ಕೊಡುವಾಗ ಅಗ್ರಿಕಲ್‌ಚರಿಸ್ಟ್‌ಗಾಗಿ ಕೊಡುವ ಐ. ಪಿ. ಸೆಟ್ಟುಗಳಮೇಲೆ ಕೊಡುವ ರೇಟನ್ನು ಕಡಿಮೆ ಮಾಡಲು ಕನ್‌ಸಿಡರು ಮಾಡುತ್ತೇವೆಂದು ಹೇಳಿದಿರಿ. ಇದನ್ನು ಕಡಿಮೆ ಮಾಡಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳಲು ಸರಕಾರಕ್ಕೆ ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ ? ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಟ್ಯಾಕ್ಸ್ ಜಾಸ್ತಿ ಮಾಡುತ್ತಿದ್ದರೂ ಕೊರತೆ ಇದೆ ಎಂದು ಹೇಳುತ್ತಿದ್ದಾರೆ. ಇದನ್ನು ಸರಿದೂಗಿಸಲು ಇಲ್ಲಿರುವ ಟಾಪ್ ಹೆವಿ ಅಡ್ಮಿನಿಸ್ಟ್ರೇಷನ್ ಹೆಚ್ಚಾಗಿರುವುದನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಿಲ್ಲವೇ ? ಎರಡನೆಯದು, ಬೋರ್ಡಿನವರು ಅಲ್ಲಲ್ಲಿ ಸಿಮೆಂಟು ಪೋಲುಗಳನ್ನು ತಯಾರು ಮಾಡುತ್ತಿದ್ದಾರೆ. ಇದರಲ್ಲಿ ಇವರು ಸರಿಯಾದ ಒಂದು ಸ್ಪೆಸಿಫಿಕೇಷನ್ ಕೂಡ ಕೊಟ್ಟಿರುತ್ತಾರೆ. ಒಂದೊಂದು ಪೋಲು ಕೂಡ 30 ಅಡಿ ಇರಬೇಕೆಂದು ಹೇಳಿದ್ದಾರೆ. ಚಿತ್ರದುರ್ಗದಲ್ಲಿ ಒಂದು ಕಡೆ ತಯಾರಾಗುವ ಪೋಲು 26 ಅಡಿಯಷ್ಟು ಇದ್ದರೂ ಅದನ್ನು 30 ಅಡಿಗಳ ಪೋಲು ಎಂದು ಲೆಕ್ಕಕ್ಕೆ ತೆಗೆದುಕೊಂಡು ಮಂಡಳಿಗೆ ಮೋಸ ಮಾಡುತ್ತಿರುವುದು ಗಮನಕ್ಕೆ ಬಂದಿದೆಯೇ ? ಹಾಗೆ ಬಂದಿದ್ದರೆ ಅವರಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮೀ ರಾಜ್ಯದಲ್ಲಿ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿ ಕೊಡಬೇಕೆಂದು ಸಬ್‌ಸಿಡೈಸ್ಡ್ ರೇಟಿನಂತೆ ಕೊಡುತ್ತೇವೆಂದು ಹೇಳಿದ್ದಾರೆ. ಇದರಂತೆ ಎಷ್ಟು ಕಡೆಗಳಲ್ಲಿ ಈ ರೇಟು ಕೊಡಲಾಗಿದೆ ಎಂದು ನೋಡುವಾಗ ಇದರಲ್ಲಿ ಮಿನಿಮಂ ರೇಟು ವರ್ಕ್ ಔಟು ಆಗುವುದಿಲ್ಲ. ಸರಿಯಾಗಿ ಲೆಕ್ಕ ಹಾಕಿ ಮಿನಿಮಂ ರೇಟು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri J. P. SARVESH. —Sir, small farmers below five acres are not at all benefited by this scheme of I. P. sets. What schemes have the Government formulated it order to benefit such raiyats ?

Secondly, wherever there is rural electrification, the Harijan localities are not at all electrified —the S.C. and S.T. tandas are not electrified.

ಶ್ರೀ ಎನ್. ಎ. ಚನ್ನೇಗೌಡ.—ವಿದ್ಯುಚ್ಛಕ್ತಿ ಮಂಡಳಿಯ ಅದಕ್ಷತೆಯಿಂದ ಇಲ್ಲಿ ಬರುವ ವರಮಾನ ಕಡಿಮೆಯಾಗುತ್ತಿದೆ. ಇಂತಹ ಅಧಿಕಾರಿಗಳಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ನಮ್ಮ ತುಮಕೂರು ಜಿಲ್ಲೆ ಬಳಿ ಕ್ಯಾತಸಂದ್ರ, ಗುಳೂರು ಹತ್ತಿರ 4.6 ಕೆ. ವಿ. ಲೈನು ಎಳೆಯಲು 1959 ರಲ್ಲಿ ಸುಮಾರು ನಲವತ್ತು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿ ಇದನ್ನು ಮುಗಿಸುವುದರಲ್ಲಿದ್ದಾರೆ. ಆದರೆ ಇದೇ ಲೈನಿನಲ್ಲಿರುವ ಮೂರು ಹಳ್ಳಿಗಳಲ್ಲಿ ಈ ಲೈನಿನ ದಾರಿಯೂ ಬರುತ್ತಿರುವುದರಿಂದ ಇಲ್ಲಿಗೂ ದೀಪಗಳನ್ನು ಕೊಟ್ಟರು. ಆದರೆ ಇಲ್ಲಿ ಪಂಚಾಯತಿಯವರು ಶೇಕಡಾ 18ರಷ್ಟು ದರ ನಿಗದಿ ಮಾಡಿ ಇದರಲ್ಲಿ ಶೇಕಡಾ ಹತ್ತರಷ್ಟು ರಿಬೇಟು ಕೊಡುತ್ತೇವೆ ಎಂದು ಹೇಳಿದ್ದಾರೆ. ಹೀಗೆ ಇಷ್ಟು ವ್ಯತ್ಯಾಸಗಳು ರೇಟಿನಲ್ಲಿರಲು ಕಾರಣವೇನು ?

Sri B. B. SAYANAK.—The Electricity Board is recovering minimum charges now-a-days monthly. Formerly, this minimum charge was annually recovered. In our area, we are not using pumpsets for six months in the year. Therefore, I am requesting the Government to recover the minimum charges annually.

Secondly, the R.C.C. poles are purchased by the Government at 25 per cent more than at the ccst which the M.S.E.B.can produce.

ಶ್ರೀ ಪಿ. ವೆಂಕಟಗಿರಿಯಪ್ಪ.—ವಿದ್ಯುತ್ ಪಂಪು ಸೆಟ್ಟುಗಳನ್ನು ಹಿಂದೆ ಕೊಟ್ಟಾಗ ಸುಮಾರು ಹತ್ತು ಪರ್ಸೆಂಟು ಹಾಗೂ ಹನ್ನೆರಡು ಪರ್ಸೆಂಟಿನಷ್ಟು ರೇಟುಗಳು ಇತ್ತು. ಈಗ ಒಬ್ಬ ರೈತ ಒಂದು ಪಂಪು ಸೆಟ್ಟು ಹಾಕಿಕೊಳ್ಳಬೇಕಾದರೆ ಸುಮಾರು ಮೂರು ನಾಲ್ಕು ಸಾವಿರ ರೂಪಾಯಿ ಖರ್ಚು ಮಾಡಿ ಪಂಪುಗಳನ್ನು ಹಾಕಿಸಬೇಕಾಗುತ್ತದೆ. ಅಲ್ಲದೆ ರೈತರು ಪಂಪು ಸೆಟ್ಟುಗಳನ್ನು ವರ್ಷದ ಪೂರ್ತಿ ಕಾಲ ಉಪಯೋಗಿಸಲು ಆಗುವುದಿಲ್ಲ. ಸುಮಾರು ಎಂಟು ತಿಂಗಳ ಕಾಲ ಮಳೆ ಬರುತ್ತೆ ಮತ್ತು ವ್ಯವಸಾಯದ ಕೆಲಸದಲ್ಲಿರುತ್ತಾರೆ. ಕೇವಲ ಮೂರು ಅಥವಾ ನಾಲ್ಕು ತಿಂಗಳ ಕಾಲ ಅವರು ಪಂಪುಗಳನ್ನು ಉಪಯೋಗಿಸಬಹುದು. ಮೂರು ಅಥವಾ ನಾಲ್ಕು ಮೈಲಿಗಳ ಒಂದು ಲೈನು ಎಳೆದರೂ ಅದರಲ್ಲಿ ಬರುವ ಬಾವಿಗಳಿಗೆ ಪವರು ಸಿಗುತ್ತದೆ. ಈಗ ಒಂದು ಬಾವಿ ತೆಗೆಯಬೇಕಾದರೆ ಇದರ ಖರ್ಚು ಸುಮಾರು 15 ಸಾವಿರದವರೆಗೆ ಬರುತ್ತದೆ. ಇದರಲ್ಲಿ ಕರೆಂಟು ಚಾರ್ಜು ಸುಮಾರು 50, 60 ಅಥವಾ ನೂರು ರೂಪಾಯಿಗಳವರೆಗೆ ಬರುತ್ತದೆ. ಇಷ್ಟು ಹೆಚ್ಚು ಖರ್ಚು ಮಾಡಲು ರೈತರಿಗೆ ಶಕ್ತಿ ಇರುವುದಿಲ್ಲ. ಹತ್ತು ಸಾವಿರ ರೂಪಾಯಿ ಖರ್ಚು ಮಾಡಿ ಒಂದು ಬಾವಿ ತೆಗೆಸಿದ ರೈತರಮೇಲೆ ಹೆಚ್ಚು ತೆರಿಗೆ ಹಾಕಿದರೆ ಅವನು ಕೊಡಲು ಸಾಧ್ಯವಿಲ್ಲ. ಹೀಗೆ ಜಾಸ್ತಿ ಮಾಡಿರುವ ರೇಟನ್ನು ಕಡಿಮೆ ಮಾಡುವುದು ನ್ಯಾಯ ಎಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಯಲಿಲ್ಲವೇ ?

ಶ್ರೀ ಕೆ. ಪಿ. ಚಿಕ್ಕೇಗೌಡ.—ಇಲ್ಲಿರುವ ಚೇರ್ಮನ್ನರು ಮತ್ತು ಇತರ ಚೀಫ್ ಇಂಜಿನೀಯರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಇಲ್ಲಿರುವ ಸದಸ್ಯರು ಹಾಗೂ ಇತರರು ಸರಕಾರಕ್ಕೆ ಎಷ್ಟು ಬುದ್ಧಿವಾದಗಳನು ಹೇಳಿದರೂ ಕೇಳುತ್ತಿಲ್ಲ. ಇಂತಹ ಮಂಡಳಿಯ ಅಧಿಕಾರ ತೆಗೆದು ಇದನ್ನು ಸರಕಾರವೇ ಕಂಟ್ರೋಲ್‌ನಲ್ಲಿ ತೆಗೆದುಕೊಳ್ಳುವಂತೆ ಏಕೆ ಏರ್ಪಾಡು ಮಾಡಬಾರದು ?

ಶ್ರೀ ಮಹದೇವ ಜಿ. ಬಣಕಾರ್.—ರಾಜ್ಯದಲ್ಲಿ ಇಂದು ಪಂಪು ಸೆಟ್ಟುಗಳಿಗಾಗಿ ಹೆಚ್ಚು ಆಸಕ್ತಿ ಇದೆ ಎಂದು ಸುಮಾರು 95 ಸಾವಿರ ಪಂಪು ಸೆಟ್ಟುಗಳಿಗೆ ಸರ್ವಿಸ್ ಕೊಟ್ಟಿದ್ದಾರೆ. ಇದರಿಂದ ಬೋರ್ಡಿಗೆ ರೆವಿನ್ಯೂ ಕೂಡ ಹೆಚ್ಚಾಗಿ ಬರುತ್ತಿದೆ. ಆದರೆ ಬಡವರಾಗಿರುವ ರೈತರಿಗೆ ಹೆಚ್ಚು ಹೊರೆಯನ್ನು ಪಂಪು ಸೆಟ್ಟುಗಳಮೇಲೆ ಹಾಕುವುದು ಸರಿಯಲ್ಲ. ಇದಕ್ಕಾಗಿ ಇದನ್ನು ರದ್ದು ಮಾಡುವ ಅಭಿಪ್ರಾಯ ಸರಕಾರದಲ್ಲಿದೆಯೆ ?

ಶ್ರೀ ಸದಾಶಿವಪ್ಪ ಪಾಟೀಲ್.—ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನವರು ಎಲೆಕ್ಟ್ರಿಸಿಟಿ ಒದಗಿಸುವ ಕಾಲಕ್ಕೆ ಮುನಿಸಿಪಾಲಿಟಿಗಳವರು ಹೆಚ್ಚಾಗಿ ಸ್ಕ್ರೂ ಟೈಪ್ ಬಲ್ಬುಗಳನ್ನು ಉಪಯೋಗಿಸ

ಬೇಕೆಂದು ಹೇಳಿದ್ದರು. ಅವರಂತೆ ಒದಗಿಸುತ್ತೇವೆ ಎಂದು ಆಶ್ವಾಸನೆ ಕೂಡ ಕೊಟ್ಟಿದ್ದರು. ಎಷ್ಟೋ ಕಡೆಗಳಲ್ಲಿ ಇಂತಹ ಸ್ಕ್ರೂ ಟೈಪ್ ಬಲ್ಬುಗಳನ್ನು ಒದಗಿಸಿಲ್ಲ. ಇವಕ್ಕಾಗಿ ಒದಗಿಸಿರುವ ಹಣ ಏನಾಗುತ್ತದೆ! ಗುಲ್ಬರ್ಗಾದಲ್ಲಿರುವ ಅಧಿಕಾರಿಗಳನ್ನು ಕೇಳಿದರೆ ಇಲ್ಲಿ ಎಲ್ಲ ಕೆಲಸ ಮಾಡುವುದು ಮಂಡಳಿಯವರು ಎಂದು ಅವರಮೇಲೆ ಬ್ಲೇಂ ಹಾಕುತ್ತಾರೆ. ಈಗಲಾದರೂ ಮುಖ್ಯ ಮಂತ್ರಿಗಳು ಇವರ ಕಡೆಗೆ ಗಮನ ಕೊಡುತ್ತಾರೆಯೇ!

ಶ್ರೀ ಡಿ. ಎಸ್. ಗೌಡ.—ನಮ್ಮಲ್ಲಿ ಹೇರಳವಾದ ವಿದ್ಯುಚ್ಛಕ್ತಿ ಏನೋ ಇದೆ. ಆದರೆ ರೈತ ಒಂದು ಬಾವಿ ತೆಗೆದು ವಿದ್ಯುಚ್ಛಕ್ತಿ ಪಡೆಯಬೇಕಾದರೆ ಸುಮಾರು ಒಂದು ವರ್ಷ ತಿರುಗಿ ಅದನ್ನು ಪ್ರಯಾರಿಟಿ ರೀತಿಯಲ್ಲಿ ಪಡೆಯಬೇಕಾಗಿದೆ. ಆದರೆ ಇದರಿಂದ ವ್ಯವಸಾಯದ ಅಭಿವೃದ್ಧಿ ಮಾಡಬೇಕೆಂದು ಯಾವ ಒಂದು ನೀತಿ ಇದೆಯೋ ಅದಕ್ಕೆ ತದ್ವಿರುದ್ಧವಾಗುತ್ತದೆ. ನಮ್ಮಲ್ಲಿರತಕ್ಕ ಹೇರಳವಾದ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಜನಕ್ಕೆ ಅನುಕೂಲ ಮಾಡಿ ಕೊಡಬೇಕಾದರೆ 5 ಹೆಚ್. ಪಿ. ನಿಂದ 50 ಹೆಚ್. ಪಿ ಯವರೆಗೆ ಕರೆಂಟು ಕೊಡಲು ಆಯಾ ರೈತರ ಇರುವ ತಾಲ್ಲೂಕುಗಳನ್ನೇ ಒಂದು ಕೇಂದ್ರವಾಗಿ ಮಾಡಿಕೊಂಡು ಅರ್ಜಿಗಳನ್ನು ಮಂಜೂರು ಮಾಡಿದರೆ ಕೇವಲ ಒಂದೆರಡು ಗಂಟೆಗಳಲ್ಲೇ ರೈತರಿಗೆ ಅವರ ಕೆಲಸಗಳಾಗುತ್ತವೆ ಮತ್ತು ರೈತರು ಕರೆಂಟನ್ನು ಬೇಗ ಪಡೆಯಲು ಸಹಾಯವಾಗುತ್ತದೆ. ಇದಕ್ಕಾಗಿ ವಿದ್ಯುತ್ ಹಂಚುವ ಕೇಂದ್ರಗಳನ್ನು ಆಯಾ ತಾಲ್ಲೂಕುಗಳಲ್ಲಿ ಇಡುವ ವಿಚಾರ ಪರಿಶೀಲಿಸುತ್ತೀರಾ ? ಹೀಗೆ ಮಾಡಿದರೆ ಒಂದೆರಡು ದಿನಗಳಲ್ಲೇ ಪವರು ಸಿಗುತ್ತದೆ. ಇದನ್ನು ವಿಚಾರ ಮಾಡುತ್ತೀರಾ!

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎದುರು ಪಕ್ಷದ ಸದಸ್ಯರು ಮಾಡುವ ಸಲಹೆಗಳಿಗೆ ತಾವು ಮಣಿದು ಇದರಲ್ಲಿ ವಿಶೇಷ ರಿಯಾಯತಿ ಕೊಡದೇಇದ್ದರೂ ತಮ್ಮ ಪಕ್ಷದವರಿಂದ ಬಂದಿರುವ ಅಭಿಪ್ರಾಯಗಳನ್ನು ತೆಗೆದುಕೊಂಡು ರೈತರ ಹಿತದೃಷ್ಟಿಯಿಂದ ತೀರ್ಮಾನ ತೆಗೆದುಕೊಳ್ಳುತ್ತೀರಾ? ಆ ತೀರ್ಮಾನವನ್ನು ಇನ್ನೆಷ್ಟು ದಿನಗಳಲ್ಲಿ ತೆಗೆದುಕೊಳ್ಳುತ್ತೀರಿ! ಇದನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೀರಾ!

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ಪಂಪು ಹೌಸ್‌ಗೆ ಇನ್ಸುಲೇಷನ್ ಮಾಡುವ ಕೆಲಸ ಲೋಕಲ್ ಕಂಟ್ರಾಕ್ಟರ್ಸ್ ಕೈಕೆಳಗೆ ಇದೆ. ಈ ಸಣ್ಣಪುಟ್ಟ ಕೆಲಸಗಳನ್ನೆಲ್ಲಾ ಅವರನ್ನು ಹಿಡಿದು ಮಾಡಿಸಬೇಕು ಎಂದರೆ ಕಷ್ಟ. ಈಗ ಆ ಕಂಟ್ರಾಕ್ಟರುಗಳು ಎಲೆಕ್ಟ್ರಿಸಿಟಿ ಬೋರ್ಡ್ ಕೈಕೆಳಗೆ ಇಲ್ಲ. ಆದುದರಿಂದ ಕೊನೇ ಪಕ್ಷ ಆ ಕಂಟ್ರಾಕ್ಟರುಗಳನ್ನು ಎಲೆಕ್ಟ್ರಿಸಿಟಿ ಬೋರ್ಡ್‌ನವರ ಒಂದು ಅಧೀನಕ್ಕಾದರೂ ತೆಗೆದುಕೊಂಡು ಈ ತೊಂದರೆಯನ್ನು ತಪ್ಪಿಸಲು ಸೂಕ್ತ ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತೀರಾ!

1-30 P.M.

ಶ್ರೀ ಕೆ. ಹೆಚ್. ಶ್ರೀನಿವಾಸ.—ಸ್ವಾಮಿ, ವಿದ್ಯುಚ್ಛಕ್ತಿ ಸೌಲಭ್ಯವನ್ನು ಒದಗಿಸುವುದರಲ್ಲಿ ಆಗತಕ್ಕಂಥ ವಿಳಂಬವನ್ನು ತಪ್ಪಿಸುವ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ, ಡಿವಿಷನ್ ಮಟ್ಟದಲ್ಲಿ ಸಾರ್ವಜನಿಕ ಪ್ರತಿನಿಧಿಗಳಿಂದ ಕೂಡಿರತಕ್ಕಂಥ ಒಂದು ಸಲಹಾ ಮಂಡಲಿಯನ್ನು ಮಾಡಬೇಕೆಂದು ಸರ್ಕಾರ ಪರಿಶೀಲಿಸುತ್ತಾ ಇರುವುದು ನಿಜವೇ ? ಅದನ್ನು ತೀವ್ರಗತಿಯಲ್ಲಿ ಮಾಡುತ್ತೀರಾ ?

ಶ್ರೀ ಎಸ್. ಭೀಮಣ್ಣ.—ಸ್ವಾಮಿ, ರಾಜ್ಯದಲ್ಲಿ ಎಷ್ಟು ನದಿಗಳಲ್ಲಿ ನೀರು ಹರಿಯುತ್ತದೆ! ಅಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳುವ ದೃಷ್ಟಿಯಿಂದ ಅಲ್ಲಿ ನಾಲೆಗಳಿಗೆ ಎಲೆಕ್ಟ್ರಿಸಿಟಿ ಕೊಡುತ್ತೀರಾ ? ಅದನ್ನು ಈ ವರ್ಷವೇ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅನೇಕ ಮಾನ್ಯ ಸದಸ್ಯರು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಕೆಲವು ವಿಚಾರಗಳನ್ನು ನೋಟ್ ಮಾಡಿಕೊಂಡಿದ್ದೇನೆ. ಎಲೆಕ್ಟ್ರಿಸಿಟಿ ಬೋರ್ಡ್ ಅಧಿಕಾರಿಗಳ ಜೊತೆಯಲ್ಲಿ ಎಲ್ಲಾ ಚರ್ಚೆ ಮಾಡುತ್ತೇನೆ, ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ. ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ರೈತರಮೇಲೆ ಏನು ಹೆಚ್ಚು ಹೊರೆ ಇದೆಯೋ ಅದನ್ನು ಇಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದು ಇನ್ನು ಕೆಲವು ವರ್ಷ ಆಗುವುದಿಲ್ಲ, ಕೆಲವು ತಿಂಗಳು ಆಗುವುದಿಲ್ಲ, ಕೆಲವು ದಿವಸದಲ್ಲೇ ಪರಿಶೀಲನೆ ಮಾಡಿ ಒಂದು ನಿರ್ಣಯಕ್ಕೆ ಬರುತ್ತೇನೆ.

ಎರಡನೆಯದಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಕೇಳಿದ್ದಾರೆ. ಏನೆಂದರೆ ಈವೊತ್ತಿನ ದಿವಸ ಸರಾಸರಿ ಆಧಾರದಮೇಲೆ ಒಂದು ಪಂಪುಸೆಟ್‌ಗಳ ಸೌಲಭ್ಯವನ್ನು

(ಶ್ರೀ ವೀರೇಂದ್ರ ಪಾಟೀಲ್)

ದೊರಕಿಸಿಕೊಡಲು 3,000 ರೂಪಾಯಿ ಖರ್ಚಾಗುತ್ತದೆ ಅದನ್ನು ಇಳಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿದರು. ಇದನ್ನು ರಾಜ್ಯಸರ್ಕಾರದವರೂ ಪ್ರಯತ್ನ ಮಾಡುತ್ತಾರೆ, ಕೇಂದ್ರ ಸರ್ಕಾರದವರೂ ಪ್ರಯತ್ನ ಮಾಡಬೇಕು. ಮತ್ತು ನಮ್ಮ ಅಧಿಕಾರಿಗಳೂ ಸಹ ಮದ್ರಾಸಿನಲ್ಲಿ ಯಾವ ರೀತಿ ಕಡಿಮೆ ಮಾಡಿದ್ದಾರೆ ಎನ್ನುವುದನ್ನೂ ಸಹ ನೋಡುತ್ತಾರೆ. ಈವೊತ್ತಿನ ದಿವಸ ಪೋಲಿನ ಡ್ಯೂರಬಲಟಿ ನೋಡಿಕೊಂಡು ಮಾಡಬೇಕು. ಈವಾಗ ಬಲಗ್ ಪೋಲು, ಕಟ್ಟಿಗೆ ಪೋಲು ಉಪಯೋಗ ಮಾಡುತ್ತಾರೆ, ಅದು ಗಾಳಿಗೆ ತೂರಿಕೊಂಡು ಹೋಗುತ್ತವೆ. ಆದುದರಿಂದ, ಹೆಚ್ಚಿಗೆ ಸಿಮೆಂಟ್ ಪೋಲುಗಳನ್ನು ಉಪಯೋಗ ಮಾಡುತ್ತಿದ್ದೇವೆ, ಸ್ವಲ್ಪಮಟ್ಟಿಗೆ ಹೆಚ್ಚು ಖರ್ಚಾಗುತ್ತಾ ಇದೆ. ಪೋಲ್ ಮಾಡುವುದರಲ್ಲಿ ಬೆಲೆ ಏನಾದರೂ ಕಡಿಮೆ ಖರ್ಚಿನಲ್ಲಿ ಆಗುವುದಾದರೆ ಪ್ರಯತ್ನ ಮಾಡುತ್ತೇನೆ.

ಮೂರನೆಯದಾಗಿ ಮಾನ್ಯ ಕೃಷ್ಣನ್‌ರವರು ಸರ್ಕಾರದವರೇ ಸಬ್ಸಿಡಿ ಕೊಡಬೇಕು ಎಂದು ಹೇಳಿದರು. ಸಬ್ಸಿಡಿ ಬೇಕಾದರೆ ಮತ್ತಾವುದಾದರೂ ಬಾಬಿನಿಂದ ತೆಗೆದುಕೊಡಬೇಕಾಗುತ್ತದೆ. ಅದಕ್ಕೆ ಮತ್ತಾವ ಫಂಡ್ ಸಹ ಇಲ್ಲ. ಒಂದು ಕಡೆ ಸಬ್ಸಿಡಿ ಕೊಟ್ಟರೆ ಎರಡನೇ ಕಡೆ ಡೆವಲಪ್‌ಮೆಂಟ್ ಆಕ್ಟಿವಿಟಿ ಕಡಿಮೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಈವೊತ್ತು ರೂರಲ್ ಎಲೆಕ್ಟ್ರಿಫಿಕೇಷನ್‌ನಿಂದ ಐ.ಪಿ. ಸೆಟ್ಸ್‌ಗಳ ಸರ್ವೀಸ್‌ನಿಂದ ನಮಗೆ ಲಾಸ್ ಆಗುತ್ತಾ ಇದೆ. ಅವರಿಗೂ ಕೂಡ ಎಷ್ಟುಮಟ್ಟಿಗೆ ಸಹಾಯ ಮಾಡುವುದಕ್ಕೆ ಸಾಧ್ಯ ಇದೆಯೋ ಅದನ್ನು ವಿಚಾರ ಮಾಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ.

ಇನ್ನು ಕೆಲವು ಸದಸ್ಯರು ಕೇಳಿದರು, ಮದ್ರಾಸ್‌ಗೆ ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಕೊಡುತ್ತಿದ್ದಾರೆ ಎಂದು. ಈವೊತ್ತು ನಮ್ಮಲ್ಲಿ ಹೇರಳವಾಗಿ ಇದ್ದಾಗ ಆ ವಿದ್ಯುಚ್ಛಕ್ತಿಯನ್ನು ಪೂರ್ತಿಯಾಗಿ ಉಪಯೋಗ ಮಾಡಿಕೊಂಡು ಏನಾದರೂ ಲಾಭ ಪಡೆಯುವುದರಲ್ಲೂ ಜಾಣತನ ಇದೆ. ಇಷ್ಟಕ್ಕೆ ಕೊಟ್ಟು ತೆಗೆದುಕೊಳ್ಳಬೇಕು ಎಂದು ಹೇಳಿದರೆ ಅವರು ತೆಗೆದುಕೊಳ್ಳಲಾರದೇ ಹೋದರೆ, ಹೆಚ್ಚು ವಿದ್ಯುಚ್ಛಕ್ತಿಯನ್ನು ಇಟ್ಟುಕೊಂಡಿರುವುದಕ್ಕಾಗುವುದಿಲ್ಲ. ಅವರು ಮೊದಲು ಬಂದು ಕೇಳಿದಾಗ 9 ಪೈಸೆಯಂತೆ ಕೇಳಿದರು. ಈವೊತ್ತು ಅವರಲ್ಲೇ ಜಾಸ್ತಿ ಇರುವುದರಿಂದ ಅವರಿಗೆ ಬೇಕಾಗಿಲ್ಲ. ಆದುದರಿಂದ ಈ ದಿನ 4½—5 ಪೈಸೇಯಂತೆ ಕೊಟ್ಟಿದ್ದೇವೆ. ಅದೇ ರೀತಿ ಮಹಾರಾಷ್ಟ್ರದವರಿಗೂ ತಾತ್ಕಾಲಿಕವಾಗಿ ವಿದ್ಯುಚ್ಛಕ್ತಿ ಕೊಡುತ್ತಿದ್ದೇವೆ. ನಮ್ಮ ಜನತೆಗೆ ಅನ್ಯಾಯ ಮಾಡಿಕೊಂಡು ಎರಡನೆಯವರಿಗೆ ಕೊಡುತ್ತಾ ಇಲ್ಲ. ಸರ್‌ಪ್ಲಸ್ ಪವರ್ ಇದ್ದುದನ್ನು ಉಪಯೋಗಿಸಿಕೊಳ್ಳದೇ ಇದ್ದರೆ ಅಷ್ಟು ದುಡ್ಡು ಬರುವುದೂ ನಿಲ್ಲುತ್ತದೆ.

ಇನ್ನು ಶ್ರೀಮಾನ್ ರಾಮೇಗೌಡರು ಹೇಳಿದರು. ಒಬ್ಬ ರೈತ 42 ಯೂನಿಟ್ ಉಪಯೋಗಿಸಿಕೊಂಡಿದ್ದಾನೆ, ಅವನಿಗೆ ಬಿಲ್ ಬಂದಿರುವುದು, 12 ರೂಪಾಯಿ 87 ಪೈಸೇ ಛಾರ್ಜು ಬಂದಿರುತ್ತೆ ಎಂದು ಹೇಳಿದರು. ಮಿನಿಮಮ್ ಇದ್ದರೆ ಬಂದರೂ ಬರಬಹುದು. ಎಲೆಕ್ಟ್ರಿಸಿಟಿ ಬೋರ್ಡ್‌ನಲ್ಲಿ ಮಂತ್ಲಿ ಮಿನಿಮಮ್ ಹಾಕುತ್ತಾರೆ. ಅವರಿಗೆ ಇಯರ್ಲಿ ಮಿನಿಮಮ್ ಹಾಕಿ ಎಂದು ಶ್ರೀಮಾನ್ ಸೈನಿಕ್‌ರವರು ಕೇಳಿದರು. ಏತಕ್ಕೆಂದರೆ ಮಂತ್ಲಿ ಮಿನಿಮಮ್ ಹಾಕಿರುವುದರಿಂದ, ಬೇಸಿಗೆಯಲ್ಲಿ ಬಾವಿಯಲ್ಲಿ ನೀರು ಇಲ್ಲದೇ ಇರುವುದರಿಂದ ಕರೆಂಟ್ ಹೆಚ್ಚು ಉಪಯೋಗಿಸಿಕೊಂಡಿರುವುದಿಲ್ಲ, ಆದರೂ ಕರೆಂಟ್ ಚಾರ್ಜಸ್ ಕಟ್ಟಬೇಕಾಗುತ್ತದೆ. ಮಳೆಗಾಲದಲ್ಲಿ ಹೆಚ್ಚು ನೀರು ಬರುವುದರಿಂದ, ಅದರ ಉಪಯೋಗವೂ ಬಹಳ ಜಾಸ್ತಿಯಾಗುವುದರಿಂದ, ಹೆಚ್ಚು ಕರೆಂಟನ್ನು ಉಪಯೋಗಿಸಿಕೊಂಡಿರುತ್ತಾನೆ. ಇದಕ್ಕೆ ಮೊದಲಿಗಿಂತ 3—4 ಪಟ್ಟು ಛಾರ್ಜು ಜಾಸ್ತಿ ಬರುತ್ತದೆ. ಇದರಿಂದಾಗಿ ಅನೇಕ ಮಾನ್ಯ ಸದಸ್ಯರೂ ಕೂಡ ಇಯರ್ಲಿ ಮಿನಿಮಮ್ ಹಾಕಿ ಎಂದು ಕೇಳಿದರು. ಆದುದರಿಂದ ಮಂತ್ಲಿ ಮಿನಿಮಮ್ ಬಂದಿರುವುದರಿಂದ ಆ ರೀತಿ ಜಾಸ್ತಿಯಾಗಿರಬಹುದು ಎಂದು ಶ್ರೀ ರಾಮೇಗೌಡರಿಗೆ ಹೇಳುತ್ತೇನೆ. ಮತ್ತೆ ಯಾವುದೂ ಕಾರಣ ಇರಲಿಕ್ಕಿಲ್ಲ ಎಂದು ನನಗೆ ಅನಿಸುತ್ತದೆ.

ಇನ್ನು ಶ್ರೀಮಾನ್ ಭಾಸ್ಕರಶೆಟ್ಟಿಯವರು ಪಂಪುಸೆಟ್ಟಿನ ವಿಚಾರದಲ್ಲಿ ಒಂದು ಪಂಪುಸೆಟ್ಟಿಗೆ ವಿಧಿಸಲಾಗಿದ್ದ ಕನಿಷ್ಠ ದರ 16 ರೂಪಾಯಿ ಇದ್ದುದನ್ನು 24 ರೂಪಾಯಿಗೆ ಹೆಚ್ಚಿಸಿದ್ದಾರೆ, ಇದರಿಂದ 22 ಲಕ್ಷ ರೂಪಾಯಿ ಹೆಚ್ಚಿಗೆ ಬರುತ್ತದೆ ಎಂದು ಹೇಳಿದರು. ಯಾವ ರೀತಿ ಲೆಕ್ಕಾಚಾರ ಹಾಕಿ ಹೇಳಿದರೋ ಗೊತ್ತಿಲ್ಲ. ಮ್ಯಾಕ್ಸಿಮಮ್ ಹೆಚ್ಚಿಸುವುದರಿಂದ ಅನೇಕ ರೈತರಿಗೆ ತೊಂದರೆಯಾಗುತ್ತದೆ. 10-20 ಪರ್ಸೆಂಟ್ ಲಾಭ ಬರಬಹುದು. ಇದರಿಂದ ಬೆಂಗಳೂರು, ತುಮಕೂರು ಹಾಗೂ ಕೋಲಾರ ಜಿಲ್ಲೆಯವರಿಗೆ ಕಷ್ಟವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯವರೂ ಸಹ ನನ್ನ ಹತ್ತಿರ ಬಂದಿದ್ದರು. ಅವರು ನಾವು ಮಂತ್ಲಿ ಮಿನಿಮಮ್ ಕೊಡುತ್ತಿದ್ದೇವೆ, ಅದನ್ನು ಇಯರ್ಲಿ

ಮಿನಿಮಮ್ ಮಾಡಬೇಕು ಎಂದು ಕೇಳಿದರು. ಅನೇಕ ಹಳ್ಳಿಗಳಲ್ಲಿ ವ್ಯಾಲಿ ಇರುತ್ತದೆ ಅಲ್ಲಿ ಪಂಪು ಸೆಟ್ಟು ಹಾಕಿಕೊಂಡು ಒಬ್ಬೊಬ್ಬರು ನೀರನ್ನು 500 ಅಲ್ಲ, 800 ಅಲ್ಲ, 1,000 ರೂಪಾಯಿವರೆಗೆ ವಿದ್ಯುಚ್ಛಕ್ತಿ ಉಪಯೋಗಿಸುತ್ತಾರೆ. ಇದರಿಂದ ತೊಂದರೆ ಬರುವುದು ಬೆಂಗಳೂರು, ತುಮಕೂರು ಮತ್ತು ಕೋಲಾರ ಜಿಲ್ಲೆಯವರಿಗೆ ಮಾತ್ರ. ಮಂತ್ಲಿ ಮಿನಿಮಮ್ ಕಟ್ಟದೇ ಹೋದರೆ ಡಿಸ್‌ಕನೆಕ್ಷನ್ ಮಾಡುತ್ತಾರೆ. ಅವರ ಜೀವನ ಕಷ್ಟದ ಜೀವನ. ಬಾವಿಯಲ್ಲಿ ನೀರು ಇದ್ದು ಹೆಚ್ಚು ಬೆಳೆ ಬೆಳೆದರೆ ಅನುಕೂಲ, ಇಲ್ಲದಿದ್ದರೆ ತೊಂದರೆ. ಈಗ 7—8 ವರ್ಷದ ಕೆಳಗೆ ಎಲ್ಲಾ ಬಾವಿಗಳಲ್ಲೂ ನೀರು ಇರುತ್ತಿತ್ತು. ಆದರೆ ಅದೇ ಬಾವಿಗಳಲ್ಲಿ ನೀರು ಇಲ್ಲ. ಮಳೆ ಕಡಿಮೆಯಾಗಿದೆ ಎಂದು ಹೇಳಿದರು, ಅದೂ ಒಂದು ಕಾರಣ. ಮತ್ತೆ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಬಾವಿಗಳನ್ನು ತೆಗೆದಿರುವುದರಿಂದ ಈ ಸಬ್‌ಸಾಯಿಲ್ ವಾಟರ್ ಒಳಗಡೆಯೇ ಹಂಚಿಹೋಗಿವೆ. ಆದುದರಿಂದ ಒಂದು ಗಂಟೆ, ಎರಡು ಗಂಟೆಯೂ ಕೂಡ ಉಪಯೋಗಿಸಲಿಕ್ಕೆ ನೀರು ಸಿಕ್ಕುವುದಿಲ್ಲ. ಆದರೂ ಮಿನಿಮಮ್ ಛಾರ್ಜ್ ಏನು ಇದೆಯೋ ಅದನ್ನು ಕಟ್ಟಬೇಕಾಗುತ್ತದೆ. ಆದ್ದರಿಂದ ಬಾವಿಯಲ್ಲಿ ಹೆಚ್ಚು ವಿದ್ಯುಚ್ಛಕ್ತಿಯನ್ನು ಉಪಯೋಗಮಾಡುವ ಸ್ಥಿತಿಯಲ್ಲಿಲ್ಲದಿದ್ದರೂ ಅನೇಕ ಜಿಲ್ಲೆಗಳಲ್ಲಿ ಹೆಚ್ಚು ಮಿನಿಮಮ್ ಛಾರ್ಜ್ ಕಟ್ಟಬೇಕಾಗುತ್ತದೆ.

ಇನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಮನೆಗಳಿಗೂ ಎಲೆಕ್ಟ್ರಿಸಿಟಿ ಕನೆಕ್‌ಷನ್ ಕೊಡಬೇಕು ಎಂದು ಹೇಳಿದರು. ಯಾವ ಊರಿಗೆ ಎಲೆಕ್ಟ್ರಿಸಿಟಿ ಕೊಡುತ್ತಾರೋ ಅಲ್ಲಿ ಮನೆಗೆ ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಏನೂ ಕಷ್ಟವಿಲ್ಲ. ಎಲೆಕ್ಟ್ರಿಸಿಟಿ ಕೊಡುವುದಕ್ಕೆ ನಮ್ಮಲ್ಲಿ ಅನುಕೂಲ ಇರುತ್ತದೆ. ಆ ರೀತಿ ಕನೆಕ್ಷನ್ ಕೊಡುವುದಕ್ಕೆ ಯಾರಾದರೂ ಹಿಂದು ಮುಂದು ನೋಡಿದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಎಲೆಕ್ಟ್ರಿಸಿಟಿ ಬೋರ್ಡ್ ಅಧಿಕಾರಿಗಳಿಗೆ ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಸರ್ವೇಶ್‌ರವರು ಹರಿಜನರ ಕಾಲೋನಿಗೆ ಎಲೆಕ್ಟ್ರಿಸಿಟಿ ಕೊಡಬೇಕೆಂದು ಹೇಳಿದ್ದಾರೆ. ಎಲ್ಲೆಲ್ಲಿ ಹರಿಜನರ ಕಾಲೋನಿಗೆ ಎಲೆಕ್ಟ್ರಿಸಿಟಿ ಕೊಟ್ಟಿಲ್ಲ ಅದು ಎಲೆಕ್ಟ್ರಿಸಿಟಿ ಬೋರ್ಡ್‌ನವರ ತಪ್ಪಲ್ಲ. ಏತಕ್ಕೆಂದರೆ ವಿದ್ಯುಚ್ಛಕ್ತಿ ಸರಬರಾಜು ಮಾಡುವಾಗ ಪಂಚಾಯಿತಿಯವರು ಹೇಳಿದಂತೆ ಎಷ್ಟು ಪೋಲ್ ಬೇಕೋ ಅಷ್ಟನ್ನು ಮಾತ್ರ ಕೊಡುತ್ತಾರೆ. ಇದು ಪಂಚಾಯಿತಿ ಜವಾಬ್ದಾರಿ. ಅದರಲ್ಲಿ ಪಂಚಾಯಿತಿ ಮೆಂಬರುಗಳು ತಮ್ಮ ಮನೆ, ತಮ್ಮ ಕೇರಿಗಳಲ್ಲಿ ಪೋಲು ಹಾಕಿಸಿಕೊಂಡು ಅನಂತರ ಹರಿಜನರ ಕೇರಿಗಳಿಗೆ ಕೊಡುತ್ತಾರೆ. ಇದರಿಂದ ಹರಿಜನ ಕೇರಿಗೆ ಸಿಕ್ಕುತ್ತಾ ಇಲ್ಲ. ಅದಕ್ಕಾಗಿ ಹರಿಜನ ಕೇರಿಗೆ ಕೊಡಬೇಕೆಂದು ಕಟ್ಟಪ್ಪಣೆ ಮಾಡುತ್ತಿದ್ದೇನೆ. ಈ ಸಭೆಯಲ್ಲಿ ಮಾನ್ಯ ಸದಸ್ಯರೂ ಕೂಡ ಹೇಳಿದ್ದಾರೆ. ನಾನೂ ಕೂಡ ಸಂಪೂರ್ಣವಾಗಿ ತತ್ವಶಃ ಒಪ್ಪುತ್ತೇನೆ. ಒಂದು ಊರಿಗೆ ಕೊಟ್ಟಮೇಲೆ ಮೊಟ್ಟಮೊದಲು ಹರಿಜನ ಕೇರಿಗೆ ಕೊಡಬೇಕಾದುದು ನಮ್ಮ ಕರ್ತವ್ಯ. ಅದಕ್ಕೆ ಪೂರ್ಣ ಸಹಾನುಭೂತಿಯನ್ನು ನಾನು ನೀಡುತ್ತೇನೆ.

ಹಳ್ಳಿಗಳಿಗೆ ವಿದ್ಯುತ್ತನ್ನು ಕೊಡುವಾಗ 18 ಪರ್ಸೆಂಟ್ ರಿಟರ್ನ್ ಬರಬೇಕೆಂದು ಕೇಳುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಅದು ಬರೀ ಕಾಗದದಲ್ಲಿ ಕುಳಿತುಕೊಂಡಿದೆ ಎಲ್ಲಿಯೂ ಆ ರೀತಿ ಪ್ರತಿಫಲ ಬರುತ್ತಿಲ್ಲ. 18 ಪರ್ಸೆಂಟ್ ಪ್ರಕಾರ ರಿಟರ್ನ್ ಬಂದರೆ ಇಷ್ಟೊಂದು ನಷ್ಟವಾಗತಕ್ಕ ಪರಿಸ್ಥಿತಿ ಇರುತ್ತಿರಲಿಲ್ಲ. ಮಿನಿಮಂ ಇಷ್ಟು ಬರಬೇಕು ಎಂದು ಒಂದು ಮಿನಿಮಂ ಹಾಕಿಕೊಂಡಿದ್ದಾರಾದರೂ ಅದು ಬರುತ್ತಿಲ್ಲ ಎನ್ನುವಂಥ ಮಾತನ್ನು ನಾನು ಹೇಳುತ್ತೇನೆ.

ಮಾನ್ಯ ನಯನಾರ್ ಅವರು ಮಂತ್ಲಿ ಬೇಡ, ಆನ್ಯುಯಲ್ ಮಾಡಿರಿ, ಎಂದು ಹೇಳಿದರು. ಆದರಿಂದ ಬಹಳಮಟ್ಟಿಗೆ ಜನರಿಗೆ ಅನುಕೂಲವಾಗಿದೆ. ಅದನ್ನು ಪರಿಶೀಲನೆ ಮಾಡುವಂಥ ವಿಚಾರವನ್ನು ಇಟ್ಟುಕೊಂಡಿದ್ದೇವೆ.

ಹಿಂದಿನ ಕಾಲದಲ್ಲಿ ಬಹಳ ಮಟ್ಟಿಗೆ ನಷ್ಟವಾಗುತ್ತಿರಲಿಲ್ಲ. ಈ ಹೊತ್ತು ಏಕೆ ನಷ್ಟವಾಗುತ್ತಿದೆ ಎಂದು ಕೇಳುತ್ತಿದ್ದಾರೆ. ಅಂದಿಗೂ, ಇಂದಿಗೂ ಲೈನ್ ಮೆಟೀರಿಯಲ್, ಲೇಬರ್ ಕಾಸ್ಟ್, ಮೇಂಟೆನೆನ್ಸ್ ಕಾಸ್ಟ್ ಎಲ್ಲ ಬಹಳ ಹೆಚ್ಚಾಗಿದೆ, ಹೆಚ್ಚಾಗುತ್ತಿದೆ. ಆದರಿಂದ ಈ ರೀತಿ ಬರುತ್ತಿದೆ.

ಅನೇಕ ಮಾನ್ಯ ಸದಸ್ಯರು ಮೇಲ್ಮನೆಯಲ್ಲಿಯೂ ಮತ್ತು ಇಲ್ಲಿಯೂ ಕಾಸ್ಟ್ ಪರ್ ಯೂನಿಟ್ ಎಷ್ಟು ಆಗುತ್ತದೆ ಎಂದು ಕೇಳಿದ್ದಾರೆ. ನಾವು ನೆರೆ ಪ್ರಾಂತಗಳಿಗೆ ನಮ್ಮ ವಿದ್ಯುಚ್ಛಕ್ತಿಯನ್ನು ಮಾರುತ್ತಿದ್ದೇವೆ. ಪರಿಸ್ಥಿತಿ ಹೀಗಿರುವಾಗ ನಮ್ಮ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟಿದೆ ಎನ್ನುವುದನ್ನು ಹೇಳಿದರೆ ನಮ್ಮ ಒಳಗುಟ್ಟು ಹೇಳಿದಂತಾಗುತ್ತದೆ. ಅದಕ್ಕಾಗಿ ರಾಜ್ಯದ ಹಿತದೃಷ್ಟಿಯಿಂದ ಅದನ್ನು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

Sri H. N. NANJE GOWDA.—May I know whether money is given to the State by the Centre ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಒಂದು ಪ್ರಶ್ನೆ ಕೇಳಿದ್ದಾರೆ. ಈಚೆಗೆ ಕೇಂದ್ರ ಸರ್ಕಾರದವರು ಒಂದು ಎಲೆಕ್ಟ್ರಿಕ್ ಕಾರ್ಪೊರೇಷನ್ ಮಾಡಿ 100—105 ಕೋಟಿ ರೂಪಾಯಿ ಬಂಡವಾಳ ಹಾಕಬೇಕು ಎಂದು ವಿಚಾರ ಮಾಡಿದ್ದಾರೆ. ಅದನ್ನು ಮಾಡಿದಮೇಲೆ ಅದರಿಂದ ಪ್ರಯೋಜನ ಪಡೆಯಬೇಕೆಂಬ ವಿಚಾರ ಮಾಡಿಕೊಂಡಿದ್ದೇವೆ. ಇನ್ನೂ ಆ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಿಲ್ಲ. ಅದು ಬಂದಾಗ ಇನ್ನೂ ಹೆಚ್ಚಿಗೆ ಅನುಕೂಲವಾಗಬಹುದು ಎಂದೆನ್ನಿಸುತ್ತದೆ.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಈ ರಾಜ್ಯದಲ್ಲಿ ಹಲವಾರು ತಿಂಗಳಿಂದ ಸಹಸ್ರಾರು ಜನ ಸತ್ಯಾಗ್ರಹ ಮಾಡಿದ್ದಾರೆ, ಈ ಸಭೆಯಲ್ಲಿ ಎರಡು ದಿವಸಗಳಿಂದ ಚರ್ಚೆಯಾದಮೇಲೂ ಮಾನ್ಯ ಮುಖ್ಯ ಮಂತ್ರಿಯವರು ನೀರಾವರಿ ಪಂಪ್ ಸೆಟ್‌ಗಳಿಗೆ ಏನು ರಿಯಾಯಿತಿ ಕೊಡಲಾಗುತ್ತದೆ ಎನ್ನುವುದನ್ನು ಕರಾರುವಾಕ್ಕಾಗಿ ಹೇಳದೆ ಜಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಂಶಯ ಬೇಡ. ನಾನು ಜಾರುವಂಥ ಮಾತು ಕೊಡುವುದಿಲ್ಲ. ನಾನು ಯಾವಾಗ ಮಾನ್ಯ ಸಭೆಗೆ ಯಾವುದಾದರೂ ವಿಚಾರ ಹೇಳಿದ್ದೇನೆ, ಅದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತೇನೆ. ಈಗ ಹೊರೆ ಹೆಚ್ಚಾಗಿರುವುದನ್ನು ಯಾವ ರೀತಿ ಕಡಿಮೆ ಮಾಡಬೇಕೆಂಬ ವಿಚಾರ ಮಾಡುತ್ತಿದ್ದೇನೆ. ಕಡಮೆ ಮಾಡುವಂಥ ಮನಸ್ಸು ನನಗೆ ಇದೆ ಎಂದು ಹೇಳಿದಾಗ ಬಹುಶಃ ಇಷ್ಟರವರೆಗೆ ಏನಾದರೂ ಮಾತು ಕೊಟ್ಟು ಹಿಂದೆ ಹೋಗಿಲ್ಲ. ಹಿಂದೆ ಹೋದರೆ ಮುಂದಿನ ಅಸೆಂಬ್ಲಿ ಅಧಿವೇಶನಕ್ಕೆ ಬಂದಾಗ ತಾವು ಕೇಳಬಹುದು. ಇಲ್ಲಿ ನಡೆದಂಥ ಚರ್ಚೆಗೆ ಹೆದರಿ, ಚಳುವಳಿಗೆ ಹೆದರಿ, ಸತ್ಯಾಗ್ರಹಕ್ಕೆ ಹೆದರಿ ಮಾಡುತ್ತೇನೆ ಎನ್ನುವ ಮಾತನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಅನೇಕ ಮಾನ್ಯ ಸದಸ್ಯರು ಹೇಳಿದಹಾಗೆ ಈಗ ವಿಶೇಷವಾಗಿ ತುಮಕೂರು, ಬೆಂಗಳೂರು ಮತ್ತು ಕೋಲಾರ ಜಿಲ್ಲೆಯಲ್ಲಿ ತೊಂದರೆ ಇರುವುದನ್ನು ನಾನೆ ನೋಡುತ್ತಿದ್ದೇನೆ. ಅಲ್ಲಿಯ ಜನರಿಗೆ ಅದನ್ನು ಬಿಟ್ಟರೆ ಬೇರೆ ಜೀವನವೇ ಇಲ್ಲ. ಅಂಥ ಜನರಿಗೆ ಹೆಚ್ಚಿನ ತೊಂದರೆಯಾಗುತ್ತಿದೆ ಎಂದು ಮನವರಿಕೆಯಾಗಿರುವುದರಿಂದ ನಾನೇ ವಾಲಂಟೀಯರಾಗಿ ಹೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಮುಖ್ಯ ಸಚಿವರು ಮಾತನಾಡುತ್ತ, ನಿಮಗೆ ಹೆದರಲಿಲ್ಲ, ನಿಮ್ಮ ಮಾತಿಗೆ ಹೆದರಲಿಲ್ಲ ನಿಮ್ಮ ಚಳುವಳಿಗೆ ಹೆದರಲಿಲ್ಲ ಎನ್ನುವ ಮಾತುಗಳನ್ನು ಹೇಳಿದರು. ಇಂಥ ಮಾತುಗಳು ನಿಯಮಕ್ಕೆ ವಿರೋಧವಾದುದರಿಂದ ಅವುಗಳನ್ನು ತೆಗೆದುಹಾಕಬೇಕೆಂದು ನನ್ನ ಕ್ರಿಯಾಲೋಪ, ಸ್ವಾಮಿ.

Mr. SPEAKER.—There is no point of order. I think he has replied I shall put the motion to the House.

Sri S. SIVAPPA.—There is no motion.

Mr. SPEAKER.—The hon. Member has given a substitute motion under rule 279. I have to put it to the vote of the House. His motion is :

> " That this House expresses its deep concern over the imposition of surcharge from 13th April 1969 and requests the Board to revise its decision. "

Sri S. SIVAPPA.—Before putting it to vote, we have made a specific point. I want the Government to answer that.

Mr. SPEAKER.—The debate started on the motion moved by the Chief Minister. Rule 279 reads thus.

> " A motion that the policy or situation or statements or any other matter be taken into consideration shall not be put to the

vote of the Assembly, but the Assembly shall proceed to discuss such matter immediately after the mover has concluded his speech and no further question shall be put at the conclusion of the debate at the appointed hour unless a member moves a substantive motion in appropriate terms to be approved by the Speaker and the vote of the Assembly, shall be taken on such motion. "

The motion was moved by the Hon. Chief Minister and the hon. Member Sri Nagappa immediately moved a substitute motion. Both the motions were before the House; they were debated together and reply was also given. If the reply of the Chief Minister is not satisfactory I cannot help it. That is the end of it.

ಶ್ರೀ ಎಸ್. ಶಿವಪ್ಪ.—ಈಗ ಮುಖ್ಯ ಮಂತ್ರಿಗಳು ನಿರ್ಣಯವೇನು ಸಭೆಯಮುಂದಿದೆ. ನಾಗಪ್ಪನವರ ನಿರ್ಣಯವೇನಿದೆ ಅದಕ್ಕೆ ಉತ್ತರ ಕೊಟ್ಟಿಲ್ಲ. ಆದುದರಿಂದ ಸಮಗ್ರ ರೀತಿಯಲ್ಲಿ ಉತ್ತರ ಕೊಡದಿರುವುದರಿಂದ, ಕೊಡುವುದರಲ್ಲಿ ವಿಫಲರಾಗಿರುವುದರಿಂದ, ಮುಖ್ಯ ಮಂತ್ರಿಗಳ ಹೇಳಿಕೆ ರೈತರಿಗೇನೂ ಪ್ರಯೋಜನವಾಗುವಂತಿಲ್ಲದಿರುವುದರಿಂದ, ಅಂಥ ಹೇಳಿಕೆ ಕೊಟ್ಟಿರುವುದರಿಂದ ಸುಮಾರು ಒಂದು ಲಕ್ಷ ರೈತರ ಹಿತವನ್ನು ಕಡೆಗಣ್ಣಿನಿಂದ ನೋಡಿರುವುದರಿಂದ ಅವರ ಹೇಳಿಕೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(Members of the Opposition withdrew)

Mr. SPEAKER.—The question is :

"That this House expresses its deep concern over the imposition of surcharge from the 13th April 1969 and further requests the Board to revise its decision."

The motion was negatived.

The debate on the Budget of the M.S.E.B. is concluded. Now Questions and Answers.

STARRED QUESTIONS

(to which oral answers were given)

Interruption in supply of Electricity in Jagalur Taluk

94. Sri J. R. HALASWAMY (Jagalur).—

Will the Chief Minister be pleased to state :—

(a) whether it was come to their notice that the ryots and people of Jagalur taluk are being inconvenienced due to the frequent stoppage of electricity in the said taluk ;

(b) if so, the action taken by them in this behalf ;

(c) the places from which electricity is being supplied to Jagalur taluk ?